MYSORE LEGISLATIVE ASSEMBLY

THIRTIETH DAY.

Saturday, 4th April 1959.

The House met in the Assembly Hall, Vidhana Soudha, Bangalore, at Ten of the Clock.

MR. SPEAKER (SRI S. R. KANTHI, B.A., LL.B.) in the Chair.

Joint House Committee and Committee on Subordinate Legislation

Election results.

MR. SPEAKER.—In connection with the election to the Joint House Committee and Subordinate Legislation Committee, since the number of candidates is equal to the number of members to be elected from the Legislative Assembly the following members are declared to have been duly elected :—

FROM THE LEGISLATIVE ASSEMBLY TO JOINT HOUSE COMMITTEE.

Sriyuths—

1 D Abdul Rasheed.
2 G Bheemanna.
3 K T Dasappa.
4 R M Desai
5 N G Narasimhe Gowda
6 G N Puttanna.
7 Kundur Rudrappa.
8 Smt. Sushila Bai Hirachand Shah.

FROM THE LEGISLATIVE ASSEMBLY TO COMMITTEE ON SUBORDINATE LEGISLATION.

Sriyuths—

1 T Hanumiah.
2 M S Kamtikar.
3 H V Koujalgi.
4 C J Muckannappa.
5 M C Narasimhan.
6 M Ramappa.
7 T Tare Gowda.
8 B Vaikunta Baliga.

REPORT ON MYSORE ADMINISTRATION BY SRI A. D. GORWALA

(Debate continued.)

ಶ್ರೀ ಬಿ.ಡಿ. ಖೋತ್ (ಸದಲಗ).—ಗೋರವಾಲರವರು ತಮ್ಮ ವರದಿಯಲ್ಲಿ ಆಡಳಿತದ ಲೋಪ ದೋಷಗಳೇನು ಎಂಬುದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದನ್ನು ನಾನು ನಿನ್ನೆಯದಿವಸ ಸ್ವಲ್ಪ ಹೇಳಿದ್ದೇನೆ. ಪುನಃ ಅದನ್ನು ಹೇಳುತ್ತ ಹೋದರೆ ಅದು ಚರ್ವಿತ ಚರ್ವಣವಾದಂತಾಗುತ್ತದೆ. ಅದರಿಂದಾಗಿ ನಾನು ಕೇವಲ ಮುಖ್ಯವಾದ ವಿಷಯಗಳ ಬಗ್ಗೆ ಮೂರು ನಾಲ್ಕು ವಿಚಾರಗಳನ್ನು ಮಾತ್ರ ಇಲ್ಲಿ ಹೇಳಬೇಕೆಂದಿದ್ದೇನೆ. ಅವು ಯಾವುವೆಂದರೆ! ಮೊದಲನೆಯದಾಗಿ, Finance and Taxation, ಎರಡನೆಯದಾಗಿ Inefficient Administration, ಮೂರನೆಯದಾಗಿ Extravagance as against Retrenchment and economy—ಇವು ಮುಖ್ಯವಾದವು. ಇತರ ಸಣ್ಣ ಪುಟ್ಟ ವಿಚಾರಗಳ ಬಗೆಗೆ ಹೇಳುವುದನ್ನು ಬಿಟ್ಟು ಇವು ನಾಲ್ಕು ಮುಖ್ಯವಾದ ವಿಷಯಗಳ ಬಗ್ಗೆ ವಿಚಾರ ಮಾಡುವುದು ಸರಿ ಎಂದು ಕಾಣುತ್ತದೆ. ಇದರೊಳಗೆ ಮುಖ್ಯವಾದ ಪ್ರಶ್ನೆ ಇರುವುದು ಇಷ್ಟೇ. ನಮ್ಮ ಹಣ ಕಾಸಿನ ಪರಿಸ್ಥಿತಿ ಹೇಗಿದೆ, ಎಷ್ಟುಮಟ್ಟಿಗನ ಭದ್ರವಾಗಿದೆ ಎಂಬುದನ್ನು ಮೊದಲು ವಿಚಾರ ಮಾಡಲಿಕ್ಕೆ ಬೇಕಾಗಿದೆ. ನಮ್ಮ ರಾಜ್ಯದ ಫೈನಾನ್ಸು ಸೌಂಡಾಗಿದೆ ಎಂದು ಹೇಳಿದಂತಹ ಫೈನಾನ್ಸು ಮಿನಿಸ್ಟರವರಲ್ಲ ನನಗೆ ಪೂಜ್ಯ ಭಾವನೆಯಿದೆ. ಅವರ ಬುದ್ಧಿಗಾಗಿ ನನ್ನ ಅಡ್ಮಿರೇಷನ್ನು ಇದೆ. ಆದರೆ ಅವರ ಅಭಿಪ್ರಾಯಕ್ಕೂ ನನ್ನ ಅಭಿಪ್ರಾಯಕ್ಕೂ ವ್ಯತ್ಯಾಸವಿದೆ. ಅವರು ಫೈನಾನ್ಸನ್ನು ಹ್ಯಾಂಡಲು ಮಾಡುವ ವಿಚಾರ ಶುದ್ಧವಾಗಿದೆ ಎಂದು ಹೇಳಬಹುದೇ ವಿನಾ ಫೈನಾನ್ಸು ಸೌಂಡು ಆಗಿಲ್ಲ ಎಂದೇ ಹೇಳಬೇಕಾಗಿದೆ. ಏಕೆ ಇಲ್ಲ ಎನ್ನುವುದರ ಬಗೆಗೆ ಹೇಳಬೇಕಾದರೆ ಗೋರವಾಲ ರಿಪೋರ್ಟಿನಲ್ಲಿ ಅವರು ಸ್ಪಷ್ಟ ರೀತಿಯಾದ ಒಂದು ಚಿತ್ರವನ್ನು ಕೊಟ್ಟಿದ್ದಾರೆ. ಅದು ಪುಟ 21 ರಲ್ಲಿ ಹೀಗಿದೆ :

"The public debt of the Government of Mysore at the end of 1958-59 will be 117.81, made up of 28.45 loans from the public, 71.04 loans from the Centre, and 18·32

(ಶ್ರೀ ಬಿ. ಫಿ. ಜೋತ್)

borrowing from life insurance, savings bank, provident fund, etc. The corresponding total figures for 1959-60 and 1960-61 will be 135 and 154 respectively".

ಎಂದರೆ ಆ ವರ್ಷ 117-41 ಇದ್ದದ್ದು 135.54 ಆಗುತ್ತದೆ, ಮತ್ತು ಮುಂದಿನ ವರ್ಷ 154 ಆಗುತ್ತದೆ ಎಂದು ಹೇಳುತ್ತಾ ಇದರ ಲೆಕ್ಕಾಚಾರವನ್ನೂ ಕೊಟ್ಟಿದ್ದಾರೆ.

"The charges for interest, repayment, and sinking funds to the extent that is compulsory for these loans, rise from 10.30 in 1959-60 to 12.10 in 1960-61 and 13.85 in 1961-62. The return from the projects and schemes into which a good deal of the borrowing of the past has been put is not such as to cover these charges. Nor is there any hope, from the nature of the undertakings on which the money is being spent now, that there will be better results.

The debt position thus reinforces the need for economy, avoidance of unnecessary expenditure and obtaining full value for all money spent."

It is a note of warning. Though they are legally balancing the budgets still more or less they are deficit budgets.

ಇಷ್ಟನ್ನು ಹೇಳಿ ಜನ ಇಂಡಿಯಾ ಸರ್ಕಾರದಿಂದ ತೆಗೆದುಕೊಂಡಿರುವ ಖರ್ಚನ್ನೂ ಕೂಡ ಮುಂದೆ wipe off ಮಾಡುವ ಸೂಚನೆಯನ್ನು ಕೊಟ್ಟಿದ್ದಾರೆ ಮತ್ತು ಎಷ್ಟು ಜಾಗ್ರತೆಯಾಗಿ ಇದನ್ನೆಲ್ಲ ಮಾಡಬೇಕು ಎನ್ನುವ ಬಗೆಗೂ ಸೂಚನೆಯನ್ನು ಕೊಟ್ಟಿದಾರೆ. ಈಗ ನಮಗೆ ಬಂದಿರುವ ಮೂರು ಬಡ್ಜೆಟ್ಟುಗಳಲ್ಲಿ ಮೊದಲನೆಯದು ಡಿಫಿಸಿಟ್ಟು ಬಡ್ಜೆಟ್ಟು, ಅನಂತರ ಬಂದ ಎರಡು ವರ್ಷಗಳ ಬಡ್ಜೆಟ್ಟುಗಳು ಒಂದು ರೀತಿಯಾದ ಬ್ಯಾಲೆನ್ಸಿಂಗು ಬಡ್ಜೆಟ್ಟುಗಳಾಗಿದ್ದವು.

ಡೆಫಿಸಿಟ ಬಡ್ಜೆಟ್ಟಿಗೂ ಸರ್‌ಪ್ಲಸ್ಸು ಬಡ್ಜೆಟ್ಟಿಗ ಏನೇನು ಲಕ್ಷಣಗಳಿರಬೇಕೋ ಆ ರೀತಿಯಾಗಿ ಹೊಸ ವರ್ಷದ ಬಡ್ಜೆಟ್ಟಿನಲ್ಲಿ ಸರ್ಪ್ಲಸ್ಸು ಎನ್ನುವುದನ್ನು ತೋರಿಸಿಕೊಟ್ಟಿಲ್ಲ.

ಇದರಲ್ಲಿ ನಾಲ್ಕರಷ್ಟು ಕಡಮೆ ಅಥವಾ ಹೆಚ್ಚು ಬರುವುದು ಎನ್ನುವ ವಾದ ಮಾಡುತ್ತಿಲ್ಲ. ಒಟ್ಟು ವರ್ಷದೊಳಗೆ ವ್ಯಾಲ್ಯು ತೆಗೆದುಕೊಂಡರೆ ಅದರಲ್ಲಿ ರೂಪಾಯಿಗೆ ಹನ್ನೆರಡಾಣೆ ಅಥವಾ ಹದಿಮೂರು ಆಣೆಯಷ್ಟಾದರೂ ಪ್ರತಿಫಲವನ್ನು ತೋರಿಸಿದ್ದೀರಾ ಎಂದರೆ ಅದರಲ್ಲಿ ರೂಪಾಯಿನ ನಾಲ್ಕಾಣೆ ಭಾಗದಷ್ಟನ್ನೂ ಕೂಡ ತೋರಿಸಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರ.

ಆದರೆ, ಈ ಮೂರು ವರ್ಷಗಳಲ್ಲಿ ರೆವೆನ್ಯೂ ರಿಸೀಟ್ ಮತ್ತು ರೆವೆನ್ಯೂ ಎಕ್ಸ್‌ಪೆಂಡಿಚರನ್ನೂ ಮತ್ತು Capital Receipts and Capital Expenditure ಅನ್ನು ಹೋಲಿಸಿನೋಡಿದರೆ, ಈ ಮೂರು ವರ್ಷಗಳಲ್ಲೂ ಹೆಚ್ಚು ಕಡಮೆ ಡಿಫಿಸಿಟ್ ಬಡ್ಜೆಟ್ಟೇ ಇದೆಯೆಂದು ಹೇಳಬೇಕಾಗಿದೆ. ಆದ್ದರಿಂದ ಈ ಬಡ್ಜೆಟ್ ಮಾಡುವುದರಲ್ಲಿ ಹೆಚ್ಚಿನ ಬುದ್ಧಿವಂತಿಕೆಯಿಂದ ತಯಾರಿಸಿದ್ದಾಗಿದೆಯೆಂದು ಹೇಳಬಹುದೇ ವಿನಾ, ನಮ್ಮದು ಭದ್ರತೆಯಿಂದ ಕೂಡಿದ finance ಆಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನು Sound finance ಎಂದು ಹೇಳಬೇಕಾದರೆ, Normal Revenue ವಿನಲ್ಲಿ ಶೇಕಡ ಎಷ್ಟು ಭಾಗವನ್ನು ಸಾಲಕ್ಕೆ ತೆಗೆದಿಡಬೇಕೋ ಅಷ್ಟನ್ನು ತೆಗೆದಿಡಬೇಕಾದದ್ದು ಅವಶ್ಯಕ. ಅದನ್ನು ಮಾಡಬೇಕೆಂದು ಹೇಳುತ್ತೇನೆ. ಇದನ್ನೇ ಗೋರವಾಲರವರೂ ತಮ್ಮ ವರದಿಯಲ್ಲಿ ಹೇಳಿದ್ದಾರೆ. ಹೆಚ್ಚಿಗೆ ಸಾಲವನ್ನು ತೆಗೆದು ಖರ್ಚುಮಾಡುವುದಕ್ಕೆ ಬದಲು, un-productive ಐಟಂಗಳನ್ನು ಕೈಬಿಟ್ಟು, ಅವಶ್ಯಕವಾದ ಐಟಂಗಳನ್ನು ಮಾತ್ರ ಕೈಕೊಳ್ಳಬೇಕೆಂದು ಅವರು ಸೂಚನೆ ಮಾಡಿದ್ದಾರೆ. ಈ ಪ್ರಕಾರ ಮಾಡಿ, ಅವರು ನಮ್ಮ ಸಾಲವನ್ನು ಕಡಮೆಮಾಡಿಕೊಳ್ಳಲು ಸೂಚನೆ ಕೊಟ್ಟಿರುವುದು ಗ್ರಾಹ್ಯವಾದ ಅಂಶವೆಂದು ನಾನು ಭಾವಿಸುತ್ತೇನೆ.

ಅಲ್ಲದೆ, Public debt ಅನ್ನು ಅದಷ್ಟು ಮಟ್ಟಿಗೆ ಕಡಮೆಯಲ್ಲಿ ಇಟ್ಟುಕೊಳ್ಳಬೇಕೆಂಬುದೂ ಮುಖ್ಯ. ಮೊದಲನೆ ಮಹಾ ಯುದ್ಧದಿಂದಾಗಿ, ಎರಡನೆಯ ಮಹಾಯುದ್ಧದಿಂದಾಗಿ ಹೆಚ್ಚಿಗೆ ಪಬ್ಲಿಕ್ ಡೆಟ್ ಉಂಟಾದುದರ ಪರಿಣಾಮವಾಗಿ ಸೂರ್ಯ ಚಂದ್ರರು ಎಂದೂ ಮುಳುಗದಷ್ಟು ದೊಡ್ಡ ರಾಜ್ಯವಾದ ಒಂದು ದೇಶ ಕೊನೆಗೆ Third Rate Nation ಆಯಿತು. They became a debtor nation. ಈ ದೃಷ್ಟಿಯಿಂದ ನಮ್ಮ Public Debt ಹೆಚ್ಚಾಗಿ ಬೆಳೆಯಕೂಡದು. The loan that we raise must be in a certain proportion to our normal revenue and that percentage should be fixed. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಎಷ್ಟರಮಟ್ಟಿಗೆ ನಾವು ಸಾಲವನ್ನು ಹೊತ್ತುಕೊಳ್ಳಬಹುದು ಎಂಬುದನ್ನು ಪರಿಶೀಲನೆ ಮಾಡಬೇಕು.

ಮತ್ತೊಂದು ವಿಷಯವೇನೆಂದರೆ, Inefficiency in administration. ನಮ್ಮ ಸರ್ಕಾರದಲ್ಲಿ ರೇಟ್ ಲತೀಫ್‌ರು ತುಂಬಿದ್ದಾರೆಂದು ಪ್ರಸಿದ್ಧವಾಗಿದೆ. ಇದನ್ನು ಸರಿಪಡಿಸಬೇಕು.

ಆಮೇಲೆ, Extravagance as against economy and retrenchment ಅನ್ನು ಈ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ಇಲಾಖೆಗಳಲ್ಲೂ ಎಷ್ಟೆಷ್ಟು ರಿಟ್ರೆಂಚ್‌ಮೆಂಟ್ ಮಾಡಬಹುದೋ ಅಷ್ಟನ್ನು ಮಾಡಿಲ್ಲ. ನಮ್ಮ ಖರ್ಚಿನಲ್ಲಿ Exravagance ಇರಕೂಡದು. ಆದಷ್ಟು economy ಯ ಮೇಲೆ ದೃಷ್ಟಿಯಿಟ್ಟು ರಿಟ್ರೆಂಚ್‌ಮೆಂಟ್ ಮಾಡಬೇಕು. ಒಂದು ಉದಾಹರಣೆ ಹೇಳುವುದಾದರೆ, ನಮ್ಮಲ್ಲಿ ಕೌನ್ಸಿಲ್ ಇದೆ. ಇದನ್ನು ವಜಾಮಾಡಬಹುದು. I am of opinion that at least the Upper House should be abolished, if not the Lower House. ಈ ವಿಚಾರದಲ್ಲಿ ನಾನು ಒಂದು ನಿರ್ಣಯವನ್ನು ಕೂಡ ಕಳುಹಿಸಿದ್ದೆ. It was unfortunately not reached in the ballot. ಆದರೂ ಕೂಡ, ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ, ಆ ಕೌನ್ಸಿಲ್ಲನ್ನು ಇಟ್ಟುಕೊಂಡಿರುವುದಕ್ಕೆ ಬದಲು ಅದನ್ನು ವಿಸರ್ಜನೆ ಮಾಡುವುದು ಒಳ್ಳೆಯದು. You must

take a bold step and suspend the Council, because it is quite reundant, and undemocratic and uneconomical. ಅದನ್ನು ನಡೆಸುತ್ತಿರುವುದರಿಂದ ಹೆಚ್ಚಿಗೆ ಪ್ರಯೋಜನವೇನೂ ನಮಗಿಲ್ಲ.

ಅಧ್ಯಕ್ಷರು.—ಒಂದು ಮಾತು ನಾನು ಹೇಳುವುದೇನೆಂದರೆ, ಮೇಲ್ಮನೆಯನ್ನು ತೆಗೆದುಹಾಕಿದರೆ, how do you say there will be a saving? We are spending Rs. 2½ lakhs on the Council. If the Upper House is abolished, this House will have to be expanded.

Sri B. G. KHOT.—What benefit are we getting from that? ಅಲ್ಲದೆ, ಅದನ್ನು ವಜಾ ಮಾಡಿದರೆ ಇಲ್ಲಿ ಹೆಚ್ಚಿಗೆ ಆಗುತ್ತದೆಂದು ಹೇಗೆ ಹೇಳುತ್ತೀರಿ?

Dr. R. NAGAN GOWDA (Hospet).—Is an Hon'ble Member of this House free to talk about the abolition of another body the members of which are not in a position to defend themselves here.?

Sri T. MARIAPPA (Minister for Finance).—In Bombay they had accepted a resolution for the abolition of the Upper House.

ಅಧ್ಯಕ್ಷರು.—ಎಲ್ಲೆಲ್ಲಿ ಮೇಲ್ಮನೆಯನ್ನು ವಜಾ ಮಾಡಿದ್ದಾರೋ ಅಲ್ಲಿ ಕೆಳಮನೆಯಲ್ಲಿ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ಶ್ರೀ ಬಿ. ಜಿ. ಖೋತ್.—ಹೆಚ್ಚಿಗೆ ಮಾಡಿದ್ದರೂ, ಮೇಲಿನ ಮನೆ ಇರುವುದು ಅನಾವಶ್ಯಕವೆಂದು ನಾನು ಹೇಳುತ್ತೇನೆ.

ಒಬ್ಬ ಸದಸ್ಯರು.—ಈ ಸಭೆಯಲ್ಲಿಯೂ 209 ಜನರಿರಬೇಕೇ ಬೇಡವೇ ಎಂಬುದನ್ನೂ ಹೇಳಿ.

ಶ್ರೀ ಬಿ. ಜಿ. ಖೋತ್.—ಅದನ್ನು ಹೇಳಬೇಕಾದರೆ ಸ್ವಲ್ಪ ಯೋಚನೆಮಾಡಿ ಹೇಳಬೇಕಾಗುತ್ತದೆ. ಅದರಲ್ಲಿ ರಾಜ್ಯಾಂಗಕ್ಕೆ ಸಂಬಂಧಿಸಿದ ಪ್ರಶ್ನೆಯೂ ಇದೆ. Upper House ನ ವಿಷಯದಲ್ಲಿ ಅಂತು ಹೇಳುವುದಾದರೆ, ಅದು redundant, undemocratic and uneconomic. It is necessary that there should be no drain on our exchequer on this account.

ಶ್ರೀ ಟಿ. ಮರಿಯಪ್ಪ.—ನಮ್ಮನ್ನೇ ನಾವು efface ಮಾಡಿಕೊಳ್ಳುವುದಕ್ಕೂ ನಮಗೆ ಅಡ್ಡಿ ಇಲ್ಲ.

ಶ್ರೀ ಬಿ. ಜಿ. ಖೋತ್.—ನಾವು ಮಾಡುತಿರುವ Extravaganceನ್ನು ಕಮ್ಮಿ ಮಾಡಿಕೊಳ್ಳುವ ಬಗ್ಗೆಯೂ ಅನೇಕ ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ರೆಜಿಸ್ಟ್ರೇಟರುಗಳ ಕ್ವಾರ್ಟರುಗಳು, ಮಂತ್ರಿಗಳ ಕ್ವಾರ್ಟರುಗಳೆಲ್ಲಾ ಇದಕ್ಕೆ ನಿದರ್ಶನ.

ಒಬ್ಬ ಸದಸ್ಯರು.—ಹಾಗಾದರೆ, ರೆಜಿಸ್ಟ್ರೇಟರುಗಳು ಎಲ್ಲಿರಬೇಕೆಂದು ತಾವು ಹೇಳುತ್ತೀರಿ?

ಶ್ರೀ ಬಿ. ಜಿ. ಖೋತ್.—ತಾವು ಎಲ್ಲಾದರೂ ಇರಿ. Economy ದೃಷ್ಟಿಯಿಂದ ಇದು ಅವಶ್ಯಕ. ನಾವೆಲ್ಲಾ ಬಂದಿರುವುದು ರಾಷ್ಟ್ರಸೇವೆಗಾಗಿ ಎಂಬುದನ್ನು ಯಾರೂ ಮರೆಯಕೂಡದು. Economy ಮಾಡಬೇಕು ಎಂದು ಹೇಳುವವರು, ನಾವೇ ಮೊದಲು ಷುರು ಹಾಕಿಕೊಡಕೂಡದೇಕೆ?

ಒಬ್ಬ ಸದಸ್ಯರು.—ಎಂ. ಎಲ್. ಎ. ಗಳು ಇಳಿದುಕೊಳ್ಳುವುದಕ್ಕೆ ಸ್ಥಳಬೇಡವೇ?

ಶ್ರೀ ಬಿ. ಜಿ. ಖೋತ್.—ಯಾವುದಾದರೂ ಹೋಟಲಿಗೆ ಕಂಟ್ರಾಕ್ಟ್ ಕೊಡಲಿ. ಮೆಂಬರುಗಳಿಗೆ ಹೇಗೂ ಅಲೋಯನ್ಸ್ ಕೊಡುತ್ತೀರಿ. ಅದರಿಂದ ಅವರು ಎಲ್ಲಾದರೂ ಏರ್ಪಾಡು ಮಾಡಿಕೊಳ್ಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ (ಮರಾಮತ್ ಶಾಖಾಮಂತ್ರಿಗಳು).—ಈ ಸಭೆಯ ಮಾನ್ಯ ಸದಸ್ಯರೊಬ್ಬರು ಹೇಳಿದರೆ, ಅಥವಾ ಗೋರವಾಲಾರವರು ತಮ್ಮ ವರದಿಯಲ್ಲಿ ಹೇಳಿದರೆ ಅದರಂತೆ ಮಾಡುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು.—ಬೊಂಬಾಯಿನಲ್ಲಿ ಎಂ. ಎಲ್. ಎ. ಗಳಿಗೆಂದು ಆರು ಅಂತಸ್ತಿನ ಕಟ್ಟಡವೊಂದನ್ನು ಕಟ್ಟಿಸುತ್ತಿದ್ದಾರೆ.

ಶ್ರೀ ಬಿ. ಜಿ. ಖೋತ್.—ತಾವು ಹೇಳುವುದು ನಿಜವಾದರೂ, at least at this stage it is extravagant.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರುಗಳೆಲ್ಲರೂ ಬೇಡವೆಂದು ಹೇಳಿದರೆ ಆಗಬಹುದು. ಬಿಟ್ಟುಬಿಡುತ್ತೇವೆ.

Sri B. G. KHOT.—At this stage when we are building a new State and the whole nation, expenditure on these items will yield no benefit; on the cantrary it will be a burden to us.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಊಟ ಮಾಡದೆ ಹಾಗೆಯೇ ಇದ್ದರೆ, ದೇಶಕ್ಕೆ ಸೇವಿಂಗ್ಸ್ ಆಗುತ್ತದೆ. ಆರೀತಿ ಮಾಡೋಣವೇ?

ಶ್ರೀ ಬಿ. ಜಿ. ಖೋತ್.—ಊಟಮಾಡುವುದು ಬೇಡ ಎಂದ ನಾನು ಹೇಳುತ್ತೇನೆಯೇ! ಇಲ್ಲ. ಬೇರೆ ಬಂಗಲೆಕೊಡಿ, ಈಗ ಕೊಟ್ಟಿರುವುದು ನಮಗೆ ಸರಿಯಾಗಿಲ್ಲ ಎಂದು ಹೇಳುವುದು ಸರಿಯಲ್ಲ. ಟ್ಯಾಕ್ಸೇಷನ್ ಕೆಪಾಸಿಟಿ ಏನಿದೆಯೋ ಅದನ್ನು ರಾಷ್ಟ್ರದ ವಿಚಾರವಾಗಿ ಚರ್ಚಿಸಬೇಕು. ಸಾಧಾರಣ ಮನುಷ್ಯನಿಗೆ ಟ್ಯಾಕ್ಸೇಷನ್ ಕೆಪಾಸಿಟಿ ಎಷ್ಟು, ಅದರಿಂದ ಅವನಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತಿದೆ ಎಂಬುದನ್ನು ವಿಚಾರಮಾಡುವುದಕ್ಕೆ ನಮಗೆ ಶಕ್ತಿಯಿಲ್ಲವೆಂದು ಹೇಳುತ್ತೇನೆ. ಅನಾವಶ್ಯಕವಾದ ಖರ್ಚುಗಳು ಜಾಸ್ತಿಯಾಗುತ್ತಿವೆ. ಅವನ್ನು ಕಡಮೆ ಮಾಡಿ; ನಮ್ಮ ಪ್ಲಾನಿಂಗ್ ಪ್ರೋಗ್ರಾಂನಲ್ಲಿ ಅಗ್ರಿಕಲ್ಚರಲ್ ಫುಡ್ ಪ್ರೊಡಕ್ಷನ್ನನ್ನು ಹೆಚ್ಚುಮಾಡಿ; ಇಂಡಸ್ಟ್ರಿಯಲ್ ಪ್ರೊಡಕ್ಷನ್, ಎಜುಕೇಷನಲ್ ಫೆಸಲಿಟೀಸನ್ನು ಹೆಚ್ಚುಮಾಡಿ. ಇಂಥಾದ್ದನ್ನೆಲ್ಲಾ ಇಂಪ್ಲಿಮೆಂಟ್ ಮಾಡುವುದಕ್ಕೆ ಎಷ್ಟು ಖರ್ಚುಮಾಡಬೇಕೆಂದು ಸರ್ಕಾರ ನಿರ್ಧಾರಮಾಡಿದೆಯೋ ಅಷ್ಟನ್ನೂ ಖರ್ಚುಮಾಡಿ. ಈಗಿರತಕ್ಕ ಮಂತ್ರಿ ಮಂಡಲವಾಗಲಿ ಅಥವಾ ಯಾರೇ ಆಡಳಿತ ಪಕ್ಷದಲ್ಲಿರಲಿ ಇವಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. HANUMANTHAIYA (Ramanagaram).—Mr. Speaker, Sir, the previous speaker has remarked that the Gorwala Committee as well as the Vidhana Soudha Enquiry Committee...

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಿದರೆ ಚೆನ್ನಾಗಿರುತ್ತದೆ. ಆ ವಿಷಯವನ್ನು ಮಾನ್ಯ ಸದಸ್ಯರ ಆಲೋಚನೆಗೇ ಬಿಡುತ್ತೇವೆ.

ಶ್ರೀ ಕೊಂಡೂರು ರುದ್ರಪ್ಪ (ಚನ್ನಗಿರಿ).—ಸದಸ್ಯರು ಕನ್ನಡದಲ್ಲಿ ಬಹಳ ಸ್ವಾರಸ್ಯವಾಗಿ ಭಾಷಣ ಮಾಡುತ್ತಾರೆ.

Mr. SPEAKER.—The Hon'ble Member has already commenced speaking in English. He may continue to speak in English alone.

ಶ್ರೀ ಕೆ. ಹನುಮಂತಯ್ಯ,—ಸ್ವಾಮಿ, ಅನೇಕ ಮಾನ್ಯ ಸದಸ್ಯರು ಅಪ್ಪಣೆ ಕೊಡಿಸಿದ ಹಾಗೆ, ನಾನು ಕನ್ನಡದಲ್ಲಿ ಮಾತನಾಡಲು ಅಪೇಕ್ಷಿಸುತ್ತೇನೆ.

Sri C. J. MUCKANNAPPA (Gubbi).—I rise to a point of order. Can you go back on your own ruling? Though it is the sense of the House that he may speak in Kannada, you gave a ruling that he might continue in English. I have no objection to his speaking in Kannada. But I want to know how you can go back on your ruling.

Mr. SPEAKER.—I was only referring the convention. I have not given any ruling as such. I was referring to the convention that when a speaker commences his speech in a particular language, he must continue it and finish it in that language.

ಶ್ರೀ ಕೆ. ಹನುಮಂತಯ್ಯ.—ಅಧ್ಯಕ್ಷರೆ, ಕನ್ನಡ ಇಂಗ್ಲಿಷ್ ಎರಡನ್ನೂ ಕೂಡ ಮಾತನಾಡಬಹುದಾದಂಥ ಸಭೆಯಾಗಿರುವುದರಿಂದ ಯಾವ ಭಾಷೆಯಲ್ಲಿ ಮಾತನಾಡಿದರೂ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಮಧ್ಯಮಧ್ಯೆ ಒಂದೊಂದು ಸಾರಿ ಇಂಗ್ಲಿಷ್ ಮಾತುಗಳನ್ನೂ ಹೇಳಬೇಕಾಗಿದೆ. ಆದ್ದರಿಂದ ಕನ್ನಡದಲ್ಲಿಯೇ ಭಾಷಣಮಾಡುತ್ತೇನೆ.

ಹಿಂದಿನ ಭಾಷಣಕಾರರು ಈ ಗೋರ್ವಾಲ ಕಮಿಟಿ ರಿಪೋರ್ಟ್ ಮತ್ತು ವಿಧಾನ ಸೌಧದ ರಿಪೋರ್ಟ್‌ಗಳೆರಡೂ ಈಗಾಗಲೇ ಪಬ್ಲಿಷ್ ಆಗಿ ಬಹಳ ದಿವಸಗಳಾಗಿವೆ, ಇದು ತಂಗಳು ಆಗಿವೆ ಎಂದು ಹೇಳಿದರು. ಒಂದು ವಿಧದಲ್ಲಿ ಅದು ನಿಜ; ಆದರೆ ಈ ಸಭೆ ಈ ವಿಷಯಗಳನ್ನು ಯಾವಾಗ ಬೇಕಾದರೂ ಚರ್ಚೆಮಾಡಬಹುದು. ಆದೃಷ್ಟಿಯಿಂದ ಈ ದಿವಸ ನಾವು ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆ.

ಸ್ವಾಮಿ, ಮೊದಲು ವಿಧಾನ ಸೌಧದ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಅನಂತರ ಇತರ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಆ ಕಮಿಟಿಯಲ್ಲಿರತಕ್ಕ ಎಲ್ಲಾ ಶಿಫಾರ್ಸುಗಳನ್ನೂ ಅವುಗಳ ಮೇಲೆ ಸರ್ಕಾರ ತಕ್ಕ ಆಜ್ಞೆಗಳನ್ನೂ ವಿಮರ್ಶೆಮಾಡುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಅದು ಅಷ್ಟು ಸಾಧ್ಯವಾದುದಾಗಿರುವುದಿಲ್ಲ. ಶ್ರೀ ಗೋರ್ವಾಲ ಅವರು ನಿಷ್ಪಕ್ಷಪಾತ ಮನೋಭಾವ ವಿರತಕ್ಕಂಥವರಲ್ಲವೆನ್ನುವುದು ಈ ರಿಪೋರ್ಟಿನಲ್ಲಿ ಅವರು ಬರೆದಿರತಕ್ಕ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ. ಅವರು 19ನೆಯ ಶತಮಾನದಲ್ಲಿ ವಿದ್ಯಾಭ್ಯಾಸ ಮಾಡಿದವರು. ಬ್ರಿಟಿಷ್ ಆಳರಸರ ಮೆಚ್ಚಿಗೆಗೆ ಪಾತ್ರವಾಗಿದ್ದ ಐ.ಸಿ.ಎಸ್. ವರ್ಗಕ್ಕೆ ಸೇರಿದವರು. ಅವರ ದೃಷ್ಟಿಕೋಣದಲ್ಲಿ ಪ್ರಪಂಚದಲ್ಲಿ ಐ.ಸಿ.ಎಸ್. ಆಫೀಸರುಗಳಿಗೆ ಸಮಾನವಾದ ಆಡಳಿತಗಾರರು ಇಲ್ಲ. ಆ ಆಡಳಿತ ಕೊನೆಗೊಂಡಿದ್ದೇ ದೇಶದ ದುರದೃಷ್ಟವೆಂದು ಒಂದು ಕಡೆ ಬರೆದಿದ್ದಾರೆ. ಅದನ್ನು ಓದಿ ಹೇಳುತ್ತೇನೆ. ಈ ವರದಿಯಲ್ಲಿ ಇನ್ನೊಂದು ಮಾತನ್ನು ಬರೆದಿರುತ್ತಾರೆ. 1947ನೆಯ ಇಸವಿಯಲ್ಲಿ ಸ್ವರಾಜ್ಯ ಬಂತು, ಅಲ್ಲಿಂದೀಚೆಗೆ ಎಲ್ಲಾ ಕೆಟ್ಟುಹೋಗಿದೆ ಎನ್ನತಕ್ಕ ಮಾತುಗಳನ್ನು ಬರೆದಿದ್ದಾರೆ. ಈ ವರದಿಯ 29ನೆಯ ಪೇಜಿನ ಮೊದಲನೆಯ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ: "No adequate reason is forthcoming for the unsatisfactory collections in Mysore and Bangalore Divisions. Perhaps they are reflections of the general slackness that seems to have overcome the old Mysore administration at the end of 10 years of elective Government."

10-30 A.M.

ಅವರು ಸೆಕ್ರೆಟೇರಿಯಟ್ ವಿಚಾರ ಪ್ರಸ್ತಾಪ ಮಾಡುತ್ತಾ, 41ನೆಯ ಪೇಜ್, 2ನೆಯ ಪ್ಯಾರಾದಲ್ಲಿ ಹೇಳುತ್ತಾರೆ:

"Perhaps also, it is the result of ten years work under masters with no very clear ideas of standards of work."

ಗೋರ್‌ವಾಲರವರು ಐ.ಸಿ.ಎಸ್. ನಲ್ಲಿದ್ದು ರಾಜೀನಾಮೆ ಕೊಟ್ಟರು; ಇಂಗ್ಲೆಂಡಿನಿಂದ ಬಂದಿದ್ದ ಆಂಗ್ಲೇಯ ವರ್ಗಕ್ಕೆ ಸೇರಿದ ಐ.ಸಿ.ಎಸ್. ಅಧಿಕಾರಿಗಳು ಯಾವರೀತಿ ತಾವು ರಾಜೀನಾಮೆ ಕೊಟ್ಟು ಹೋಗುವಾಗ ಸಂಬಳ ಸಂಭಾವನೆಗಳನ್ನೆಲ್ಲ ಕೈತುಂಬ ಪಡೆದುಕೊಂಡು ಹೋಗಬೇಕೋ ಆರೀತಿ ಪಡೆದುಕೊಂಡು ರಿಟೈರ್ ಆಗಿರತಕ್ಕಂಥವರು.

ಶ್ರೀ ಎಂ. ಸಿ. ನರಸಿಂಹನ್ (ಕೆ.ಜಿ.ಎಫ್.).—ಮೊರಾರ್ಜಿ ದೇಸಾಯಿ ಐ.ಸಿ.ಎಸ್. ನಲ್ಲಿ ಇರಲಿಲ್ಲವೇ!

Sri K. HANUMANTHAIYA.—Sri Morarji Desai has become a red rag to Communists Every communist thinks that Sri Morarji Desai is a bad man and they try to drive a wedge between Morarji Desai and Pandit Nehru and my friend here tries to do the same. Everybody knows the game and if the Hon'ble Member repeats the same allegation in this House, nobody can take it seriously.

ಇವರು ಈಚೆಗೆ ಒಂದು ಕಸಬಿನಲ್ಲಿ ತೊಡಗಿದ್ದಾರೆ. ಪತ್ರಿಕೆಗಳಿಗೆ ಲೇಖನ ಬರೆಯುವ ವೃತ್ತಿಯನ್ನು ಅವಲಂಬಿಸಿದ್ದಾರೆ. ಇವರ ಲೇಖನಗಳು ಅನೇಕ ಪತ್ರಿಕೆಗಳಲ್ಲಿ ಪಬ್ಲಿಷ್ ಆಗುತ್ತವೆ. ನ್ಯೂಸ್‌ಪೇಪರ್ ವಾತಾವರಣ ಒಂದು ತರಹ ಇರುತ್ತದೆ.

A famous founder of a great newspaper in England says that news value is quite different from ordinary value. If a dog bites a man, it is no news; if a man bites a dog, it is news.

ಹಾಗೆಯೇ ನ್ಯೂಸ್‌ಪೇಪರಿಗೆ ಯಾವುದನ್ನಾದರೂ ತೆಗಳಿ ಬರೆದರೆ ಅದಕ್ಕೆ ಜನರ ಅನುರಾಗ ಹೆಚ್ಚು ಎಂದು ತಿಳಿದುಕೊಂಡು ಅನೇಕರು ಬರೆಯುತ್ತಾರೆ. ಗೋರ್‌ವಾಲಾರವರು "ಟೈಮ್ಸ್ ಆಫ್ ಇಂಡಿಯಾ ಇಲ್‌ಸ್ಟ್ರೇಟೆಡ್‌ವೀಕ್ಲಿ" ಯಲ್ಲಿ, ಇಂಡಿಯನ್ ಅಡ್ಮಿನಿಸ್ಟ್ರೇಷನ್ ಕರಪ್ಟ್ ಮತ್ತು ಇನ್‌ಎಫಿಷಿಯೆಂಟ್ ಎಂದು ಹೇಳಿದ್ದಾರೆ. 1958ರ ಅಂತ್ಯದಲ್ಲಿ "ರೀಡರ್ಸ್ ಫೋರಮ್" ಎಂದು ಆ ಪತ್ರಿಕೆಯಲ್ಲಿ ಪ್ರಾರಂಭವಾಯಿತು. ಅದರಲ್ಲಿ ಮೊಟ್ಟ ಮೊದಲನೆಯ ಆರ್ಟಿಕಲ್ಲನ್ನು ಗೋರ್‌ವಾಲಾರವರು ಬರೆದಿದ್ದಾರೆ. ಅದರಲ್ಲಿ ಅವರು ಬರೆಯುತ್ತಾರೆ. "ಹತ್ತು ವರ್ಷಗಳಿಂದ, ಈ ಸ್ವರಾಜ್ಯ ಬಂದಾಗಿನಿಂದ ಎಲ್ಲಾ ಕೆಟ್ಟು ಹೋಗಿಬಿಟ್ಟಿದೆ. 1947ನೆಯ ಇಸವಿ ಮೊದಲು ಎಷ್ಟು ದಕ್ಷತೆ ಇತ್ತು, ಎಷ್ಟು ಪ್ರಾಮಾಣಿಕತೆ ಇತ್ತು, ಎಷ್ಟು ಬಿಗಿಯಾಗಿ ಸರ್ಕಾರ ಇತ್ತು ಇವೆಲ್ಲ ಅನಂತರ ಸಡಿಲವಾಗಿವೆ, ಶಿಥಿಲವಾಗಿ ಹೊರಟುಹೋಗಿ ಬಿಟ್ಟಿವೆ" ಎಂದು ಬರೆಯುತ್ತಾರೆ. ಇದರ ಮೇಲೆ ಕಾಂಗ್ರೆಸ್ ಪಾರ್ಟಿಯವರ ಮೇಲೆ ಅವರಿಗೆ ಕಡುಕೋಪ. ಅವರ ಮಾತಿನಲ್ಲಿಯೇ ಹೇಳುತ್ತೇನೆ.

> "While these are the necessities of the present times, regretfully it has to be admitted that, far from the Administration rising to them, there has been marked deterioration even in those aspects that come well within basic honesty and efficiency. Corruption has increased greatly. Some estimates put it as high as twice what it was before 1947."

ಈ ಮಿನಿಸ್ಟರುಗಳನ್ನು ಕಂಡರೆ ಅವರಿಗೆ ತುಚ್ಛ ಭಾವನೆ.

He has got the greatest contempt for Ministers, not merely in Mysore but throughout India and also Government of India. Continuing Sri Gorwala has said:

> "After eleven years of power, how many Ministers know the difference between work properly done and work botched? How many have taken pains to get to know the men who work under them? How many even of their principal officials have they met regularly in their social moments, when men are not so much on their guard and can, to the discerning eye, be seen for what they are?"

He means there are some people who have come on the scene unwantedly and for a very unholy work. That is the impression he has got in his mind. Thereafter he writes;

> "The factual position is that Indian Administration has deteriorated even as regards basic honesty and efficiency. It is more corrupt and inefficient than in the past. *In this matter, the country seems truly to have reached a cross road.*"

Then he says in the last para:

> "The trend can only be reversed by a radical change in the behaviour on the part of the Government and the principal political Party. Will the need for the change be realised, and the realisation acted upon in time?"

Sri V. SRINIVAS SHETTY (Coondapur).—On point of order. I have the greatest respect for Sri Hanumanthaiya. Apart from that, I think the rule is we are not expected to carry newspapers into this House or read from the newspapers: that is the point which I wish to make.

Sri L. S. VENKAJI RAO (Basavanagudi).—It is an article written by Sri Gorwala.

Sri V. SRINIVAS SHETTY.—It is published in newspaper. Another point which I have to make is, we are here to discuss the Report of Sri Gorwala, whether his recommendations are good or bad, whether they are practicable or impracticable, whether we should urge upon the Government to accept them. Of course, the Hon'ble Member has been going into the personal history of Sri Gorwala. In fact, personally I feel that there is a healthy convention that a person outside this House should not be attacked and it is in a way an attack of the person of Sri Gorwala. I feel that it is not proper.

Sri G. VENKATAI GOWDA (Palaiyam).—When he is discussing to substantiate his biassed view or prejudiced view, he has to speak about all these things.

Sri M. RAMAPPA (Harihar).—It is a bad precedent to allow to discuss or criticise about his education and about his point of view and all that.

Sri J. B. MALLARADHYA (Nanjangud).—I personally feel that

(SRI J. B. MALLARADHYA.)

we should not take it as a party affair. Sri Gorwala is very much in the picture in this House. The Hon'ble Member is perfectly in order to make criticism about him and his Report. Let us not make it a party affair. This is a matter touching the administration of the State and the prestige of the State is involved in this, not merely of the officials but of the entire hierarchy of Government and administration. I do not think it is out of order at all to discuss Sri Gorwala in all aspects.

MR. SPEAKER.—As regards the first point that the Hon'ble Members are not entitled to read relevant extracts from newspapers, I must say that such an impression is not correct. Hon'ble Members, if they have made themselves sure that what has appeared in the paper is correct and the facts are true to the best of their knowledge, can quote from the newspapers. That is one thing. No doubt, no member is entitled to quote from newspapers: but if he quotes, he must make himself sure that the facts disclosed in the newspapers are correct to the best of his knowledge. So far as the second point which has been raised is concerned, I am unable to accept the view. I will not allow any personal remark against Sri Gorwala. I should make that quite clear. But to say that Sri Gorwala's public background is like this or like that would not be out of order.

ಶ್ರೀ ಕೆ. ಹನುಮಂತಯ್ಯ.—ಅವರು ಅದೇ ಆರ್ಟಿಕಲ್‌ನಲ್ಲಿ ಬರೆಯುತ್ತಾರೆ :

> "The ideal of the Indian civil service too was truly to serve where it ruled; its desired code of conduct, courage and the highest integrity. At all times of course, there were some who fell away from these standards yet these were the standards which they followed."

ಹೀಗೆ ಆ ರಿಪೋರ್ಟಿನಲ್ಲಿ ಐ.ಸಿ.ಎಸ್. ಹೊರತು ಮಿಕ್ಕ ಎಲ್ಲರನ್ನೂ ಆಕ್ಷೇಪಣೆ ಮಾಡಿದ್ದಾರೆ. ಆದರೆ ಅವರು ರಿಪೋರ್ಟಿನಲ್ಲಿ ಒಬ್ಬರೇ ಒಬ್ಬರನ್ನು ಮಾತ್ರ ಬಹಳ ತಾರೀಫ್ ಮಾಡಿದ್ದಾರೆ. ಅಂಥ ಒಬ್ಬರು ಈ ಸೆಕ್ರೇಟರಿಯಟ್ಟಿನ ಚೀಫ್ ಸೆಕ್ರೆಟರಿಗಳು. ಈ ವರದಿಯಲ್ಲಿ 78ನೆಯ ಪುಟದಲ್ಲಿ ಇಂಥವರು ಬಹಳ ಕಷ್ಟಪಟ್ಟಿರುತ್ತಾರೆಂದು ಹೀಗೆ ಹೇಳಿದ್ದಾರೆ:

> "I must express my gratefulness in particular to Mr. P.V.R. Rao, the Chief Secretary. Him I have troubled again and again, always to be encouraged by his cheerful welcome and to be benefited by his abundant wisdom and wide experience."

SRI J. B. MALLARADHYA.—There is one saving clause. My esteemed friend Sri Bharat of the Finance Department has come in for a lot of appreciation which is correct.

SRI K. HANUMANTHAIYA.-No doubt Sri Bharat has been appreciated. This abundant wisdom and wide experience have been found to be the sole monopoly of the Chief Secretary only. ಈ ರಿಪೋರ್ಟಿನಿಂದ ಏನು ವ್ಯಕ್ತವಾಗುತ್ತದೆ ಎಂದರೆ ನಮ್ಮ ದೇಶಕ್ಕೆ ಸ್ವರಾಜ್ಯ ಬಂದಂದಿನಿಂದ ದೇಶದಲ್ಲಿರತಕ್ಕ ಆಡಳಿತವೆಲ್ಲ ಕೆಟ್ಟುಹೋಗಿ ಏನೋ ಒಂದು ಅನಾಹುತವೇ ಆಗಿ ಹೋಗಿದೆಯೆಂದು. ಆದರೆ ಶ್ರೀ ಜೆ. ಬಿ. ಮಲ್ಲಾರಾಧ್ಯರೊಂದು ಮಾತು ಹೇಳಿದರು; ಅವರು ಹೇಳಿದ ಮಾತನ್ನು ನಾನೂ ಒಪ್ಪುತ್ತೇನೆ. ಈ ವರದಿಯಲ್ಲಿ ಪಕ್ಷಪಾತ ಭಾವನೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಈ ವರದಿಯನ್ನು ಯಾರೇ ಓದಲಿ ಅವರಿಗೆ ಅದು ತಾನಾಗಿಯೇ ಗೊತ್ತಾಗುತ್ತದೆ. ಅವರ ವರದಿಯನ್ನೋದಿದರೆ ಏನು ಕಂಡು ಬರುತ್ತದೆಂದರೆ ಕಾಂಗ್ರೆಸ್ ಮಂತ್ರಿಗಳೆಲ್ಲರೂ ಅವರ ದೃಷ್ಟಿಯಲ್ಲಿ ಅಪರಾಧಿಗಳು, ಅಷ್ಟೇ ಅಲ್ಲ ಅವರು ಸರ್ವಾಪರಾಧಿಗಳು. ಕೇವಲ ಮೈಸೂರು ರಾಜ್ಯದ ಮಂತ್ರಿ ಮಂಡಲದಲ್ಲಿರತಕ್ಕ ಮಂತ್ರಿಗಳೇ ಅಲ್ಲ; ಇಡೀ ಪ್ರಜಾಪ್ರಭುತ್ವದಲ್ಲಿರತಕ್ಕ ಎಲ್ಲ ಮಂತ್ರಿಮಂಡಲಗಳ ಮಂತ್ರಿಗಳನ್ನು ಕಂಡರೆ ಇವರಿಗೆ ಕೆಂಡದಂಥ ಕೋಪ. ಶಾಸನ ಸಭಾ ಸದಸ್ಯರೆಂದರೆ ಮರ್ಯಾದೆಗೆ ಅರ್ಹರಾದವರಲ್ಲವೆಂದು ಅವರ ಅಭಿಪ್ರಾಯ. ಈ ರೀತಿ ಈ ವರದಿಯಲ್ಲಿ ಇಡೀ ಡೆಮಾಕ್ರೆಟಿಕ್ ಸೆಟಪ್ ಮತ್ತು ಶಾಸನ ಸಭೆಯ ಸದಸ್ಯರು ಮತ್ತು ಮಂತ್ರಿಗಳು ಇವರುಗಳಾರೂ ಅವರ ಹೊಗಳಿಕೆಯನ್ನು ಪಡೆಯಲು ಸರಿಯಾದ ಅರ್ಹತೆಯನ್ನು ಪಡೆದಿಲ್ಲವೆಂದು ಬರೆದಿರತಕ್ಕದ್ದು ಎದ್ದು ಕಾಣುತ್ತದೆ. ನಾನೇನೋ ರೂಲಿಂಗ್ ಪಾರ್ಟಿಗೆ ಸೇರಿದ ಒಬ್ಬ ಸದಸ್ಯ ಅವರಿಗೆ ನನ್ನ ಮೇಲೆ ಕೋಪವಿರಬಹುದು. ಆದರೆ ಅವರು ಇನ್ನುಳಿದ ಪಾರ್ಟಿಯವರನ್ನಾದರೂ ಈ ವಿಚಾರದಲ್ಲಿ ಒಂದು ಮಾತನ್ನು ಕೇಳಬಹುದಿತ್ತು. ಕಾಂಗ್ರೆಸ್ ಪಕ್ಷವೆಂದರೆ ಅವರಿಗೆ ಬಹಳ ಕೋಪ. ಈ ಬಗ್ಗೆ ನಾನಾಗಲೇ ಓದಿಹೇಳಿದ ಅಂಶಗಳನ್ನು ಮಾನ್ಯ ಸದಸ್ಯರೆಲ್ಲರೂ ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಈ ರಿಪೋರ್ಟನ್ನು ಬರೆಯುವಾಗ ಅವರು ಯಾರಾರಲ್ಲಿ ಸಮಾಲೋಚನೆ ಮಾಡಿದ್ದಾರೆ ಅವರು ನಾಲ್ಕು ಮಂದಿ ಅನಾನಿಮಸ್ ಮಂದಿಗಳಲ್ಲಿ ಮಾತ್ರ ಸಮಾಲೋಚನೆ ಮಾಡಿದ್ದಾರೆ. ಅವರ ಮಾತುಗಳಿಗೆ ಮಾನ್ಯತೆ ಕೊಟ್ಟಿದ್ದಾರೆಯೋ ಹೊರತು ಜವಾಬ್ದಾರಿಯುತವಾದಂಥ ಜನರು ಯಾರಿದ್ದಾರೋ

ಅವರನ್ನು ಒಂದು ಮಾತೂ ಸಹ ಕೇಳಿಲ್ಲ. ಸರ್ಕಾರಿ ಕಛೇರಿಗಳಲ್ಲಿ ಅಧಿಕಾರಿಗಳಿಗೆ ಭಯವೆಂಬುದಿಲ್ಲ ಅದರಿಂದ ಕೆಲಸಗಳೇ ಸರಿಯಾಗಿ ನಡೆಯುತ್ತಿಲ್ಲ ಎಂದು ಬರೆಯುತ್ತಾ ಅವರು ವರದಿಯ ನಾಲ್ಕನೆಯ ಪುಟದಲ್ಲಿ ಯಾರೋ ಉತ್ತರ ಕರ್ನಾಟಕದವರೊಬ್ಬರು ಮತ್ತು ಹಳೆಯ ಮೈಸೂರಿನ ರಿಟೈರ್ಡ್ ಅಧಿಕಾರಿಯೊಬ್ಬರಿಂದ ವಿಷಯಗಳನ್ನು ತಿಳಿದುಕೊಂಡೆ ಎಂದಿದ್ದಾರೆ. ಈ ವರದಿಯನ್ನು ಬರೆಯಲು ಅವರ ಅಭಿಪ್ರಾಯಕ್ಕೆ ಸರಿಯಾಗಿ ಹೇಳಿರತಕ್ಕ ಆ ಯಾರೋ ಇಬ್ಬರ ಮಾತುಗಳು ಇವರಿಗೆ ಪ್ರಮಾಣ ವಾಕ್ಯಗಳಾಗಿರುತ್ತವೆ. ಯಾರುಯಾರು ಇವರ ಮನೋಗುಣಕ್ಕನುಸಾರವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೋ ಅವರ ಮಾತಗಳು ಇವರಿಗೆ ವೇದವಾಕ್ಯಗಳಾಗಿರುತ್ತವೆ. ಇನ್ನು ಇವರಿಗೆ ಈ ಇಬ್ಬರು ಜನಗಳ ಅಭಿಪ್ರಾಯ ಬಿಟ್ಟರೆ ಮೂರನೆಯವರೆಂದರೆ ಚೀಫ್ ಸೆಕ್ರೆಟರಿಗಳು. ಈ ಜನರ ಮಾತುಗಳು ಅವರಿಗೆ ವೇದ ವಾಕ್ಯ. ಹೀಗೆ ಹೆಸರು ಕುಲಗಳಿಲ್ಲದ ಇಬ್ಬರು ವ್ಯಕ್ತಿಗಳು ಮತ್ತು ಒಬ್ಬ ಅಧಿಕಾರಿ ಅಥವಾ ಕೆಲವರನ್ನು ಅವರಿಗೆ ಬೇಕಾದವರನ್ನು ಕೇಳಿ ತಮ್ಮ ಮನಸ್ಸಿಗೇನೇನು ತೋಚಿತೋ ಅದೆಲ್ಲವನ್ನೂ ಈ ವರದಿಯಲ್ಲಿ ಬರೆದಿದ್ದಾರೆ. ಈ ರಿಪೋರ್ಟನ್ನು ಬರೆಯುವುದಕ್ಕೆ ಮುನ್ನ ಈ ವಿಧಾನ ಸೌಧ ಕಟ್ಟಡವನ್ನು ಕಟ್ಟಿಸತಕ್ಕ ಜವಾಬ್ದಾರಿ ಹೊತ್ತಿದ್ದಂಥವರಲ್ಲಿ ಯಾರನ್ನಾದರೂ ಕರೆಸಿ ಕೇಳಿದ್ದರೆ ಇವರಿಗೆ ಇನ್ನೂ ಅನೇಕ ವಿಷಯಗಳು ಗೊತ್ತಾಗುತ್ತಿತ್ತು: ಅವರನ್ನು ಅನೇಕ ರೀತಿಯಲ್ಲಿ ಇವರು ಪ್ರಶ್ನೆ ಮಾಡಬಹುದಾಗಿತ್ತು. ಇಲ್ಲವೇ ಶಾಸನ ಸಭಾ ಸದಸ್ಯರನ್ನಾದರೂ ಇವರು ಕೇಳಬಹುದಿತ್ತು.

The evidence he has gathered is from anonymous people. He has based his conclusion on anonymous opinion.

ಅವರು ಬರೆದಿಟ್ಟಿರತಕ್ಕ ರಿಪೋರ್ಟಿನಲ್ಲಿ ಅವರು ಸೂಚಿಸಿರತಕ್ಕ ಅಭಿಪ್ರಾಯಗಳು ಸರಿಯಾಗಿಲ್ಲ ಎಂಬುದನ್ನು ಅವರ ರಿಪೋರ್ಟಿನಿಂದಲೇ ಎತ್ತಿ ತೋರಿಸುತ್ತೇನೆ. ವಿಧಾನ ಸೌಧ ಎನ್‌ಕ್ವೈರಿ ಕಮಿಟಿ ವರದಿಯ ವಿಚಾರವಾಗಿ—

> "Though Government has refrained from making the Report of the Committee public, no member of the Legislature has demanded that it be placed on the Table of the House or has attempted to institute a specific debate on it."

ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಶಾಸನ ಸಭೆಯ ಸ್ಪೀಕರ್‌ರವರನ್ನಾಗಲಿ ಅಥವಾ ಶಾಸನ ಸಭಾ ಕಾರ್ಯದರ್ಶಿಗಳನ್ನಾಗಲಿ ವಿಚಾರ ಮಾಡಿದ್ದರೆ ಅವರು ತಿಳಿಸುತ್ತಿದ್ದರು. ನಾನೇ ವಿಧಾನ ಸಭಾ ಅಧ್ಯಕ್ಷರಿಗೆ ಒಂದ ಪತ್ರವನ್ನು ತಾರೀಖು 22ನೆಯ ಮಾರ್ಚಿ 1957ರಲ್ಲಿ ಬರೆದು ವಿಧಾನ ಸಭೆಯು ಸೇರಿದ ಕೂಡಲೇ ಈ ರಿಪೋರ್ಟಿನಮೇಲೆ ಚರ್ಚೆ ನಡೆಸಲು ಅವಕಾಶಮಾಡಿಕೊಡಬೇಕೆಂದು ಬರೆದಿದ್ದೆ. ಅದಕ್ಕೆ ಅಧ್ಯಕ್ಷರಿಂದ ನನಗೆ ಸಕಾರಣವಾಗಿ ಈ ರೀತಿಯಾದ ಉತ್ತರ ಬಂದಿರುತ್ತದೆ:

> "With reference to your request to the Speaker to permit a debate on the report of the Vidhana Soudha Enquiry Committee, I am desired to state that the leader of the House and the leader of the Opposition were consulted in the matter and as the former stated that as enquiries against officers were pending the debate would prejudice such enquiries the Speaker was not agreeable to put it down for a debate for this session."

ಹೀಗೆ ಒಂದು ಕಾರಣ ಕೊಟ್ಟು ತಾವೇ ಬರೆದಿದ್ದೀರಿ. ಆದಾಗ್ಯೂ ಈ ವಿಷಯ ಒಂದಲ್ಲ ಒಂದು ರೀತಿಯಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಇಷ್ಟೆಲ್ಲಾ ಆಗಿದ್ದರೂ ಈ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನಾಗಲಿ ಲೆಜಿಸ್ಲೇಚರಿನ ಸೆಕ್ರೆಟರಿಗಳನ್ನಾಗಲಿ ಯಾರೊಬ್ಬರನ್ನೂ ಕೇಳಿ ತಿಳಿದುಕೊಳ್ಳುವ ಗೊಡವೆಗೇ ಹೋಗದೆ ವಿಧಾನ ಸೌಧದ ವಿಚಾರಣಾ ಸಮಿತಿಯ ವರದಿಯು ಈ ಸಭೆಯ ಮುಂದೆ ವಿಚಾರಣೆಗೇ ಬರಲಿಲ್ಲ ಎಂಬುದಾಗಿ ಗೋರ್ವಾಲಾರವರು ಅಸತ್ಯವಾದ ಆರೋಪಣೆಯನ್ನು ಮಾಡಿದ್ದಾರೆ. ಈ ವಿಚಾರ ಕೇವಲ ನಮ್ಮ ಮೈಸೂರೊಂದಕ್ಕೆ ಗೊತ್ತಿರುವುದಿರಲಿ ಇದು ಇಡೀ ಇಂಡಿಯಾ ದೇಶಕ್ಕೇ ಗೊತ್ತಾಗಿರತಕ್ಕಂಥ ವಿಚಾರ. ಈ ವರದಿ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಮದ್ರಾಸಿನಲ್ಲಿ ಅಚ್ಚಾಗತಕ್ಕ ಪತ್ರಿಕೆಗಳಲ್ಲೂ ಮತ್ತು ಮೂರು ನಾಲ್ಕು ಕನ್ನಡ ದಿನ ಪತ್ರಿಕೆಗಳಲ್ಲೂ ನಾಲ್ಕು ಐದು ದಿನಗಳು ಈ ವರದಿಯನ್ನು ಪ್ರಕಟಣೆ ಮಾಡಲಾಗಿತ್ತು. ಇಷ್ಟೇ ಅಲ್ಲದೆ ಈ ವರದಿಯ ಕಾಪಿಗಳನ್ನೆಲ್ಲಾ ಶಾಸನ ಸಭಾ ಸದಸ್ಯರುಗಳಿಗೂ ಹಂಚಲಾಗಿತ್ತು. ಇಷ್ಟೆಲ್ಲಾ ಆಗಿದ್ದರೂ ಆ ವರದಿ ಪಬ್ಲಿಷ್ ಆಗಲಿಲ್ಲವೆಂದು ಆರೋಪಣೆ ಮಾಡಿರತಕ್ಕದ್ದು ಸತ್ಯಕ್ಕೆ ಸಮಿಪವಾದದ್ದೇ ಎನ್ನುವುದನ್ನು ಗೋರ್ವಾಲಾರವರೇ ತಿಳಿಸಬೇಕಾಗಿದೆ. ಆದರೆ ಅವರು ತಮ್ಮ ಮನಸ್ಸಿನಲ್ಲಿ ಏನೋ ಒಂದು ಪ್ರೆಜ್ಯುಡೀಸನ್ನಿಟ್ಟುಕೊಂಡು ಹೀಗೆಲ್ಲ ಈ ವರದಿಯಲ್ಲಿ ಬರೆದಿದ್ದಾರೆ. ಮತ್ತೊಂದು ವಿಷಯವನ್ನು ತಿಳಿಸಲಿಚ್ಛಿಸುತ್ತೇನೆ. ಈ ವಿಧಾನಸೌಧ ಕಟ್ಟಡಕ್ಕೆ ಹತ್ತಿರ ಎರಡು ಕೋಟಿ ರೂಪಾಯಿಗಳು ಖರ್ಚಾಗಿವೆಯೆಂದು ಹೇಳಿದ್ದಾರೆ.

When he looked at the Vidhana Soudha with prejudiced eyes they ran on the lines of exaggeration.

ಈ ಕಟ್ಟಡಕ್ಕೆ ಖರ್ಚಾಗಿರತಕ್ಕ ಮೊಬಲಗನ್ನು ಸರ್ಕಾರದವರು ಒದಗಿಸಿದ್ದಾರೆ. ನಾನೇ ಈ ವಿಚಾರದಲ್ಲಿ ಮೊನ್ನೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದುದಕ್ಕೆ ಸರ್ಕಾರದವರು ಉತ್ತರವಾಗಿ ಈ ಕಟ್ಟಡಕ್ಕೆ ಖರ್ಚಾಗಿರತಕ್ಕದ್ದೆಲ್ಲ 130 ಲಕ್ಷ ರೂಪಾಯಿಗಳೆಂದು ತಿಳಿಸಿದ್ದಾರೆ. ಇದು ಪೂರ್ತಿಆಗುವ ವೇಳೆಗೆ 153 ಲಕ್ಷರೂಪಾಯಿಗಳಾಗಬಹುದೆಂದು ಆ ಉತ್ತರ ಕೊಟ್ಟಿದ್ದಾರೆ. ವಾಸ್ತವಾಂಶ ಹೀಗಿದ್ದಾಗ್ಯೂ ಗೋರ್ವಾಲಾರವರು ತಮ್ಮ ವರದಿಯಲ್ಲಿ ಈ ಕಟ್ಟಡಕ್ಕೆ ಎರಡು ಕೋಟಿ ಹತ್ತಿರ ಖರ್ಚಾಗಿದೆ ಎಂದು ಹೇಳಿರುವುದರಲ್ಲಿ ಅವರ ಅಭಿಪ್ರಾಯದಲ್ಲಿ 30—40 ಲಕ್ಷಗಳು ಲೆಕ್ಕಕ್ಕೇ ಇಲ್ಲ. ಅವರ ಈ ಮಾತುಗಳಲ್ಲಿ ಉತ್ಪ್ರೇಕ್ಷೆ ಎಗ್ಸಾಜರೇಷನ್ ಇದೆಯೇ ಇಲ್ಲವೇಎಂಬುದು ಯಾರಿಗೆ ತಾನೆ ಎದ್ದು ಕಾಣದು! ಕಟ್ಟಕಡೆಗೆ ಈ

(SRI K. HANUMANT AIYA)

ವಿಚಾರದಲ್ಲಿ ಚೀಫ್-ಇಂಜಿನಿಯರನ್ನಾದರೂ ಒಂದು ಮಾತನ್ನು ಕೇಳಿ ನೋಡೋಣ ಎನ್ನುವ ಸೌಜನ್ಯತೆ ಕೂಡ ಅವರಿಲ್ಲಿಲ್ಲ. ಏನು ಅವರ ಮನಸ್ಸಿಗೊಂದು ತೋಚಿದರೆ ಹಾಗೆಯೇ ಅದನ್ನು ಬರೆದು ಬಿಡುವಂಥ ಒಂದು ಮನೋವೃತ್ತಿ ಅವರದು. ವಿಧಾನಸೌಧದ ವಿಚಾರದಲ್ಲಿ 30—40 ಲಕ್ಷ ರೂಪಾಯಿಗಳೆಂದರೆ ಅವರಿಗೇನೂ ಅದು ಅಷ್ಟು ದೊಡ್ಡ ಮೊಬಲಗಲ್ಲ. ಆದರೆ ಗೆಸ್ಟ್‌ಹೌಸ್‌ಗಳಲ್ಲಿ ವೆಚ್ಚವಾಗತಕ್ಕ 30—40 ರೂಪಾಯಿಗಳ ವಿಷಯವನ್ನು ಬಹಳ ದೊಡ್ಡದನ್ನಾಗಿ ಬರೆದಿದ್ದಾರೆ. ಹೀಗೆ 30—40 ರೂಪಾಯಿಗಳ ಲೆಕ್ಕವನ್ನೂ ಸಹ ಹಿಡಿದಾಡತಕ್ಕವರಿಗೇಕೆ ಆ 30—40 ಲಕ್ಷ ರೂಪಾಯಿಗಳ ಲೆಕ್ಕ ಸಿಕ್ಕಲಿಲ್ಲವೋ ತಿಳಿಯದಾಗಿದೆ. ನಿಜವಲ್ಲದ ವಿಷಯಗಳನ್ನು ಬರೆದಿರುವುದರ ಜೊತೆಗೆ, ಈ ಐ. ಸಿ. ಎಸ್. ಅಧಿಕಾರಿಗಳಿಂದ ಮಾತ್ರ ದಕ್ಷತೆಯುಳ್ಳ ಆಡಳಿತ ದೊರೆಯಲು ಸಾಧ್ಯವೆಂದು, ಚೀಫ್ ಸೆಕ್ರೆಟರಿಯನ್ನು ಮಾತ್ರ ಹೊಗಳಿದ್ದಾರೆ. ಈ ರೀತಿ ಸತ್ಯಕ್ಕೆ ದೂರದಿಂದ ಮಾತುಗಳನ್ನು ಬರೆಯುವುದರ ಜೊತೆಗೆ, ಸಂಬಂಧ ಪಟ್ಟವರ ಅಭಿಪ್ರಾಯವನ್ನು ಕೇಳುವ ಗೊಡವೆಗೂ ಹೋಗದೆ, ಇಲ್ಲದಿಲ್ಲದ ಆರೋಪಗಳನ್ನು ಮಾಡಿರತಕ್ಕದ್ದು ಮಾನ್ಯವಲ್ಲ, ಈ ಸಭೆ ಒಪ್ಪತಕ್ಕದ್ದಲ್ಲವೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅನಂತರ ಒಂದು ಕಡೆ ದೊಡ್ಡ ದೊಡ್ಡ ಕಟ್ಟಡಗಳು ಇದ್ದ ಮಾತ್ರಕ್ಕೆ ಅಧಿಕಾರಿಗಳೂ ಮಂತ್ರಿಗಳೂ ಚೆನ್ನಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ, ಕಟ್ಟಡಗಳಿಗೂ ಕೆಲಸಕ್ಕೂ ಸಂಬಂಧವಿಲ್ಲ ಎಂದು ಬರೆದಿರುತ್ತಾರೆ. ಇನ್ನೊಂದು ಕಡೆ ಹೀಗೆ ಬರೆದಿರುತ್ತಾರೆ:

> "Any person accustomed to Secretariats cannot be pleasantly surprised on visiting the Mysore Secretariat. The building itself, extravagant in conception and expensive in upkeep, with its strange medley of ostentation and inconvenience, its noise, its echoing rooms, its large verandahs, its absence of privacy, is not particularly conducive to sustained and concentrated work."

ಅದು ನಿಜವಾದರೆ ಚೀಫ್ ಸೆಕ್ರೆಟರಿಯವರು ಒಬ್ಬರು ಮಾತ್ರ ಬಹಳ ಚೆನ್ನಾಗಿ ಕೆಲಸ ಮಾಡುತ್ತಿರುವುದಾದರೂ ಹೇಗೆ! ಒಂದು ಕಡೆ ಬರೆದಿರುವುದಕ್ಕೂ ಇನ್ನೊಂದುಕಡೆ ಬರೆದಿರುವುದಕ್ಕೂ ಎಷ್ಟು ಅಸಮಂಜಸತೆ ಇದೆ ನೋಡಿ !

ಈ ಕಟ್ಟಡದಲ್ಲಿ ಕೆಲಸ ಸಮರ್ಪಕವಾಗಿ ನಡೆಯಲಾರದು ಎಂದು ಬರೆದಿರತಕ್ಕ ಮನುಷ್ಯರು ಮತ್ತಷ್ಟು ಐ. ಸಿ. ಎಸ್. ಅಧಿಕಾರಿಗಳು ಇದ್ದರೆ ಕೆಲಸ ಸಮರ್ಪಕವಾಗಿ ನಡೆಯುವುದು ಎಂದು ಬರೆದಿದ್ದಾರೆ.

ಈ ವಿಧಾನಸೌಧದ ಆರ್ಕಿಟೆಕ್ಚರಲ್ ಸ್ಟೈಲ್ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಹಲವರು ಈ ತರಹ ಶಿಲ್ಪರೂಪ (architectural style) ಬಹಳ ಸುಂದರವಾಗಿದೆ ಎಂದು ಹೇಳುತ್ತಾರೆ. ಆ ರೀತಿ ಇರಬಾರದಾಗಿತ್ತು, ಮಾಡರ್ನ್ ಆರ್ಕಿಟೆಕ್ಚರ್ "four line architecture or American architecture" ರೀತಿಯಲ್ಲಿದ್ದರೆ ಚೆನ್ನಾಗಿತ್ತು ಎಂದು ಹೇಳತಕ್ಕ ಕೆಲವರು ಇದ್ದಾರೆ. ಅದನ್ನು ನಾನು ಟೀಕೆ ಮಾಡುವ ಗೊಡವೆಗೆ ಹೋಗುವುದಿಲ್ಲ. ಏಕೆಂದರೆ, Building, dress and diet are matters of personal taste; it is not possible for everybody to have the same taste in building, dress and diet. Likewise people differ in their taste for architecture.

ಇಂಗ್ಲೆಂಡಿನಲ್ಲಿ architectural style ಒಂದು ತರಹ, ಅಮೆರಿಕದಲ್ಲಿ ಒಂದು ತರಹ, ಈಜಿಪ್ಟ್‌ನಲ್ಲಿ ಒಂದು ತರಹ, ಇಂಡಿಯಾದಲ್ಲಿ ಒಂದು ತರಹ. ಹೀಗೆ ಜನಗಳ ವೈವಿಧ್ಯ ಯಾವ ರೀತಿ ಪ್ರಕೃತಿದತ್ತವಾಗಿದೆಯೋ ಆರ್ಕಿಟೆಕ್ಚರಲ್ ಸ್ಟೈಲ್ಸ್‌ಸಹ ಅಷ್ಟೇ ಆಗಿದೆ.

ಸ್ವಾಮಿ, ಈ ಆರ್ಕಿಟೆಕ್ಚರಲ್ ಸ್ಟೈಲ್ ಚೆನ್ನಾಗಿಲ್ಲವೆಂದು ವಿಧಾನಸೌಧ ಕಮಿಟಿ ರಿಪೋರ್ಟಿನಲ್ಲಿ ಹೇಳಿದ್ದಾರೆ. ನನ್ನ ಅಭಿಪ್ರಾಯವಾದರೋ ಸ್ಪಷ್ಟವಾಗಿದೆ. ಚಂಡಿಘರ್‌ನಲ್ಲಿ ಫ್ರಾನ್ಸಿನ ಪ್ರಸಿದ್ಧ ಶಿಲ್ಪಕಾರರಾದ ಕರ್ಬೂಸರ್ ಎಂಬವರು ಸೆಕ್ರೆಟೇರಿಯಟ್ ಇತ್ಯಾದಿ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ. ಪಂಜಾಬಿನ ಲೆಜಿಸ್ಲೇಟಿವ್ ಕೌನ್ಸಿಲಿನ ಮತ್ತು ಅಸೆಂಬ್ಲಿಯ ಅಧ್ಯಕ್ಷರುಗಳು ಇಲ್ಲಿಗೆ ಬಂದಿದ್ದರು. ಅವರು ಪಂಜಾಬಿನಲ್ಲಿ ಕಟ್ಟುತ್ತಿರತಕ್ಕ ಸೆಕ್ರೆಟೇರಿಯಟ್ ಮತ್ತು ಅಸೆಂಬ್ಲಿ ಕಟ್ಟಡಗಳನ್ನು ಸ್ವತಃ ನೋಡಿದವರು ಮತ್ತು ಇಲ್ಲಿ ನಿರ್ಮಿತವಾಗುತ್ತಿದ್ದ ವಿಧಾನಸೌಧವನ್ನೂ ನೋಡಿರುವವರು.

The Speaker of the Punjab Legislative Assembly, Sri Guru Dayal Sing Dillon has written in the Vidhan Soudha Visitors Book thus :

> "I visited Bangalore specially to see the architectural style and all other details of new Vidhana Soudha building now under construction. We in Punjab have built our new Capital at Chandigarh—many new offices and buildings and structures are almost complete—built all under the guidance and advice of foreign architects and engineers. We had natural talent but that was not relied upon and anybody who raised fingers was snubbed down by our Prime Minister. We reconciled to his views—but reluctantly. So when I visit this place the idea of comparison and contrast between foreign and local talent is uppermost in my mind. Mr. Speaker Shri Rudrappa and his able Secretary and Chief Architect and the Chief Engineer were good enough to show me round and explain all the details

of the huge and massive building which will accommodate both the Assembly and the Legislative Secretariats. After seeing all, my views have been confirmed and rather vindicated that our own engineers can produce better results—that foreign architects can never add that essential requirement—national and State tradition and culture because we cannot expect them to know all that in detail. How I wish that we could get rid of foreign advisers at Chandigarh—all waste and useless expenditure on them. I am sure the engineers and architects in Mysore will show better results with less expenditure. I wish them all success—thanks to them all for courtesy shown.

The Chairman of the Punjab Legislative Council writes :

> "I was very keen to see the Assembly and Council chambers under construction at Bangalore and was extremely delighted and impressed by the design and architectural beauty of this building. It is really grand I must congratulate the architect and his assistants for this imposing building and thank Shri Sitaramaiah, Chairman of the Council, who took me round the building."

ಸ್ವಾಮಿ, ವಿಧಾನಸೌಧ ಕಮಿಟಿಯ ಚೇರ್ಮನ್‌ನಾದ ಶ್ರೀ ದೇವ್ ಅವರು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರು. ಅವರು ಇದನ್ನೆಲ್ಲ ಓದಿದ್ದರೆ ಗೊತ್ತಾಗುತ್ತಿತ್ತು; ಮಾನ್ಯ ಸದಸರು ವಿಸಿಟರ್ಸ್ ಪುಸ್ತಕವನ್ನು ನೋಡಿದಲ್ಲಿ ತಿಳಿಯುತ್ತದೆ.

Judges of the Supreme Court, Vice-Chairman of the Planning Commission, Ministers of the Central Government, German, English and foreign architects have all praised the beauty of this building.

ಇಂಡಿಯಾದೇಶದ ಎಷ್ಟೋ ಇಂಜಿನಿಯರುಗಳು ಕೂಡ ಹೊಗಳಿ ಬರೆದಿದ್ದಾರೆ. ಆದುದರಿಂದ ಈ ದಿವಸ ವಿಧಾನ ಸೌಧದ ಸ್ವರೂಪ ಸುಂದರವಾಗಿದೆಯೋ ಇಲ್ಲವೋ ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯ ವಿದ್ದರೂ ಇದು ಸುಂದರವಾಗಿವೆ, ಇದು ಮೈಸೂರು ಸಂಸ್ಥಾನಕ್ಕೆ ಭೂಷಣವಾಗಿದೆ ಎನ್ನುವವರ ಅಭಿಪ್ರಾಯ ಬಹಳ ಹೆಚ್ಚಾಗಿದೆ ಎಂದು ಹೇಳಿದರೆ ನಾನೇನೂ ಉತ್ಪ್ರೇಕ್ಷೆಮಾಡಿದ ಹಾಗಾಗುವುದಿಲ್ಲ. ಈ ವಿಷಯವನ್ನು ಅಲ್ಲಿಗೇ ಬಿಟ್ಟು ಬಿಡುತ್ತೇನೆ.

ಇನ್ನೂ ಒಂದು ಸ್ವಾಮಿ ಈ ವಿಧಾನ ಸೌಧದ ಖರ್ಚಿನ ವಿಚಾರ ಬರೆದಿದ್ದಾರೆ, ಪ್ರೊಸೀಜರ್ ವಿಚಾರ ಬರೆದಿದ್ದಾರೆ. Usual red tape procedure ಎಂದು ಏನು ಹೇಳುತ್ತಾರೆ ಆ ಪ್ರೊಸೀಜರನ್ನು ಅನುಸರಿಸಿದ್ದರೆ, ಈ ಕಟ್ಟಡವನ್ನು ಮುಗಿಸುವುದಕ್ಕೆ 10-15 ವರ್ಷಗಳಾದರೂ ಬೇಕಾಗುತ್ತಿತ್ತು.

11 A.M.

ಈ ಕಟ್ಟಡದ ಮುಂದೆ ಇರತಕ್ಕ ಅಠಾರಾ ಕಚೇರಿಯ ಕಟ್ಟಡವನ್ನು ಕಟ್ಟಿಸಿ ಸುಮಾರು 80 ವರ್ಷಗಳಾದವು ಅಷ್ಟು ಹಿಂದಿನ ಕಾಲದಲ್ಲಿಯೂ ಕೂಡ ಈ ರೀತಿಯಾದ ಕಟ್ಟಡವನ್ನು ಏಕೆ ಕಟ್ಟಬೇಕು ಎನ್ನುವ ವಾದ ಕೂಡ ಎದಿತ್ತು. ಇಷ್ಟು ದೊಡ್ಡ ಕಟ್ಟಡ ಏಕೆ ಎಂದು ಅಂದಿನ ವೈಸರಾಯರವರಿಗೆ ದೂರನ್ನೂ ಹೇಳಿದ್ದರು. ಆದರೆ, ಸರ್ ಮಾರ್ಕ್ ಕಬ್ಬನ್‌ರವರು ಈ ಕಟ್ಟಡ ವಾಗಬೇಕೆಂದು ಹೇಳಿ ಕಟ್ಟಿಸಿದರು. ಆ ಕಟ್ಟಡವನ್ನು ಕಟ್ಟಿಸುವುದಕ್ಕೂ ಕೂಡ ಎಂಟು ವರ್ಷಗಳಾದವು. ಎಂದರೆ ಈ ವಿಧಾನಸೌಧದ ಕಟ್ಟಡವನ್ನು ಎರಡು, ಎರಡೂವರೆ ವರ್ಷದೊಳಗೆಕಟ್ಟಿರತಕ್ಕದ್ದು ಒಂದುಮಹ ತ್ಸಾಧನೆ. That is an architectural feat in itself. ಇನ್ನು Extravagance ಎನ್ನುವ ಆರೋಪ ಮಾಡಿದ್ದಾರೆ. ಇದಕ್ಕಾಗಿ ಇಷ್ಟು ಹಣವನ್ನೇಕೆ ಖರ್ಚು ಮಾಡಬೇಕೆಂದು ಹೇಳಿ ಇದನ್ನು ನಿಧಾನವಾಗಿ ಮಾಡ ಬಹುದಾಗಿತ್ತು ಎಂದು ಹೇಳಿಬಿಟ್ಟಿದ್ದಾರೆ. ಹತ್ತು ವರ್ಷಗಳ ಮುಂಚೆ ಹೇಗಿತ್ತು ಎನ್ನುವ ವಿಷಯದಬಗ್ಗೆ ಇಷ್ಟು ಹೇಳಿದರೆ ಸಾಕಾಗುತ್ತದೆ. ಈ ಕಟ್ಟಡ ಕಟ್ಟುತ್ತಿದ್ದಾಗ ಒಂದು ಸಿಮೆಂಟು ಮೂಟೆಗೆ ಮೂರು ಮೂರೂವರೆ ರೂಪಾಯಿಗಳ ಬೆಲೆ ಇತ್ತು. ಈಗ ಸಿಮೆಂಟು ಮೂಟೆ ಒಂದಕ್ಕೆ ಏಳರಿಂದ ಏಳೂವರೆ ರೂಪಾಯಿಗಳವರೆಗೆ ಏರಿಹೋಗಿವೆ. ಇದೇ ರೀತಿ ಯಾಗಿ ಕಬ್ಬಿಣದ ಬೆಲೆಯೂ ಕೂಡ ಏರಿಹೋಗಿದೆ. ಹೀಗೆ ಆಗಿನ ಸಾಮಾನುಗಳ ಬೆಲೆಗಳಿಗಿಂತ ಈಗಿನ ಬೆಲೆಗಳು ಐದಾರರಷ್ಟು ಬೆಲೆ ಹೆಚ್ಚಾಗಿಹೋಗಿವೆ. ಹೀಗೆ ವರ್ಷ ವರ್ಷ ನಿಧಾನವಾಗುತ್ತ ಹೋಗಿದ್ದರೆ, the cost of construction would have increased by 10 per cent. 15 per cent, 20 per cent every year. By the time this building would have been completed according to the red tape method, it would have cost twice the amount which has cost today. ಇದಕ್ಕೇನೂ ದೊಡ್ಡ ಪರಿಣತರು ಅಥವಾ ಶಾಸ್ತ್ರಜ್ಞರು ಬೇಕಾಗಿಲ್ಲ. ನಾವೆಲ್ಲ ಸಾಮಾನುಗಳನ್ನು ಕೊಂಡುಕೊಳ್ಳತಕ್ಕವರು. ಆದುದರಿಂದ ಈ ಅಂಶವು ಸ್ವವೇದ್ಯವೇ ಆಗಿದೆ.

What is considered to be extravagance has been more than compensated by the earnestness and the speed with which this building has been completed.

[MR. DEPUTY SPEAKER in the Chair.]

ಸ್ವಾಮೀ ಈ ಕಟ್ಟಡವನ್ನು ಕಟ್ಟದೇ ಇದ್ದಿದ್ದರೆಬಹಳ ವಾಗಿ ಬೆಳೆದಿರುವ ಕಛೇರಿಗಳಿಗೆ ಸ್ಥಳ ಎಲ್ಲಿರುತ್ತಿತ್ತು! ಈಗ ಈ ಕಟ್ಟಡವೂ ಸಾಲದಾಗಿದೆ. ಇದು ಎಲ್ಲರೂ ತಿಳಿದುಕೊಂಡಿರುವ ವಿಷಯ. ಆದುದರಿಂದ ಈ ವಿಷಯವನ್ನು ಇನ್ನು ಹೆಚ್ಚು ಪ್ರಸ್ತಾಪಮಾಡುವುದಿಲ್ಲ.

(SRI K. HANUMANTHAIYA)

ಈ ಕಟ್ಟಡದ ವಿಷಯದಲ್ಲಿ ಮತ್ತೊಂದು ಆಕ್ಷೇಪಣೆ, ರಿವೈಸ್ಡು ಎಸ್ಟಿಮೇಟಿನಲ್ಲಿ ಬಹಳ ಹೆಚ್ಚಾಗಿದೆ ಎನ್ನುವುದು. ಇದಕ್ಕೆ ಕಾರಣವಿಷ್ಟೇ. ಒರಿಜಿನಲ್ಲು ಎಸ್ಟಿಮೇಟಿಗಿಂತಲೂ ಈ ಕಟ್ಟಡಕ್ಕೆ ಹತ್ತಾರು ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿ ಖರ್ಚಾಗುವುದಕ್ಕೆ ಮುಖ್ಯ ಕಾರಣ ಒಂದಿತ್ತು. ಮೊದಲು ಮೂರು ಅಂತಸ್ತಿನ ಕಟ್ಟಡವಾಗಬೇಕು ಎಂದು ತೀರ್ಮಾನ ವಾಗಿತ್ತು. ಅನಂತರ ಕರ್ಣಾಟಕದ ಏಕೀಕರಣ ವಾಗಬೇಕು ಎನ್ನುವ ಪ್ರಮೇಯ ಬಂದಾಗ ಅದು ಸಾಕಾಗುವುದಿಲ್ಲವೆಂದು ತೋರಿತು. ಹೊಸ ಸಂಸ್ಥಾನ ವಾದಾಗ ಇದು ಸಾಲುವುದಿಲ್ಲ, ಇನ್ನೂ ಒಂದು ಅಂತಸ್ತನ್ನು ಕಟ್ಟಬೇಕು ಎಂದು ಯೋಚಿಸಿದೆ. ಅದರಂತೆ ಮೂರು ಅಂತಸ್ತುಗಳಮೇಲೆ ನಾಲ್ಕನೆಯ ಅಂತಸ್ತನ್ನೂ ಕಟ್ಟಬೇಕೆಂದು ಅಪ್ಪಣೆಮಾಡಿದೆ. ಅದಕ್ಕಾಗಿ ರಿವೈಸ್ಡು ಎಸ್ಟಿಮೇಟು ಆಯಿತು. ಅನಂತರ ಈ ಕಟ್ಟಡದ ಪಕ್ಕದಲ್ಲೇ ಗ್ಯಾರೇಜುಗಳನ್ನೂ ಪ್ರತ್ಯೇಕವಾಗಿ ಕಟ್ಟಬೇಕಾಗಿಬಂತು. ಅದೂ ಒಂದು ಐಟಂ ಹೆಚ್ಚಾಯಿತು. ಇದು ಒಂದು ಮುಖ್ಯವಾದ ಎರಡನೆಯ ಕಾರಣ.

ನಾನು ಸರಕಾರದವರನ್ನು ಒಂದು ಪ್ರಶ್ನೆ ಕೇಳಿದ್ದೆ, ಈಗ ಸುಮಾರು ಇಪ್ಪತ್ತು ವರ್ಷಗಳಲ್ಲಿ ಕಟ್ಟಿದ ಕಟ್ಟಡಗಳಲ್ಲಿ ಒರಿಜಿನಲ್ ಎಸ್ಟಿಮೇಟಿಗಿಂತ ರಿವೈಸ್ಡ್ ಎಸ್ಟಿಮೇಟು ಹೆಚ್ಚಾಗಿರುವ ಕಟ್ಟಡಗಳೆಷ್ಟು ಎಂದು. ಎಷ್ಟು ದುಡ್ಡು ಹೆಚ್ಚಾಗಿ ಖರ್ಚಾಯಿತು ಎಷ್ಟು ಕಡಮೆಯಾಗಿ ಖರ್ಚಾಯಿತು ಎನ್ನುವ ಅಂಕಿ ಅಂಶಗ ಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದ ರಂತೆ ನೋಡಿದರೆ, ಮಲ್ಲೇಶ್ವರದಲ್ಲಿ ಒಂದು ಹಾಸ್ಪಿಟ ಲನ್ನು ಕಟ್ಟುವುದಕ್ಕಾಗಿ ಮೊದಲು 2,38,800 ರೂಪಾಯಿಗಳು ಆಗಿದ್ದುದು, ಮುಗಿಯುವ ಹೊತ್ತಿಗೆ 6,86,400 ರೂಪಾಯಿಗಳಾದವು. ಇದೇ ರೀತಿಯಾಗಿ ಕಬ್ಬನ್ ಪಾರ್ಕಿನಲ್ಲಿರುವ ಸೆಂಟ್ರಲ್ ಪಿ.ಡಬ್ಲ್ಯು.ಡಿ. ಆಫೀಸಿನ ಕಟ್ಟಡವನ್ನು ಕಟ್ಟುವುದಕ್ಕಾಗಿ ಮೊದಲು ಎಸ್ಟಿಮೇಟು ಆಗಿದ್ದುದು 4,11,330 ರೂಪಾಯಿಗ ಳೆಂದು ಇದ್ದದ್ದು ಮುಗಿಯುವಹೊತ್ತಿಗೆ ಅದು 7,07,309 ರೂಪಾಯಿಗಳಾದವು ಎಂದು ಹೇಳ ಲಾಗಿದೆ. ಇದರಂತೆ ಇನ್ನೂ ಕೆಲವು ವಿವರಗಳಿವೆ. ಇದನ್ನೆಲ್ಲಾ ಓದುವುದಕ್ಕಾಗಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಹೀಗೆ ಎಷ್ಟೋ ಕಟ್ಟಡಗಳನ್ನು ಕಟ್ಟುವುದಕ್ಕೆ ಮುಂಚಿತವಾಗಿ ಎಸ್ಟಿಮೇಟಾಗಿದ್ದ ಮೊತ್ತಕ್ಕಿಂತಲೂ ಮುಗಿಯುವವೇಳೆಗೆ ಅದಕ್ಕಿಂತಲೂ ಅಧಿಕವಾಗಿ ಖರ್ಚಾಗಿದೆ.

Sri T. PARTHASARATHY (Malleswaram)—If the Member yields, I want a clarification. You said about a hospital in Malleswaram the building for which cost Rs. 6 lakhs and odd. I want to know where that hospital eixsts.

Sri K. HANUMANTHAIYA.—C. K. Hospital, Malleswaram. I am reading from the figures furnished by Government.

ಇಷ್ಟೇ ಅಲ್ಲ. ಈ ಪಿ.ಡಬ್ಲ್ಯು.ಡಿ.ಯ ಸಂಪ್ರ ದಾಯವೇ ಹೀಗೆ. ಪ್ರಾಜೆಕ್ಟುಗಳಾಗಲಿ, ಕಟ್ಟಡ ಗಳಾಗಲಿ ಒರಿಜಿನಲ್ಲು ಎಸ್ಟಿಮೇಟುಗಳಿಗಿಂತ ಫೈನಲ್ ಎಸ್ಟಿಮೇಟುಗಳು ಬಹಳ ಹೆಚ್ಚಾಗಿ ಆಗುವುದು ಸಂಪ್ರದಾಯವಾಗಿದೆ. ಈ ವಿಧಾನ ಸಭೆಯ ಎನ್‌ಕ್ವೈರಿ ಕಮಿಟಿಯ ಸದಸ್ಯ ರಾಗಿ ಒಬ್ಬ ರಿಟೈರ್ಡ್ ಚೀಫ್ ಇಂಜನಿಯರಿದ್ದಾರೆ. ಪ್ರಾಮಾಣಿಕವಾಗಿ ಈ ವಿಷಯವನ್ನು ವಿಮರ್ಶಿಸಿ ಹೇಳಲು ಅವರಿಗೇ ಬಿಡುತ್ತೇನೆ. ಅವರು ರಿಟೈರು ಆಗುವುದಕ್ಕೆ ಮುಂಚೆ ಎಷ್ಟು ವರ್ಷಗಳಕಾಲ ಚೀಫ್ ಇಂಜನೀಯರಾಗಿದ್ದರೋ ಅಷ್ಟು ವರ್ಷಗಳ ಕಾಲ ದಲ್ಲಿ ಇಂಥ ನ್ಯೂನತೆಗಳನ್ನು ಪರಿಶೀಲನೆಮಾಡುವು ದಕ್ಕೆ ಒಂದು ಜುಡಿಷಿಯಲ್ ಕಮಿಟಿಯನ್ನು ಮಾಡಲಿ. ಅವರ ಕಾಲದಲ್ಲಿ ಯಾವ ಒಂದು ನ್ಯೂನತೆಯೂ ಇಲ್ಲವೆಂದು ಗೊತ್ತಾಗುತ್ತದೆಯೋ ನೋಡೋಣ. ಎಲ್ಲ ಸರ್ವ ಸಮರ್ಪಕವಾಗಿ ನಡೆದಿದೆ ಎಂದು ಕಮಿಟಿಯವರು ಅಭಿಪ್ರಾಯಪಟ್ಟರೆ ಅವರೇ ಅಭಿನಂದನೀಯರು. ಅವರ ಕಾಲದಲ್ಲಿ ಒರಿಜನಲ್ಲು ಎಸ್ಟಿಮೇಟುಗಳಿಗೂ ಫೈನಲ್ಲು ಎಸ್ಟಿಮೇಟುಗಳಿಗೂ, ಇರುವ ವ್ಯತ್ಯಾಸ, ಲೆಕ್ಕಪತ್ರಗಳಲ್ಲಿರುವ ಅಸಮರ್ಪ ಕತೆ, ಇವೆಲ್ಲ ಎಷ್ಟಿವೆ ಎಂಬುದನ್ನು ಸ್ಪಷ್ಟಪಡಿಸಬೇಕಾ ದರೆ ಅವರನ್ನು ಇಂತಹ ಕಮಿಟಿಯ ಮುಂದೆ ನಿಲ್ಲಿಸಿ ಹಿಂದಿನ ರಿಕಾರ್ಡುಗಳನ್ನೆಲ್ಲ ತರಿಸಿ ಅವರನ್ನು ತನಿಖೆ ಮಾಡಬೇಕು.

ಇನ್ನೊಬ್ಬರು ಸದಸ್ಯರು ಎಂದರೆ ಫೈನಾನ್ಷಿ ಯಲ್ ಸಕ್ರೆಟರಿಗಳಾಗಿದ್ದವರು. ಇವರ ಕಾಲದಲ್ಲಿ ಫೈನಾನ್ಷಿಯಲ್ಲು ಪ್ರೊಸೀಜರಿನಲ್ಲಿ ಈ ರೀತಿಯಾಗಿರ ಲಿಲ್ಲವೇ ಎನ್ನುವುದನ್ನು ತನಿಖೆ ಮಾಡಬೇಕು. ಇಲ್ಲಿರುವ ಎಲ್ಲ ಮಾನ ಸದಸ್ಯರಿಗೂ ಗೊತ್ತಿದ್ದಹಾಗೆ ಇವರಿಬ್ಬರಿದ್ದ ಕಾಲದಲ್ಲಿ ದಿವಾನರಾಗಿದ್ದವರು ಸರ್ ಮಿರ್ಜಾ ಇಸ್ಮಾಯಿಲ್‌ರವರು. ಕೆಲವು ದಿವಸಗಳ ಹಿಂದೆ ಸರ್ ಮಿರ್ಜಾರವರ ಕಾರ್ಯದಕ್ಷತೆಯನ್ನು ಈ ಸಭೆಯು ಅದ್ವಿತೀಯವಾಗಿ ಪ್ರಶಂಸೆಮಾಡಿತು ಅವರು ಪ್ರೊಸೀಜರಿಗಿಂತಲೂ ಕೆಲಸ ಕಾರ್ಯಗಳೇ ಮುಖ್ಯವೆಂದು ಹೇಳುತ್ತಿದ್ದರು. ಹಾಗೆಯೇ ಸರ್ಕಾರ ವನ್ನು ನಡೆಸಿದರು. ಹೀಗಿದ್ದರೂ, ವಿಧಾನ ಸೌಧದ ವಿಚಾರವಾಗಿ ಅವರು ಏತಕ್ಕೋಸ್ಕರ ಹೀಗೆ ಹೇಳುತ್ತಾ ನನ್ನನ್ನೂ ಅವರಕಡೆಗೆ ಎಳೆದುಕೊಂಡರೋ ಅವರ ಅಂತರಾತ್ಮನಿಗೇ ಗೊತ್ತು.

Sri J. B. MALLARADHYA.—I take it that that gentleman who was the Finance Secretary would not object to this kind of thing being done during Sir Mirza's time. Many irregularities were noticed in the then administration. He winked even at the Finance Minister. But now he wants to make much of it. That is the point.

ಶ್ರೀ ಕೆ. ಹನುಮಂತಯ್ಯ.—ಅದಕ್ಕಾಗಿ ಬರೀ ಆರೋಪಣೆಯನ್ನು ಮಾಡುವುದಿಲ್ಲ. ಈ ವಿಷಯ ಗಳನ್ನು ಪರಿಷ್ಕಾರವಾಗಿ ಕಂಡುಹಿಡಿಯುವುದಕ್ಕೆ ಒಂದು ಕಮಿಟಿಯನ್ನು ಮಾಡಲಿ. ಆ ಕಮಿಟಿಯವರು ಏನು ಹೇಳುತ್ತಾರೋ ಅದನ್ನು ನಾವು ಒಪ್ಪಿ ಕೊಳ್ಳೋಣ.

ಶ್ರೀ ಗೋಪಾಲರವರಂತೆ ಈ ವಿಧಾನ ಸೌಧದ ಕಮಿಟಿಯಲ್ಲಿದ್ದ ಮೆಂಬರುಗಳ ಮನೋವೃತ್ತಿ 19 ನೆಯ ಶತಮಾನಕ್ಕೆ ಸೇರಿದುದರಂತೆ ಇದೆ. Police State was the best State. ಎಂದು ಹೇಳ ಲಾಗುತ್ತಿತ್ತು. ಈ ವಿಧಾನಸೌಧ, ತಾಜ್ ಮಹಲ್

ವಿಕ್ಟೋರಿಯಾ ಮೆಮೋರಿಯಲ್ ಇಂಥ ಕಟ್ಟಡಗಳು ಪ್ರತಿವರ್ಷವೂ, ಪ್ರತಿ ದೇಶದಲ್ಲಿಯೂ ಕಟ್ಟುವಂತಹ ಕಟ್ಟಡಗಳಲ್ಲ. ಇಂತಹವುಗಳನ್ನು ಶತಮಾನಗಳಿಗೊಂದು ಸಾರಿ ಕಟ್ಟುವಂತಹವು. ಲಂಡನ್ನಿನಲ್ಲಿರುವ ವೆಸ್ಟ್‌ಮಿನಿಸ್ಟರು ಕಟ್ಟಡವನ್ನು ಕಟ್ಟಿದ್ದಾರೆ ಮತ್ತು ಬಿಗ್‌ಬೆನ್ ಶಿಖರವಿರುವ ಪಾರ್ಲಿಮೆಂಟು ಹೌಸನ್ನು ಕಟ್ಟಿದ್ದಾರೆ. ಇವುಗಳನ್ನು ಕಟ್ಟುವಾಗಲೂ ಕೂಡ ಹೀಗೆಯೇ ಇಂತಹ ಅದ್ಭುತವಾದ ವಿವಾದ ಎದ್ದಿತ್ತು. ಈ ಕಟ್ಟಡಗಳನ್ನು ಕಟ್ಟಿಸಿ ಮುಗಿಸಬೇಕಾದರೂ ಸುಮಾರು ಹದಿನೈದು ವರ್ಷಗಳಷ್ಟು ಕಾಲ ಹಿಡಿಯಿತು. ಈ ಎಲ್ಲ ಸಂಗತಿಗಳನ್ನೂ ಮನಸ್ಸಿಗೆ ತೆಗೆದುಕೊಂಡು ಸದಸ್ಯರು ಪರಾಮರ್ಶಿಸಬೇಕು. ಇಂತಹ ಕಾರ್ಯಗಳನ್ನು ಮತ್ತು ಇಂತಹ ಕಟ್ಟಡಗಳನ್ನು ಕಟ್ಟುವುದು ಸಾಮಾನ್ಯ ಕೆಲಸವಲ್ಲ.

ಈ ವಿಧಾನಸೌಧವನ್ನು ಕಟ್ಟಲು ಮೊದಲು ಮಾಡಿದಾಗಿನಿಂದಲೂ ಅದು ಒಂದು ದುರದೃಷ್ಟಕ್ಕೆ ತುತ್ತಾಗಿದೆ. ಈ ಕಟ್ಟಡಕ್ಕೆ ಅಸ್ತಿಭಾರ ಹಾಕಿದಾಗಿನಿಂದಲೂ ರಾಜಕೀಯ ವಿವಾದಕ್ಕೆ ಸಿಕ್ಕಿಕೊಂಡಿದೆ. ಅದಕ್ಕಾಗಿ ನಾನು ಯಾರನ್ನೂ ಆಕ್ಷೇಪಣೆಮಾಡುವುದಿಲ್ಲ. ಕೇಂದ್ರದಲ್ಲಿ ಮಂತ್ರಿಗಳಾಗಿರತಕ್ಕಂಥ ಶ್ರೀ ಕೆ. ಸಿ. ರೆಡ್ಡಿಯವರ ಅಣ್ಣಂದಿರು ಆಮರಣಾಂತ ಉಪವಾಸ ಮಾಡುತ್ತೇನೆ ಈ ಕಟ್ಟಡ ಕಟ್ಟಿದರೆ ಎಂದು ಕುಳಿತುಕೊಂಡರು. ಅವರದು ತಪ್ಪು ಎಂದು ಹೇಳುವುದಿಲ್ಲ. I am merely stating this to show that there has been controversy and difference of opinion on the subject from the very beginning. ಆದರೆ ನನಗೆ ಅನ್ನಿಸಿತು, ಇಂಥ ಒಂದು ಕಟ್ಟಡವನ್ನು ಕಟ್ಟಿಸತಕ್ಕದ್ದು ಸರಿ ಎಂದು. ಇಂಥ ಒಂದು ಶಿಲ್ಪರೂಪವನ್ನು ನಮ್ಮ ಸಂಪ್ರದಾಯಕ್ಕೆ ಅನುಗುಣವಾಗಿ ಸೃಷ್ಟಿಸತಕ್ಕದ್ದು ಸರಿ ಎನಿಸಿತು. ಕಟ್ಟಿಸಿದೆ. I take full respousibility; ಅದರಿಂದ ಬರತಕ್ಕ ಕೀರ್ತಿಗೂ ತಲೆಬಾಗುತ್ತೇನೆ ಮತ್ತು ಅದರಿಂದ ಬರತಕ್ಕ ಆಕ್ಷೇಪಣೆಗಳಿಗೂ ತಲೆಬಾಗುತ್ತೇನೆ. ವಿವಾದ ಹಲವು ವರ್ಷಗಳಿಂದ ನಡೆಯುತ್ತಿದೆ. ಆದರೆ ವಿಧಾನಸೌಧದ ಎನ್‌ಕ್ವೈರಿ ಕಮಿಟಿಯವರು ಅದಕ್ಕೆ ಕೈಹಾಕಿದ್ದು ಅಧಿಕಪ್ರಸಂಗತನ. ಈ ಕಮಿಟಿ ಅಪಾಯಿಂಟ್ ಮಾಡಿದವನು ನಾನು. ಅಕೌಂಟ್ ಸರಿಯಾಗಿಲ್ಲ ಎಂದು ಆಕ್ಷೇಪಣೆ ಬಂತು. ಅದಕ್ಕಾಗಿ ಈ ಸಮಿತಿ ನೇಮಕ ಮಾಡಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸ್ವಯಂಕೃತಾಪರಾಧವಾಯಿತು ಕಮಿಟಿಯನ್ನು ಅಪಾಯಿಂಟ್ ಮಾಡಿದ್ದು.

ಶ್ರೀ ಕೆ. ಹನುಮಂತಯ್ಯ.—ಹೌದು ಸ್ವಯಂಕೃತಾಪರಾಧವಾಯಿತು. ದಕ್ಷತೆ, ಸರಕಾರದ ಆಡಳಿತದಲ್ಲಿ ಮುಖ್ಯವಾಗಿ ಪ್ರಾಮಾಣಿಕತೆ ಇರಬೇಕು ಎಂದು ನನ್ನ ನಂಬಿಕೆ. ಆ ನಂಬಿಕೆಯ ಅಡಿಪಾಯದಮೇಲೆ ಮಂತ್ರಿಮಂಡಲವನ್ನು ನಡೆಸುವುದು ಒಳ್ಳೆಯದು. ಯಾವಾಗ ಮಂತ್ರಿಮಂಡಲಕ್ಕೆ ವಿರುದ್ಧವಾಗಿ ಅಪವಾದ ಬಂತೋ ಆಗ ಪರಿಷ್ಕಾರ ಮಾಡಬೇಕು ಎಂದು ನಾನೇ ಆ ಕಮಿಟಿಯನ್ನು ಅಪಾಯಿಂಟ್‌ಮಾಡಿ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಲೆಕ್ಕಪತ್ರಗಳ ವಿಚಾರ ಮಾಡಿ ಉಳಿತಾಯ ಎಷ್ಟುಮಟ್ಟಿಗೆ ಮಾಡಬಹುದು ನೋಡಿ ಎಂದು ಹೇಳಿದೆವು. ಈ ಕಟ್ಟಡದ ಪ್ರಮಾಣ, ವೆಚ್ಚ, ರೂಪ ಇತ್ಯಾದಿಗಳ ವಿಮರ್ಶೆಯನ್ನು ಆ ಕಮಿಟಿಗೆ ವಹಿಸಿರಲಿಲ್ಲ. ಟರ್ಮ್ಸ್ ಆಫ್ ರೆಫರೆನ್ಸಿಗೆ ಸೇರದೆ ಇರತಕ್ಕ ವಿಚಾರಕ್ಕೆ ಕೈಹಾಕಿ ಈ ಜಾಗದಲ್ಲಿ ಕಟ್ಟಡ ಕಟ್ಟಬಾರದಾಗಿತ್ತು, ಈ ಹಣದಲ್ಲಿ ಎರಡು ಕಟ್ಟಡಗಳನ್ನು ಕಟ್ಟಬಹುದಾಗಿತ್ತು, ರೂಮ್ಸ್ ಅಗಲ ಸಾಲದು, ವೆರಾಂಡ ಅಗಲ ಜಾಸ್ತಿ ಎಂಬ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿದರು. ಇದು ಅಧಿಕಪ್ರಸಂಗತನ. ಪ್ರಜಾಪ್ರಭುತ್ವ ಪದ್ಧತಿಗೆ ಅನುಗುಣವಾಗಿ ಈ ಕಟ್ಟಡವನ್ನು ಕಟ್ಟಿದೆ. 1953ನೆಯ ಇಸವಿಯಲ್ಲಿ ಫಸ್ಟ್ ಬಡ್ಜೆಟ್ ಸ್ಪೀಚಿನಲ್ಲಿ ಈ ಭವ್ಯ ಕಟ್ಟಡವನ್ನು ಕಟ್ಟಬೇಕು ಎಂದು ಪ್ರಸ್ತಾಪಮಾಡಿದ್ದೇನೆ. ಆಗಾಗ್ಗೆ ಬೇಕಾದ ಹಣವನ್ನು ಆಗಿನ ಶಾಸನ ಸಭೆಯವರು ಸಮಯಬಂದಾಗಲೆಲ್ಲಾ ಒಪ್ಪಿ ಕಟ್ಟುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಕಾನ್‌ಸ್ಟಿಟ್ಯೂಷನಲ್ಲಾಗಿ ಮಾಡಿದೆನೆಂದು ಲೀಗಲ್ ಲ್ಯಾಂಗ್ವೇಜಿನಲ್ಲಿ ಧೈರ್ಯದಿಂದ ಹೇಳುತ್ತೇನೆ. ಅಲ್ಲಲ್ಲಿ ಆಕ್ಷೇಪಣೆಗಾರರು ಇರಬಹುದು. ಆಗಿನ ಮಂತ್ರಿಮಂಡಲ ಕೆಲಸಮಾಡುವುದಕ್ಕೆ ಹೊಣೆಹೊತ್ತ ಶಾಸನಸಭಾ ಸದಸ್ಯರು ಮತ್ತು ಇತರರು ಈ ಕಟ್ಟಡವನ್ನು ಕಟ್ಟಕೂಡದು ಎಂದು ನಿರ್ಧಾರವಾಗಿ ನಿರ್ಣಯಮಾಡಿದ್ದರೆ ನಾನು ಕಟ್ಟಿಸುವುದಕ್ಕೆ ಆಗುತ್ತಿರಲಿಲ್ಲ. ಅದು ಎಲ್ಲರಿಗೂ ಗೊತ್ತು. ಈ ಕಟ್ಟಡವನ್ನು ಯಾರ ಕಣ್ಣುಮುಚ್ಚಿಯೂ ಕಟ್ಟಲಿಲ್ಲ. ಪ್ರತಿನಿತ್ಯ ಹೋಗುತ್ತಾ ಬರುತ್ತಾ ಪ್ರತಿಯೊಬ್ಬ ಸದಸ್ಯರೂ ವಿಶಿಷ್ಟ ವಿಧಾನಸೌಧದ ಕಟ್ಟಡವನ್ನೂ ಪ್ಲಾನನ್ನೂ ನೋಡುತ್ತಿದ್ದರು. ಆಗ ಇದ್ದ ಶಾಸನ ಸಭಾ ಸದಸ್ಯರಲ್ಲಿ ಬಹುಮಂದಿಗಳಲ್ಲಿದ್ದ ಅಭಿಪ್ರಾಯ ಇದನ್ನು ಕಟ್ಟತಕ್ಕದ್ದು ಸರಿ ಎಂದು; ಅವರ ಪೂರ್ಣ ಬೆಂಬಲ ಇತ್ತು. ಅದರಿಂದ ಇದು ನಿರ್ಮಾಣವಾಯಿತೇ ಹೊರತು, ನನ್ನ ಒಬ್ಬನಿಂದ ನಿರ್ಮಾಣ ಆಗಲಿಲ್ಲ. ಆರೀತಿ ಆಗುವುದು ಪ್ರಜಾಪ್ರಭುತ್ವ ಕಾಲದಲ್ಲಿ ಸಾಧ್ಯವೂ ಅಲ್ಲ. ಈ ವಿವಾದ ಬಹಳಕಾಲದಿಂದ ಮುಂದುವರಿದುಕೊಂಡು ಹೋಗುತ್ತಿದೆ. ಹಿಂದಿನ ಶಾಸನ ಸಭೆಯಲ್ಲಿಯೇ ನಾನು ಹೇಳಿದೆ, ಈ ಆಕ್ಷೇಪಣೆಗೆಲ್ಲ ನಾನೆ ಹೊಣೆ ಎಂದು. ಪೊಲಿಟಿಕಲ್ ಕಾಂಟ್ರವರ್ಸಿ ಈರೀತಿ ಏತಕ್ಕೆ ಬಂತು ಎಂಬುದನ್ನು ಹೇಳುತ್ತೇನೆ. ಭೇದಭಾವ ಅನೇಕಸಾರ್ತಿ ರಾಜಕೀಯದಲ್ಲಿ ಅನೇಕ ರೂಪಗಳನ್ನು ತಾಳುತ್ತದೆ. ಮನಸ್ಸಿಗೆ ಬೇಜಾರಾದಾಗ ಕೋಪಬಂದಾಗ ನಿಷ್ಪಕ್ಷಪಾತವಾಗಿ ನಾನಾಗಲಿ ಇನ್ನೊಬ್ಬರಾಗಲಿ ಒಂದು ಅಭಿಪ್ರಾಯ ಹೇಳುವುದು ಕಷ್ಟವಾಗುತ್ತದೆ. ಕಾಲಕಳೆದಹಾಗೆ ಅದರ ನಿಜ ಸ್ವಭಾವ ಒಳ್ಳೆಯದು, ಕೆಟ್ಟದ್ದು, ತನ್ನಷ್ಟಕ್ಕೆ ತಾನೇ ಎದ್ದು ಕಾಣುತ್ತದೆ.

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ವಿಧಾನಸೌಧ ಕಟ್ಟಡದ ಕಮಿಟಿಯ ಚೇರ್ಮನ್ ಯಾರು ಸ್ವಾಮಿ ?

Sri K. HANUMANTHAIYA.—Who are the final judges as to the wisdom of having built this building? That is the big question. ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಹಿಂದಿನ ಶಾಸನಸಭೆ ಇದಕ್ಕೆ ಹೊಣೆಹೊತ್ತರೂ, ಇದರ ಮೇಲೆ ಕೊನೆಯ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇನ್ನೂ ಹತ್ತಾರು ವರ್ಷಗಳಾಗುತ್ತವೆ. ಸುಮಾರು ಹತ್ತು ವರ್ಷಗಳಮೇಲೆ ಈಗಿನ ಪೊಲಿಟಿಕಲ್ ಕಾಂಟ್ರವರ್ಸಿಗಳು ಎಲ್ಲಾ ಮರೆತುಹೋದಮೇಲೆ ಸರಿಯಾದ, ನಿಷ್ಪಕ್ಷವಾದ ಅಭಿಪ್ರಾಯ ಹೊರಹೊಮ್ಮುತ್ತದೆ. ಈ ಸಭೆಯವರು ತಮ್ಮ ಅಭಿಪ್ರಾಯ ಹೇಳಬಹುದು. ಮುಂದಿನ ಸಭೆಯವರೂ ಹೇಳಬಹುದು. ಈರೀತಿ ಅಭಿಪ್ರಾಯಗಳು ಹತ್ತಾರು ವರ್ಷಗಳು ಇದನ್ನ ಕಟ್ಟಬೇಕಾಗಿತ್ತು, ಕಟ್ಟಬಾರದಾಗಿತ್ತು ಎಂದು ಬರುತ್ತವೆ. ನನ್ನ ತಂಗಿ ಶ್ರೀಮತಿ ನಾಗರತ್ನಮ್ಮನವರು

(SRI K. HANUMANTHAIYA)

ಒಂದು ಮಾತು ಹೇಳಿದರು. ಅದಕ್ಕೆ ಇಷ್ಟು ಮಾತ್ರ ಹೇಳುತ್ತೇನೆ. ಈ ಕಟ್ಟಡವನ್ನು ನಾನಾದರೂ ಕಟ್ಟಿದ್ದು ಬರೀ ದಕ್ಷತೆಯಿಂದಲೇ ಅಲ್ಲ. ಪ್ರಾಮಾಣಿಕತೆಯಿಂದಲೂ ಕಟ್ಟಿಸಿದ್ದೇನೆ. ಕಂಟ್ರಾಕ್ಟ್ ಕೊಡುವ ಕೆಲಸದಲ್ಲಾಗಲಿ ಮತ್ತಾವ ವಿಷಯದಲ್ಲಾಗಲಿ ಫೇವರಿಟಿಸ್‌ಮ್ ನಾನು ತೋರಿಸಿದವನು ಅಲ್ಲ. ನನ್ನ ದಕ್ಷತೆ ಪ್ರಾಮಾಣಿಕತೆ ವಿಷಯದಲ್ಲಿ ಟೀಕೆಮಾಡುವುದಕ್ಕೆ ಅವಕಾಶಕೊಡಲಿಲ್ಲ. ಏನಾದರೂ ತಪ್ಪು ಆಗಿದ್ದರೆ ಅದನ್ನು ಅಧಿಕಾರಿಗಳು ನನ್ನ ಗಮನಕ್ಕೆ ತಂದರೋ ತರಲಿಲ್ಲವೋ ಹೇಳುವುದಕ್ಕಾಗುವುದಿಲ್ಲ. ಮಿಲಿಟರಿ ಟ್ರಕ್ಸ್ ಕೊಂಡುಕೊಂಡ ವಿಷಯವನ್ನು ಪ್ರಸ್ತಾಪ ಮಾಡಿದರು. ಅದರ ವಿಷಯ ಹೇಳುತ್ತೇನೆ. ಮಿಲಿಟರಿ ಟ್ರಕ್ಸ್ ಕೊಳ್ಳುವುದು ಮೊದಲು ನನಗೆ ಗೊತ್ತಿಲ್ಲ. ಡಿಪಾರ್ಟ್‌ಮೆಂಟಿನಿಂದ ಶಿಫಾರಸ್ಸು ಬಂತು. ಚೀಫ್ ಇಂಜಿನಿಯರ್ ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಮಿಲಿಟರಿ ಟ್ರಕ್ಸ್ ತಕ್ಷಣ ಕೊಂಡುಕೊಳ್ಳಬೇಕು ಎಂದು ಶಿಫಾರಸ್ಸು ಬಂತು. ನಾನು ಬರೆದಿದ್ದೇನೆ, ಈರೀತಿ ಏಕದಮ್ ಡಿಪಾರ್ಟ್‌ಮೆಂಟಿನವರು ಕೊಂಡುಕೊಳ್ಳತಕ್ಕದ್ದು ನ್ಯಾಯವಲ್ಲ, ಸರಿಯಾದ್ದಲ್ಲ, ಕ್ರಮವಾಗಿ ಸ್ಟೋರ್ಸ್ ಪರ್ಚೇಜ್ ಕಮಿಟಿ ಮುಖಾಂತರ ಕೊಂಡುಕೊಳ್ಳಬೇಕು ಮತ್ತು ಅವು ಏನಾದರೂ ಹಳೆಯ ಟ್ರಕ್ಸ್ ಆದರೆ ಸರ್ಕಾರದವರು ಸರಿಯಾದ ಕಂಡೀಷನ್ಸ್ ಹಾಕಿ ತೆಗೆದುಕೊಳ್ಳಬೇಕು ಎಂದು. ಅದನ್ನು ವಿಧಾನಸೌಧ ಕಮಿಟಿಯವರು ತಿರುಗಿಸಿ ಬರೆದಿದ್ದಾರೆ, ಅಷ್ಟು ಜಾಗ್ರತೆಯಾಗಿ ಏತಕ್ಕೆ ಆರ್ಡರ್‌ಕೊಡಬೇಕಾಗಿತ್ತು, ಅದನ್ನು ನಿಧಾನವಾಡಬೇಕಾಗಿತ್ತು ಎಂದ, ನಿಧಾನ ಆದರೆ ದಕ್ಷತೆ ಇಲ್ಲ ಎಂದು ಹೇಳುವವರೂ ಅವರೇ, ಜಾಗ್ರತೆಯಾಗಿ ಮಾಡಿದರೆ ಸರಿಯಾಗಿಲ್ಲ ಎಂದು ಹೇಳುವವರೂ ಅವರೇ. ಒಂದುವೇಳೆ ತೆಗೆದುಕೊಳ್ಳತಕ್ಕದ್ದರಲ್ಲಿ ಕೊಡತಕ್ಕದ್ದರಲ್ಲಿ ತಪ್ಪು ಇದ್ದರೆ ರೆಕಾರ್ಡ್ ನೋಡಿ ಅದಕ್ಕೆ ಯಾರು ಜವಾಬ್ದಾರರು ಎಂದು ಕಂಡುಹಿಡಿದು ಪನಿಷ್‌ಮೆಂಟ್ ಮಾಡಿ. ಅದರಲ್ಲಿ ಯಾರದೂ ಅಭ್ಯಂತರವಿಲ್ಲ. ಅನಾನಿಮಸ್ ಇನ್‌ಫರ್‌ಮೇಷನ್‌ಮೇಲೆ ನಾವು ಆಕ್ಟ್ ಮಾಡಬಾರದು. ವಿಧಾನಸೌಧದ ವಿಚಾರದಲ್ಲಿ ಆಕ್ಷೇಪಣೆಮಾಡಿರತಕ್ಕ ಗೋರ್‌ವಾಲರವರು ಮೊಟ್ಟಮೊದಲನೆ ಪೇಜಿನಲ್ಲೇ ಸ್ಪಷ್ಟವಾಗಿ ಹೇಳಬೇಕಾಗಿತ್ತು; ಯಾರಿಂದ ಆಕ್ಷೇಪಣೆ ಬಂದಿದೆ. ಯಾವ ಯಾವ ತಪ್ಪುಗಳು ಆಗಿವೆ, ಯಾರು ಯಾರನ್ನು, ಏನೇನನ್ನು ವಿಚಾರಣೆಗೆ ವಹಿಸಬೇಕು ಎಂದು ಅದನ್ನೆಲ್ಲಾ ಬರೆಯಬೇಕಾಗಿತ್ತು. ಮೊಟ್ಟಮೊದಲೇ. ಸ್ವರಾಜ್ಯ ಬಂದಮೇಲೆ ಮಂತ್ರಿಗಳು ಮಾಡುತ್ತಿರುವುದು ಸರಿಯಾಗಿಲ್ಲ ಎಂಬ ಅಭಿಪ್ರಾಯ ಹೊಂದಿತಕ್ಕ ಮನುಷ್ಯರು ಉದ್ವೇಗದಿಂದ ಈರೀತಿ ಬರೆಯುವುದು ಸಹಜವೇ. ವಿಧಾನಸೌಧ ಕಮಿಟಿ ರಿಪೋರ್ಟ್ ಬಂದಮೇಲೆ ಸರ್ಕಾರ ಯಾವ ಯಾವ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡರೆ ನಾನು ಬೇಡ ಎಂದು ಹೇಳಿದವನಲ್ಲ. ಲೋಪದೋಷಗಳನ್ನು ಮುಚ್ಚಬೇಕು ಎಂದು ನಾನು ಹೇಳುವುದಿಲ್ಲ. ಕಮಿಟಿ ಅಪಾಯಿಂಟ್ ಮಾಡಿದಾಗ ನಾನು ಅಲ್ಲಿ ತಪ್ಪುಗಳನ್ನು ಮುಚ್ಚಬೇಕು ಎಂದಲ್ಲ, ಅವುಗಳನ್ನು ಸರಿಪಡಿಸಬೇಕು ಎಂದು ಮಾಡಿದವನು. ಇದಲ್ಲದೆ, ಮೈಸೂರು ಪೋಲೀಸಿನವರೆಲ್ಲರೂ ಅನ ಮಾನಕ್ಕೆ ಕಾರಣರು ಎಂದು ಹೇಳಿ, ಇಂಡಿಯಾ ಸರ್ಕಾರದ ಪೋಲೀಸ್ ಅಧಿಕಾರಿಗಳನ್ನು ತರಿಸಿ ವಿಚಾರಮಾಡಿಸಬೇಕು ಎಂದು ಆರೋಪಣೆ ಮಾಡಿದ್ದಾರೆ. ಅದು ಸಾಧುವಾದ ಆರೋಪಣೆಯೂ ಅಲ್ಲ ಪ್ರಾಮಾಣಿಕತೆಯುತವಾದದ್ದೂ ಅಲ್ಲ. ಮೈಸೂರು ಪೋಲಿಸ್‌ನವರೆಲ್ಲರೂ ದಾಕ್ಷಿಣ್ಯಪರರು ಎನ್ನುವುದಾದರೂ ಹೇಗೆ? ಅವರೇನೂ ನನ್ನ ನೆಂಟರಲ್ಲ. ಒಂದು ದಿವಸವೂ ಕೂಡ ಅವರಲ್ಲಿ ಯಾರ ಆಫೀಸಿಗೂ ನಾನು ಹೋದವನಲ್ಲ. ಈ ಕಮಿಟಿ ರಿಪೋರ್ಟ್ ಹೊರಬಿದ್ದಾಗ, ನಾನು ಮುಖ್ಯ ಮಂತ್ರಿಯಾಗಿ ಇರಲೂ ಇಲ್ಲ.

ಒಬ್ಬ ಸದಸ್ಯರು.—ಎನ್‌ಕ್ವೈರಿ ಕಮಿಟಿಯವರು ತಮ್ಮನ್ನು ಕೇಳಿದರೇ?

ಶ್ರೀ ಕೆ. ಹನುಮಂತಯ್ಯ.—ಇಲ್ಲ. ಅಥವಾ ಅವರು I.G.P. ಯವರನ್ನು ಕರೆದು ಈ ರೀತಿಯಾಗಿ ದೂರು ಬಂದಿದೆ, ವಿಚಾರಮಾಡಿರುವಿರಾ? ಎಂದು ಕೇಳಿದ್ದರೆ ವಿಷಯ ಗೊತ್ತಾಗುತ್ತಿತ್ತು. ಹಾಗೆ ಮಾಡುವುದಕ್ಕೆ ಯಾರಾದರೂ ಅಡ್ಡಿ ಬಂದಿದ್ದರೇ ಅಥವಾ Political Influence ಏನಾದರೂ ಉಪಯೋಗಿಸಿದ್ದರೇ? ಅದನ್ನೆಲ್ಲಾ ಅವರು ವಿಚಾರಮಾಡಿದ್ದರೆ ಚೆನ್ನಾಗಿತ್ತು. ಯಾರನ್ನೂ ಕೇಳದೆ ಯಾವುದೋ ಅನಾನಿಮಸ್ ಸಮಾಚಾರದಮೇಲೆ ಒಂದು ದೊಡ್ಡ ಆರೋಪಣೆ ಮಾಡತಕ್ಕದ್ದು—ನಾನು ಕ್ರಮವಾದ ಭಾಷೆಯಲ್ಲಿ ಹೇಳುವುದಾದರೆ,—ಸರ್ವಥಾ ಸರಿಯಾದ ಮಾರ್ಗವಲ್ಲವೆಂದು ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿರತಕ್ಕ ಪೋಲೀಸ್ ಅಧಿಕಾರಿಗಳೆಲ್ಲರೂ ಪ್ರಾಮಾಣಿಕರಲ್ಲ, ದಕ್ಷತೆಯಿಂದ ಕೆಲಸಮಾಡುವುದಕ್ಕೆ ಅವರಿಂದ ಸಾಧ್ಯವಿಲ್ಲ, ಎಂದು ಊಹಿಸಿಕೊಂಡು ಬರೆಯುವುದು ಸರಿಯಲ್ಲ. ಹಿಂದಿನ ಮೈಸೂರಿನಲ್ಲಿದ್ದ ಯಾವ ಅಧಿಕಾರ ವರ್ಗದವರೇ ಆಗಲಿ, ಸೆಕ್ರಟೇರಿಯಟ್ಟಿನವರೇ ಆಗಲಿ ಯಾರಿಗೂ ಕೂಡ Standards ಏನೂ ಇಲ್ಲವೆಂದು ಗೋರ್‌ವಾಲ ಬರೆದಿರುತ್ತಾರೆ. ಇಂಥವರನ್ನು ಕರೆಸಿ ವರದಿಮಾಡಿರೆಂದು ಹೇಳಿದುದು ಮೈಸೂರು ಮಂತ್ರಿಮಂಡಲದ ಸ್ವಯಂಕೃತಾಪರಾಧ ಎಂದು ಹೇಳುತ್ತೇನೆ ಅಷ್ಟೆ. ವಿಧಾನಸೌಧ ಎನ್‌ಕ್ವೈರಿ ಕಮಿಟಿಯ ವರದಿ ಮತ್ತು ಗೋರವಾಲ ಕಮಿಟಿಯ ವರದಿ—ಎರಡನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಗೋರವಾಲ ಹೇಳಿರುವುದು ತೋಳ ಕುರಿಮರಿಗೆ ಹೇಳಿದಂತಿದೆ. "ನೀನು ತಪ್ಪುಮಾಡದೆ ಇದ್ದರೆ ನಿಮ್ಮ ಅಪ್ಪ ಮಾಡಿರಬೇಕು ಅಥವಾ ತಾತ ಮಾಡಿರಬೇಕು" ಎಂದು ಹೇಳಿದಂತೆ, ಅವರ ಅಭಿಪ್ರಾಯ; ಅವರನ್ನು ನೇಮಕಮಾಡಿದ ನಿಜಲಿಂಗಪ್ಪನವರ ಮಂತ್ರಿ ಮಂಡಲದವರೂ ದಕ್ಷರಲ್ಲ, ಅವರ ಹಿಂದಿದ್ದವರೂ ಅಲ್ಲ, ಮುಂದೆ ಬರುವವರೂ ಅಲ್ಲ ಎಂದು ಹೇಳಿಬಿಟ್ಟಿದ್ದಾರೆ. ಅವರು ಸೆಕ್ರಟೇರಿಯೇಟ್ ವಿಷಯದಲ್ಲಿ Observation ಮಾಡಿರುವುದು ಮುಂತಾದನ್ನೆಲ್ಲಾ ನೋಡಿದರೆ, ಮೈಸೂರು ದೇಶದಲ್ಲಿ Standard Officer ಆದವರು ಇಲ್ಲ, ಎಲ್ಲಕ್ಕೂ ಹೊರಗಿನಿಂದಲೇ ಕರೆಸಬೇಕು ಎಂಬಂತಿದೆ. ನಮ್ಮ ಮೈಸೂರು ದೇಶವನ್ನು ಮಾದರಿ ಸಂಸ್ಥಾನ ಎಂದು ಕರೆಯುತ್ತಿದ್ದರು. Political differences ಏನೋ ಇತ್ತು; ಆದರೂ, admi istration ವಿಚಾರ ಯಾರೂ ಹೇಳುವಂತಿರಲಿಲ್ಲ. We fought for responsible Government. Then the Dewans opposed it because the situation was such. It was not their fault. Apart from the differences of political opinion and discussions based thereon in the Legislatures we had not much of a grievance against the administration. ಈಗ ಇವರು corruption ಮತ್ತು inefficiency

ಎಂದು ಹೇಳಿದ್ದಾರೆ. Corruption ಮತ್ತು inefficiency ಎಂಬ ಆರೋಪಣೆ ಹಿಂದಿನ ಎಷ್ಟೋ ಸರ್ಕಾರಗಳ ಕಾಲದಿಂದಲೂ, ಎಷ್ಟೋ ಶತಮಾನಗಳಿಂದಲೂ ಇತ್ತು. ಎಲ್ಲ ಸರ್ಕಾರಗಳು ವಿಷಯದಲ್ಲೂ ಅದನ್ನು ಹೇಳಿಯೇ ಹೇಳುತ್ತಾರೆ. ಮುಂದೆ ಬರುವ ಸರ್ಕಾರಗಳ ಮೇಲೆಯೂ ಇದು ಇದ್ದೇ ಇರುತ್ತದೆ. ಎಲ್ಲ ದೇಶಗಳಲ್ಲೂ ಹೀಗೆಯೇ. ಪ್ರಪಂಚದಲ್ಲಿ ಎಲ್ಲ ಕಡೆಯೂ ಹೀಗೆಯೇ, ಇಲ್ಲಿ ತಪ್ಪಿದೆ, ಅಲ್ಲಿ ತಪ್ಪಿದೆ ಎಂದು ಹೇಳುವುದು ರೂಢಿ. ಕಾಂಗ್ರೆಸ್ ಮಿನಿಸ್ಟ್ರಿಯೂ ಹೀಗೆಯೇ ಎಂದು ಹೇಳುವುದರಲ್ಲೇನೂ ಅತಿಶಯವಿಲ್ಲ. It is not because we feel that the entire administration has gone bad but because we want to keep it upto the standard. We therefore criticise objectively. ಆದರೆ, ಒಂದು. ಮನುಷ್ಯನ ಸ್ವಭಾವ ಯಾವರೀತಿ ಇರುತ್ತದೆಯೋ ಆರೀತಿ ಸರ್ಕಾರ ಇರುತ್ತದೆ. ಪ್ರಪಂಚದಲ್ಲಿರುವ ಎಲ್ಲ ಮನುಷ್ಯರನ್ನೂ ಕೂಡ ಸನ್ಯಾಸಿಗಳನ್ನಾಗಿ ಮಾಡುವುದಕ್ಕೆ, ಮಹಾತ್ಮರನ್ನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮನುಷ್ಯನಲ್ಲಿ ಸ್ವಾಭಾವಿಕವಾಗಿ ಇರತಕ್ಕ ಲೋಪದೋಷಗಳನ್ನು ಆಯಾ ಕಾಲದ ಸರ್ಕಾರಗಳು ಪ್ರತಿಬಿಂಬಿಸುತ್ತವೆ. ಇದು ಎಲ್ಲ ಕಾಲಕ್ಕೂ ಅನ್ವಯಿಸತಕ್ಕದ್ದು. ಇದೇ ಗೋರವಾಲರವರು ಐ.ಸಿ.ಎಸ್. ಆಫೀಸರಾಗಿದ್ದರು; ಕಲೆಕ್ಟರಾಗಿ ಎಷ್ಟೋ ಕಡೆ ಕೆಲಸ ಮಾಡುತ್ತಿದ್ದರು. ಅವರು ಎಲ್ಲೆಲ್ಲಿ ಕೆಲಸಮಾಡುತ್ತಿದ್ದರೋ ಅಲ್ಲೆಲ್ಲಾ 'ರಾಮರಾಜ್ಯ' ವಿತ್ತು, ಪೂರ್ತಾ corruption ಎಂಬುದು ಹೊರಟುಹೋಗಿತ್ತು ಎಂದು ಹೇಳುವುದಕ್ಕಾಗುತ್ತದೆಯೇ? ಹಾಗಿದ್ದರೆ, ಈಗಲೂ ನನ್ನ ಮನಸ್ಸಿಗೆ ಅನ್ನಿಸುತ್ತದೆ,—ಹೇಳಿದುದನ್ನೆಲ್ಲಾ implement ಮಾಡುವುದಕ್ಕೆ ಸಾಧ್ಯವಿಲ್ಲ, ಗೊತ್ತು—ಏನೆಂದರೆ, Let us make Sri Gorwala as the Chief Secretary. If he rectifies everything his criticisms are justified. When we approach big problems, we have to approach them with understanding, with a sense of what might be called responsibility: "If I am placed in the same position what would I do?" I find in Sri Gorwala's Report and approach neither responsibility nor understanding. ಈ ರಿಪೋರ್ಟಿನಲ್ಲಿ ಅವರು ಬರೆದಿರುವುದು ಯಾವುದೂ ಯಾರಿಗೂ ತಿಳಿಯದಿರುವುದಿಲ್ಲ. These are commonplace suggestions which I implemented and which the previous ministry implemented and which the subsequent ministry is going to implement. These are not great discoveries which Sri Gorwala has made. ನಿನ್ನೆಯ ದಿವಸ ನನಗೆ ಒಂದು ಜೋಡನೆ ಹೊಳೆಯಿತು, ರೆವಿನ್ಯೂ ಮಂತ್ರಿಗಳು ಈ ವರದಿಯಲ್ಲಿ ಎಷ್ಟೆಷ್ಟೋ ಏನೋ, ಸಲಹೆಗಳನ್ನು ತಾವು ಒಪ್ಪಿದ್ದೇವೆ ಎಂದು ಹೇಳಿದರು. Simple ಆಗಿ ಅವರು ಹಾಗೆ ಹೇಳಿದ್ದರೂ, ಅದರಲ್ಲಿ ಬಹಳ implications ಇವೆ. ಉದಾಹರಣೆಗಾಗಿ, ಹೇಳುತ್ತೇನೆ. ರಿಕ್ರೂಟ್‌ಮೆಂಟ್ ಆಗುವ ಸಮಯದಲ್ಲಿ ಹಿಂದುಳಿದ ಪಂಗಡದವರಿಗೂ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೂ ರಿಸರ್ವೇಷನ್ ಬೇಕಾದರೆ ಮಾಡಿ, ಆದರೆ ಆಮೇಲೆ ಪ್ರಮೋಷನ್ ಮಾಡುವ ಸಂದರ್ಭದಲ್ಲಿ ಆರೀತಿ ರಿಸರ್ವೇಷನ್ ಕೊಡಬೇಡಿ ಎಂದು ಗೋರ್‌ವಾಲ ಹೇಳಿದ್ದಾರೆ. It is not a new suggestion he has made. That is being implemented by this Government ever[1] since 1947 and even prior to that. ಇಂಥದಕ್ಕೆ ಸರ್ಕಾರದವರು ಏನು ಹೇಳಿದ್ದಾರೆ? "Accepted" ಎಂದು ಒಂದು ಪದದಲ್ಲಿ ಉತ್ತರ ಹೇಳಿಬಿಟ್ಟಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ? ಇದುವರೆಗೂ ಆರೀತಿ ಅಕ್ರಮ ನಡೆಸುತ್ತಿದ್ದರು ಈಗ ತಿದ್ದಿಕೊಂಡಿದ್ದೇವೆ. ಎಂಬ ಅರ್ಥ ಬರುತ್ತದೆ. Therefore when the Government replies they should state categorically that some of his suggestions are there already, being worked out, not from today but from a very long time, and that there is nothing new in what he has said. ಆದ್ದರಿಂದ ಸರ್ಕಾರದವರು 'Accepted' ಅಥವಾ 'Rejected' ಎಂದು ಮಾತ್ರ ಹೇಳಿದ್ದರಿಂದ, ಏನೋ ಪೂರ್ವದಿಂದಲೂ ಇಲ್ಲದ ಹೊಸ ಪದ್ಧತಿಯನ್ನು ಗೋರವಾಲಾರವರು ಹೇಳಿದ ಹಾಗೂ, ಅದನ್ನು ಸರ್ಕಾರದವರು ಒಪ್ಪಿಕೊಂಡ ಹಾಗೂ ಕೇಳಿದಂತಾಗುತ್ತದೆ.

ಹೀಗೆಯೇ ಗೋರವಾಲಾರವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಕೆಲವು ಮಾಡುವುದಕ್ಕೇ ಆಗದಂಥವು. ಇದು Prohibition ವಿಚಾರ. ಇದಕ್ಕೆ "It is under consideration" ಎಂದು ಹೇಳಿಲ್ಲ. ಅದನ್ನು "Rejected" ಎಂದು ಹೇಳಿಬಿಟ್ಟಿದ್ದಾರೆ. ವಾಸ್ತವವಾಗಿ Prohibition ನ್ನನ್ನು ಸರ್ಕಾರದವರು ನಡೆಸಿಕೊಂಡು ಬರುತ್ತಿದ್ದಾರೆ. ಹೀಗೆಯೇ ಗೋರವಾಲಾರವರು ಮಾಡಿರತಕ್ಕ ಅನೇಕ ಸಲಹೆಗಳನ್ನು ಸರ್ಕಾರದವರು ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ. ಅದೇನೂ ಹೊಸದಲ್ಲ. ಮೈಸೂರಿನ ಅಧಿಕಾರಿಗಳ ವಿಚಾರ ಹೇಳುತ್ತೇನೆ. ಮೈಸೂರಿನ ಅಧಿಕಾರಿಗಳನ್ನು I.C.S. ಅಧಿಕಾರಿಗಳಿಗೆ ಹೋಲಿಸಿ, ಇವರು ಚೆನ್ನಾಗಿ ಕೆಲಸಮಾಡುವುದಿಲ್ಲ, ಅವರು ಚೆನ್ನಾಗಿ ಕೆಲಸಮಾಡುತ್ತಾರೆ ಎಂದು ಬರೆಯುವುದು ಅಥವಾ ಮಾತನಾಡುವುದು ಅವಿವೇಕದ ಪರಮಾವಧಿ! ಏಕೆಂದರೆ, Every class of officers, I.C.S. or I.A.S. or others, work to the best of their abilities. There is no question of comparison. ನಮ್ಮ ಮೈಸೂರಿನ ಅಧಿಕಾರಿಗಳು ಸಂಬಳ ಕಡಮೆ ತೆಗೆದುಕೊಳ್ಳುತ್ತಿದ್ದರೂ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿದ್ದರು ಎಂದು ಹೇಳಬಲ್ಲೆ. I.C.S. ಅಧಿಕಾರಿಗಳು ಹಿಂದೆ ನಾಲ್ಕು-ಐದು ಸಾವಿರ ಸಂಬಳ ತೆಗೆದುಕೊಂಡು ಎಷ್ಟು ಕೆಲಸ ಮಾಡುತ್ತಿದ್ದರೋ ಅದಕ್ಕಿಂತಲೂ ಉತ್ತಮವಾಗಿ ನಮ್ಮ ಅಧಿಕಾರಿಗಳು ಕಡಮೆ ಸಂಬಳಗಳನ್ನು ತೆಗೆದುಕೊಂಡು ಕೆಲಸಮಾಡುತ್ತಿದ್ದರು. ಮೈಸೂರು ಸಂಸ್ಥಾನಕ್ಕೆ ಮಾದರಿ ಸಂಸ್ಥಾನ ಎಂಬ ಹೆಸರು ಬಂದಿತ್ತು. ಇದಕ್ಕೆ ಮುಖ್ಯಕಾರಣ ಆ ಅಧಿಕಾರಿಗಳ ನಿಷ್ಠೆ ಮತ್ತು ದಕ್ಷತೆ. ಮೈಸೂರು ಅಧಿಕಾರಿಗಳ ಆಡಳಿತ ಚೆನ್ನಾಗಿರಲಿಲ್ಲವೆಂದು ಯಾರೂ ಹೇಳಲಿಲ್ಲ. This is the first time in the history of Mysore, a man like Sri Gorwala walks into the Secretariat to blame everybody and decry everybody,

(ಶ್ರೀ ಕೆ. ಹನುಮಂತಯ್ಯ)

not only the present but the past. This is the very height of impertinence. ಅವರು ಸಂಗತಿಗಳನ್ನು ಅರ್ಥಮಾಡಿಕೊಂಡಿರುವ ಬಗೆ ನೋಡಿ! ಯಾರಾದರೂ ದೊಡ್ಡವರು ಬಂದಾಗ ಗೌರವಕೂಟಗಳಿಗೆ ಶಾಸನಸಭಾ ಸದಸ್ಯರುಗಳನ್ನು ಬರಮಾಡಿಕೊಳ್ಳುವುದಕ್ಕೆ invitations ಕಳುಹಿಸುತ್ತಾರೆ—ಇದು ಸರ್ಕಾರದವರು ಮಾಡಬೇಕಾದ ಕರ್ತವ್ಯ. ಪಾರ್ಟಿ ಸರ್ಕಾರ ಇದು ಆದರೂ, we are like a family, we treat every legislator with consideration—ಆಹ್ವಾನಿಸುವುದರಲ್ಲಿ ಶಾಸನಸಭಾ ಸದಸ್ಯರಲ್ಲಿ ಪಕ್ಷಪಾತಮಾಡಬಾರದೆಂದು ಒಬ್ಬ ಸದಸ್ಯರು ಕೇಳಿದರೆ ಅವರ ಉದ್ದೇಶವನ್ನೇ ತಿರುಗುಮುರುಗು ಮಾಡಿ, ಶಾಸನ ಸಭಾ ಸದಸ್ಯರಿಗೆ ತಿಂಡಿಯಮೇಲೆ ದೃಷ್ಟಿಯೇ ಹೊರತು, ಎಷ್ಟು ದುಡ್ಡು ಖರ್ಚಾಗುತ್ತದೆಂದು ಯೋಚನೆಮಾಡುವುದಿಲ್ಲ ಎಂದು ಹೇಳಿದ್ದಾರಲ್ಲಾ! He thinks perversely. Perversity is the hallmark of Gorwala's psychology.

ಇನ್ನು ಈ ರಿಪೋರ್ಟಿನ ವಿಷಯಗಳ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪಮಾಡುವುದಿಲ್ಲ. ಅನೇಕರು ಮಾತನಾಡುವವರು ಇನ್ನೂ ಇದ್ದಾರೆ. ಅವರು ಅನೇಕ ವಿಷಯಗಳನ್ನು ಸಭೆಯ ಗಮನಕ್ಕೆ ತರುವವರಿದ್ದಾರೆ. ಆದ್ದರಿಂದ ಅದರ ಬಗ್ಗೆ ನಾನು ಹೇಳದೆ, ಆಡಳಿತದ ದಕ್ಷತೆ ಹೆಚ್ಚಬೇಕಾದರೆ ಏನುಮಾಡಬೇಕೆಂಬ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀ ಗೋರವಾಲರವರಿಗೆ ಆ ಯೋಚನೆ ಹೊಳೆದಿಲ್ಲ. 19ನೆಯ ಶತಮಾನದ I.C.S. ಬ್ಯೂರೋಕ್ರಾಟಿಕ್ ಸ್ಟ್ಯಾಂಡರ್ಡೇ ಅವರಿಗೆ ಸ್ಟ್ಯಾಂಡರ್ಡ್ ಎಂಬುದು. ನಮ್ಮಲ್ಲಿ 70–80 ವರ್ಷದ ಮುದುಕರು ಮಾತನಾಡುವುದನ್ನು ನೋಡಿದ್ದೇವೆ. 'ನಮ್ಮ ಕಾಲ ಎಷ್ಟು ಚೆನ್ನಾಗಿತ್ತು. ಈಗ ಕಾಲವೆಲ್ಲಾ ಕೆಟ್ಟುಹೋಯಿತು. ನಮ್ಮ ಕಾಲದಲ್ಲಿ ರಾಗಿ, ಭತ್ತ, ಹೇಗೆ ಬೆಳೆಯುತ್ತಿತ್ತು! ಮನುಷ್ಯರು ಹೇಗಿದ್ದರು' ಎಂದೆಲ್ಲಾ ಹೇಳುವುದ ಅವರ ಸ್ವಭಾವ.

11-30 A.M.

This is the psychology of old age. This psychology overtakes every individual ordinarily.

Sri M. C. NARASIMHAN.—When did you develop that psychology?

Sri K. HANUMANTHAIYA.—I will develop that psychology when Communist dictatorship becomes established.

Sri M. C. NARASIMHAN.—The way in which it is treated is crystal clear.

ಶ್ರೀ ಕೆ. ಹನುಮಂತಯ್ಯ.—ನಮ್ಮ ಕಾಲದಲ್ಲಿ ಎಲ್ಲಾ ಸಮರ್ಪಕವಾಗಿತ್ತು. ಇನ್ನೊಬ್ಬರ ಕಾಲದಲ್ಲಿ ಸಮರ್ಪಕವಾಗಿಲ್ಲವೆನ್ನುವಂಥಾದ್ದು ಸಾಧಾರಣವಾದ ವಿಷಯ. ನೆಗಡಿ, ಸೀನು ಸಾಮಾನ್ಯವಾಗಿ ಎಲ್ಲರಿಗೂ ಬರುತ್ತದೆ. ಹಾಗೆ ಇದೊಂದು ಅಂಟುಜಾಡ್ಯ. ನಾನು ಹೆಸರ ಹೇಳುವುದಿಲ್ಲ. ಬಹಳ ದೊಡ್ಡ ದೊಡ್ಡವರ ಹತ್ತಿರ ನಾನು ಮಾತನಾಡಿದ್ದೇನೆ. They grow very critical of the present administration. Recently Dr. Jayakar died. I had met him several times. He was one of the great men of India. He was feeling thoroughly aggrieved and dissatisfied with the present administration. ಒಂದುಸಾರಿ ಅವರ ಮನೆಗೆ ಹೋಗಿದ್ದೆ. ಇಂಗ್ಲೆಂಡಿಗೂ ಹೋಗಿ ನೋಡಿದ್ದೇನೆ. ಇಂಗ್ಲಿಷ್ ಕಂಟ್ರಿ ಕಾಟೇಜ್ ಯಾವ ರೀತಿ ಇದೆಯೋ ಅದೇ ರೀತಿಯಲ್ಲಿ ಅವರು ತಮ್ಮ ಮನೆಯನ್ನು ಕಟ್ಟಿಸಿದ್ದಾರೆ. He had imbibed English culture and traditions to such an extent that he did not want the Indian type of building for his residence. He built for himself a building of English cottage type. ಇದೊಂದು ಮನೋವೃತ್ತಿ. Some of us may be behind times; some of us on par with time; some of us may be in advance of time; these are the three categories. It is only he who rises above these limitations that can express an impartial opinion. Sri Gorwala is one of the casualties of this lopsided psychology of oldishness. ಹಿಂದೆ ವೈಸರಾಯ್ ಅವರ ಕಾಲದಲ್ಲಿ ರಾಜ್ಯವನ್ನು I. C. S. ವರ್ಗದವರೇ ಆಳುತ್ತಿದ್ದರು. ಗೌರ್ನರ್ ಸ್ಥಾನದಲ್ಲಿ ಆಳುತ್ತಿದ್ದವರು ಸೀನಿಯರ್ ಮೋಸ್ಟ್ ಐ.ಸಿ.ಎಸ್. ಆಫೀಸರುಗಳು. ಆಗ ಇಂಡಿಯಾ ದೇಶದ ರಾಜ್ಯಭಾರ ಕ್ರಮ ಶೇಕಡಾ 99 ಪಾಲು ಐ. ಸಿ. ಎಸ್. ಅಧಿಕಾರಿಗಳ ಪಾಲಾಗಿತ್ತು. ಈಗ ಕಾಲ ಬದಲಾಯಿಸಿತು. ಎಲ್ಲಿ ಬ್ಯೂರೊಕ್ರಸಿ ಇತ್ತೋ ಅಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಿದೆ. ಆದರೆ ಪ್ರಜಾಪ್ರಭುತ್ವದ ನಡೆವಳಿಕೆಗಳಿಗೂ, ಈ ಬ್ಯೂರೋಕ್ರಸಿ ನಡೆವಳಿಕೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಪ್ರಜಾಪ್ರಭುತ್ವದಲ್ಲಿ ಯಾರು ಅಡ್ಮಿನಿಸ್ಟ್ರೇಷನ್ನಿಗೆ ಮುಖ್ಯ ಕಾರಣರು? ಗೋರ್ವಾಲ ಕಮಿಟಿ ವರದಿಯಿಂದ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಮೊದಲನೆಯದಾಗಿ ಯಾವುದಾದರೂ ಒಂದು ಕೆಲಸಕ್ಕೆ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಒಬ್ಬ ಕ್ಯಾಂಡಿಡೇಟ್ ಬಂದಾಗ, In sizing up the personality, if the recruiting authorities look only at the hand, feet and trunk of the body of the candidate and do not lift their head to see his face, they will not be able to size up his personality. In fact, the personality lies not in the trunk of the body but in the head of the body. ಪೂರ್ವಕಾಲದಲ್ಲಿ ಸಂಸ್ಕೃತದಲ್ಲಿ ಒಂದು ಗಾದೆ ಬರೆದಿದ್ದಾರೆ. "ಯಥಾ ರಾಜಾ ತಥಾ ಪ್ರಜಾ" ಎಂದು. ಯಾವರೀತಿ ರಾಜನಿರುತ್ತಾನೋ ಆ ರೀತಿ ಪ್ರಜೆಗಳೂ ಇರುತ್ತಾರೆ. ಈಗ ಆ ಗಾದೆಯನ್ನು ಬದಲಾಯಿಸಿ ಹೇಳಬೇಕು. ಪ್ರಜಾಪ್ರಭುತ್ವದಲ್ಲಿ ಯಾವರೀತಿ ಮಂತ್ರಿಮಂಡಲವಿರುತ್ತದೋ ಆ ರೀತಿ ಸರ್ಕಾರ ನಡೆಯುತ್ತದೆ. ಯಾವ ರೀತಿ ಮುಖ್ಯ ಮಂತ್ರಿಗಳು ಇರುತ್ತಾರೋ ಅವರ ಪರ್ಸನಾಲಿಟಿಗನುಗುಣವಾಗಿ ಸರ್ಕಾರ ನಡೆಯುತ್ತದೆ. ನಾಳೆ ದಿವಸ ಎಂಥ ಐ.ಸಿ.ಎಸ್. ಸೆಕ್ರೆಟರಿಯಾಗಲಿ,

ಮುಖ್ಯಮಂತ್ರಿಗಳು ಮಾಡಿದ ಆರ್ಡರನ್ನು ಡಿಸ್ಒಬೆ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಡಿಪಾರ್ಟ್‌ಮೆಂಟಲ್ ಹೆಡ್ ಕೂಡ ಆ ರೀತಿ ಹೇಳುವುದಕ್ಕಾಗುವುದಿಲ್ಲ. The Chief Secretary, all the Secretaries and Departmental Heads are merely the hands and feet of the administration. The real personality of the administration lies, not with the officers, whether they are non-gazetted or gazetted, whether they are I.A.S. or I.C.S., but with the set of people in whom the Constitution vests the executive authority of the Government. That executive authority is vested in the Ministry. ಆದ್ದರಿಂದ ಈ ಅಧಿಕಾರಿಗಳನ್ನು ಶಿಕ್ಷೆ ಮಾಡುವುದಕ್ಕೆ ನಮಗೆ ಅಧಿಕಾರವಿದೆ. ಉತ್ತೇಜನ ಕೊಡುವುದಕ್ಕೂ ಅಧಿಕಾರವಿದೆ. ಅವರನ್ನು ಇದಕ್ಕೆ ಕಾರಣರು ದಕ್ಕೆ ಕಾರಣರು ಎಂದು ಶಿಕ್ಷೆ ಮಾಡಬಹುದು. ಆ ಅಧಿಕಾರ ಮಂತ್ರಿಮಂಡಲಕ್ಕೆ ಸೇರಿದೆ. ಆದುದರಿಂದ ಯಾವ ರೀತಿ ಮಂತ್ರಿಮಂಡಲ ಇರುತ್ತದೋ ಆ ರೀತಿ ಸರ್ಕಾರದ ಕೆಲಸಕಾರ್ಯಗಳು ನಡೆಯುತ್ತವೆ. ಇದನ್ನು ಹೆಚ್ಚು ಪ್ರಸ್ತಾಪ ಮಾಡಬೇಕಾಗಿಲ್ಲ. ಪ್ರಾಜ್ಞರಾದಂಥ ಮಾನ್ಯ ಸದಸ್ಯರಿಗೆಲ್ಲರಿಗೂ ಈ ವಿಷಯ ಗೊತ್ತಿದೆ. ಯಾವ ಮಿನಿಸ್ಟ್ರಿಯೇ ಬರಲಿ ಸ್ಟಬಲಟ ಇರಬೇಕು. ಒಂದೊಂದು ಮಿನಿಸ್ಟ್ರಿ ಒಂದೊಂದು ವರ್ಷ—ಎರಡು ವರ್ಷಗಳಲ್ಲಿಯೇ ಹೊರಟುಹೋಗುವುದಾದರೆ, ಪ್ರಭಾವಯುತವಾಗಿ ಕೆಲಸ ನಡೆಯುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸದಸ್ಯರು ಹೇಳಿದ ಹಾಗೆ ಆಗಾಗ ಸರ್ಕಾರವನ್ನು ಮುರಿಗೆ ತಳ್ಳುತ್ತಿರುವಾಗ ಈಗಿರುವ ಆಡಳಿತ ಪಕ್ಷವನ್ನೇ ಮುಂದಿನ ಎಲೆಕ್ಷನ್‌ವರೆಗೂ ಮಂತ್ರಿಮಂಡಲದಲ್ಲಿರುವುದಕ್ಕೆ ಕಾಂಗ್ರೆಸ್‌ಪಕ್ಷ ಬಿಡುತ್ತದೆಯೇ?

ಶ್ರೀ ಕೆ. ಹನುಮಂತಯ್ಯ.—ವಿರೋಧಪಕ್ಷದವರು ಇಂತಹ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅದಕ್ಕೂ ಉತ್ತರ ಹೇಳುತ್ತೇನೆ. The Ministry's proper composition and the Ministry's stability ಇವೆರಡೂ ಸಂಪೂರ್ಣವಾಗಿ, ಸಮರ್ಪಕವಾಗಿ ಯಾವ ಮಂತ್ರಿಮಂಡಲದಲ್ಲಿರುತ್ತದೋ ಅದರಿಂದ ರಾಜ್ಯಾಡಳಿತ ದಕ್ಷತೆಯಿಂದ ನಡೆಯುತ್ತದೆ. ಆಗ ಎಲ್ಲರೂ ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಅಪ್ರಾಮಾಣಿಕತೆಯ ಪ್ರಶ್ನೆ ಬರುವುದಿಲ್ಲ.

Whatever be the advice they may tender, whatever be the notes they may put up, Officers have to implicitly obey the Government orders. Government Orders are not one or two. They are as numerous as there are files. The Ministry makes them and is responsible for all of them, directly or indirectly. The Ministers have to deal with hundreds and hundreds of files. Therefore, the ultimate authority for good Government, is of the Ministry; ultimate authority as well as responsbility vests in the Ministry not only legally under the Constitution but politically also. Unless the Ministers command sufficient respect and confidence of the Legislature and of their party, they will not be able to run a good administration. The constitutional structure of Government is so changed that the authority and responsibility have been transferred completely to the Ministry. There is also this handicap. When political animosities flare up, opponents seek to create an atmosphere of unjust attacks. They will make what is capable of difference of opinion, as *mala fide* and a charge that is doubtful as certainty. This is all a political game to oust Ministries and get into their place. The Ministry's composition and the Ministry's stability are the two feet of good administration.

Ordinarily according to the law of jurisprudence we have got to presume everybody to be innocent until he is proved guilty. In the legislature discussions take place on the presumption that our opponents are guilty; with this kind of criticism, ultimately the very democratic set-up comes into contempt at the hands of people, particularly I.C.S. people who entertain very strange ideas about their prestige and efficiency. The other day I was talking to a General of the Army. His name is very well-known. He was talking contemptuously of politicians. It so happens that we politicians are also responsible for this to some extent because sometimes we throw mud at each other and wash dirty linen in public. What I want to say is that in these accusations and allegations of politicians there is not so much truth as there is anxiety to replace one set by the other. This may apply inter-party or Government party versus Opposition party. In our anxiety to get into Government we accept, as I said, non-existing facts as doubts and doubts as facts. I make bold to say that Ministers throughout India have been more honest than many a man who belongs to the category of Gorwalas They have sacrificed as no one else has done for the freedom of the country and if these people are not particular about good government for

(ಶ್ರೀ ಕೆ. ಹನುಮಂತಯ್ಯ)

their people, I venture to say nobody else is. ಹೀಗೆ ನಾವು ಒಬ್ಬರನ್ನೊಬ್ಬರು ತೇಜೋವಧೆ ಮಾಡುತ್ತಿದ್ದರೆ ಆಗ ಸಾರ್ವಜನಿಕರ ಮನಸ್ಸಿನಲ್ಲಿ ಈ ಪ್ರಜಾಪ್ರಭುತ್ವಾಡಳಿಕ್ಕಿಂತ ಮಿಲಿಟರಿ ಆಡಳಿತವೇ ಲೇಸು ಎಂದೆನ್ನುವ ಹಾಗೆ ಆಗುತ್ತದೆ. That is what happened in Pakistan. Therefore, often I have been afflicted by anxiety and even dissatisfaction when people like my friend continuously interrupt the Assembly proceedings, and make irresponsible criticisms. It is derogatory to the dignity of the Assembly. We have got to maintain the dignity and decorum of the Assembly before the Press and the public. It is this deficiency on our part that is bringing us into contempt not only at the hands of the military people but also at the hands of the I.C.S. people. So I appeal to you and everyone who has faith in democracy to criticise only when something wrong has been done, only when you are convinced sincerely that a wrong step has been taken. Otherwise, let us make suggestions and proposals. My friend there made a remark that I have grown wise. I confess. Today if I play any role in Mysore politics, if I play any role in the progress of my country, I want to play the role of reconciliation which will lead to good government. We in the Congress Party have committed several mistakes. It has been said by some that there was stability in the administration when I was at the head of the administration and that ever since the day I relinquished office there has been neither stability nor peace in the administration. It is not my fault and it is not my making also that no Ministry has been able to work with stability and with cofidence. It is not that I am a great man and I can do things better than others. There are several people in this Party and in this House who can administer the State better than I can do. I confess that. The trouble that has brought us into this sorry state is the general psychology that is set in motion that to upset the Ministry and try to get into their shoes is the noblest of occupations. My friend Sri Muckannappa says: "Don't disturb this Ministry". I am not one of those who want to turn out the Ministry for the mere fun of it. In this Ministry there are men who are my good friends. But it is not merely on the basis of friendship that I get my ideas influenced. There are people in the Ministry who have worked for the country for over a quarter of a century with great earnestness and zeal. So far as improving the administration is concerned, they are second to none, second not even to Gorwala. But the fact remains that the Ministry has to be stable. Stability does not come merely because you get into the Ministry and then ask for stability. We must evolve stability. I want ultimately the Congress to produce a very stable Ministry, a Ministry of efficient men, a Ministry in which the Ministers have a record of service to their country, and more than all these things, a Ministry which commands the confidence of all sections particularly of the Congress Party. If you try to form a Ministry consisting of only one particular class or group or area, the rest of the party will not be happy. I also make bold to say that it is not my intention to turn out all these Ministers and substitute another set of people in their place. If I want to do that, I can do it with better effect than many a member, but I have refrained from doing so. I am not one of those who believe in opposition for the sake of opposition. I have been the Leader of the Opposition for over 10 years. You can see my record as Leader of the Opposition. It is not that I want to oppose for its own sake. That is not the path which I have to pursue. I want a set-up which commands the confidence of all sections of the Congress Party and I want a Ministry which commands the respect of the officials and the respect of the people. Without respect and fear no administration can function properly. From this I do not want anybody to draw an uncharitable conclusion that the present set-up of Ministers is deficient in this respect. The trouble with the Congress Party today is that out of about 200 of us there are at least 50 or 60 people who can be good Ministers. We are surplus so far as good manpower is concerned. That is our difficulty. Therefore, Sir,

I make a prayer ; I am a believer in the efficacy of prayer. I make a prayer not only to the Members of the Treasury Benches but also to the Members of the Opposition. Let us pray that we will get a Ministry composed of people who automatically will be thought of as men known for their efficiency and record of service and more than all, command the confidence and respect of all sections.

Sri T. PARTHASARATHY.—Will it come ?

Sri K. HANUMANTHAIYA.—That will come when my prayers are answered, and the atmosphere is clear. Until that set up comes, this Ministry will not go. Suppose, we Congressmen are not able to rise to that height of patriotism and sense of service to the country, this Ministry will continue ; I make this open declaration.

Sri J. B. MALLARADHYA.—I think my friend Sri Hanumanthaiya is now stepping on very difficult ground. The discussion on Gorwala Report has ended. It is better that my friend will kindly stop at that.

Sri K. HANUMANTHAIYA.—I agree with Sri Mallaradhya. Because certain questions were put, I did not want to evade them. I do not want to hide what is to the interest of the Congress and what is to the interest of the country. Therefore, I was frank.

ನಾನು ಹೇಳುತ್ತಿದ್ದುದೇನೆಂದರೆ, ಮಂತ್ರಿಮಂಡಲ ಕಾನೂನು ಮತ್ತು ರಾಜಕೀಯ ದೃಷ್ಟಿಯಿಂದ ಎಲ್ಲಾ ಅಧಿಕಾರವನ್ನೂ ಪಡೆದುಕೊಂಡಿರುತ್ತದೆ. ಅಧಿಕಾರ ವರ್ಗದವರು ಅವರ ಅಪ್ಪಣೆಯನ್ನು ಪಾಲಿಸಬೇಕಾಗಿರುವುದರಿಂದ, ಮಂತ್ರಿಮಂಡಲದ ರಚನೆ, ರೂಪ ಹೇಗಿರುತ್ತದೋ, ಅಡ್ಮಿನಿಸ್ಟ್ರೇಷನ್ನಿನ ಸ್ವರೂಪವೂ ಕೂಡ ಅದೇ ರೀತಿ ಆಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

*ಶ್ರೀ ಎಂ. ಸಿ. ನರಸಿಂಹನ್.—ಮಾನ್ಯ ಅಧ್ಯಕ್ಷರೆ, ಶ್ರೀ ಗೋರವಾಲ ವರದಿ ಬಗ್ಗೆ ಮಾತನಾಡುತ್ತಾ ಒಂದು ವಿಷಯವನ್ನು ಹೇಳಬೇಕು. 'ಕಂಡವನ್ನು ಕಂಡಂತೆ ಬರೆದರೆ ಕೆಂಡದಂಥ ಕೋಪ' ಎಂದು ಒಂದು ಗಾದೆ ಇದೆ. ಈ ವರದಿಯ ಬಗ್ಗೆಯೂ ಹಾಗೆಯೇ ಆಗಿದೆ. ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿ ನಾಯಕರು—ಎಲ್ಲಾ ನಾಯಕರು ಎಂದು ಹೇಳುವುದಿಲ್ಲ—ಪ್ರಮುಖ ನಾಯಕರು ಈ ರೀತಿ ವರ್ತಿಸಿರುವುದು ಸ್ವಲ್ಪ ವಿಷಾದಕರ. ಹನುಮಂತಯ್ಯನವರು ಹೇಳಿದ ವಿಷಯಕ್ಕೆ ನಂತರ ಬರುತ್ತೇನೆ. ಮೊದಲು ಮಂತ್ರಿಮಂಡಲದಲ್ಲಿರತಕ್ಕಂಥ ಸದಸ್ಯರು, ಅತ್ಯಂತ ಆತುರದಿಂದ ವರದಿ ಬಂದೊಡನೆಯೇ, ಅದು ಸರಿಯಿಲ್ಲ ಎಂದು ಗೋರ್‌ವಾಲರ ಹಿಂದಿನ ಇತಿಹಾಸಕ್ಕೆ ಕೈಹಾಕಿದರು. ಒಂದೇ ಪ್ರಶ್ನೆ: ನೇಮಕಮಾಡುವಾಗ ಗೋರ್‌ವಾಲಾರವರ ಇತಿಹಾಸ ಗೊತ್ತಿರಲಿಲ್ಲವೇ? ಐ.ಸಿ.ಎಸ್. ಅಧಿಕಾರಿಗಳು, ಬ್ರಿಟಿಷರ ಸೇವೆಮಾಡುತ್ತಿದ್ದವರು ಎಂದು ವರದಿ ಬಂದನಂತರ ಹಳಿಯುವುದು ಎಂದು ಹೇಳಿದರೆ, ಇದಕ್ಕೆ ಏನೆಂದು ಹೇಳಬೇಕು ! ವಿಚಾರಮಾಡದೆ ನೇಮಿಸುತ್ತಾರೆ ಎಂದು ತಿಳಿದುಕೊಳ್ಳುವುದಕ್ಕಾಗುತ್ತದೆಯೇ ! ಸ್ವಲ್ಪ ತೂಕಮಾಡಿ ಮಾತನಾಡಬೇಕು. ಇದು ಮಂತ್ರಿಮಂಡಲದವರು, ಮರಿಯಪ್ಪನವರು ಡೆಪ್ಯುಟಿ ಫೈನಾನ್ಸ್ ಮಿನಿಸ್ಟರು, ಇಲ್ಲದೆ ಇದ್ದರೆ, ಲಿಂಗಾರೆಡ್ಡಿಯವರು ಮಾಡಿದ ತಪ್ಪು ಅಥವಾ ಅಪರಾಧದ ಪ್ರಶ್ನೆ ಅಲ್ಲ; ಯಾರ ವಿಷಯದಲ್ಲೂ 'ಸ್ಟ್ರಾಂಗ್ ಎಕ್ಸ್‌ಪ್ರೆಷನ್' ಉಪಯೋಗಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆ ತಪ್ಪು, ಅದೇ ಡಿಫೆಕ್ಟ್ ಅವರಲ್ಲಿಯೂ ಇದೆ ಎಂದು ಹೇಳುತ್ತೇನೆ. ನಾನು ವಿಧಾನ ಸೌಧದ ವಿಷಯ ಮಾತನಾಡಬೇಕೆಂದಿರಲಿಲ್ಲ. ಆದರೆ ಇವತ್ತು ಹನುಮಂತಯ್ಯನವರ ಭಾಷಣ ಕೇಳಿದ ಮೇಲೆ, ಈ ಸಭೆಯ ಮೇಲೆ ಯಾವ ಪರಿಣಾಮವಾಗುತ್ತದೆಂಬ ಲೆಕ್ಕವನ್ನು ತೆಗೆದುಕೊಂಡು ಒಂದು ವಿಷಯವನ್ನು ನಾನು ಹೇಳಬೇಕೆಂದಿದ್ದೇನೆ. ಗೋರ್‌ವಾಲಾ ವರದಿಯ ಮೇಲೆ ಅವರ ಇಡೀ ಭಾಷಣ ನೋಡಿದರೆ -1¼ ಘಂಟೆ ಭಾಷಣಮಾಡಿದರು,—ಬರೀ ವಿಧಾನ ಸೌಧ ಕಟ್ಟಡದ ವಿಷಯ ಇದೆಯೇ ಹೊರತು, ಅವರು ಬೇರೆ ಸಲಹೆಗಳನ್ನು ಕೊಡಲಿಲ್ಲ. ಅವರು ಕೊನೆಯಲ್ಲಿ ಒಂದು ಹೆದರಿಕೆ ಅಥವ ಬೆದರಿಕೆ ಹಾಕಿದರು, ಅದೇನೆಂದರೆ, "ಒಂದು ಸಲಹೆ ಕೊಡುತ್ತೇನೆ, ಕಾಂಗ್ರೆಸ್ ಪಾರ್ಟಿ ಸರಿಯಾಗಲು ಹೇಗೆ ಸುಧಾರಣೆಮಾಡುವುದು" ಎಂದು. ಕಾಂಗ್ರೆಸ್ ಪಾರ್ಟಿ ಸರಿಯಾಗಿ ಇರಲಿ ಎಂದು ಮಾತನಾಡಬೇಕಾದದ್ದು ಕಾಂಗ್ರೆಸ್ ಪಾರ್ಟಿ ಒಳಗೆ. ಈ ಒಂದು ವಿಚಾರಕ್ಕೆ ಈ ವೇದಿಕೆಯನ್ನು ಉಪಯೋಗಿಸಿ, ಈ ಸಭೆಯ ಕಾಲವನ್ನು ಕಳೆಯುವುದು ತರವಲ್ಲ. ವಿಧಾನಸೌಧ ಕಟ್ಟಡದ ವಿಷಯದಲ್ಲಿ ನನ್ನ ಅಭಿಪ್ರಾಯವಾದರೂ ಇಷ್ಟೆ; ಭಾಷಣಮಾಡಿ ಪ್ರಯೋಜನವಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಕಟ್ಟಡ ಕಟ್ಟಿ ಆಗಿದೆ, ಕಟ್ಟಡವನ್ನು ಉಪಯೋಗಿಸುತ್ತಿದ್ದೇವೆ. ಕಟ್ಟಡಕ್ಕೆ ಹೆಚ್ಚು ಹಣ ಖರ್ಚು ಮಾಡಿದರು, ದುಂದು ವ್ಯಯವಾಗಿದೆ ಎಂದು ಕಟ್ಟಡದ ಉಪಯೋಗವನ್ನು ಬಿಡಲಿಲ್ಲ. ವಿಷಾದ ಸೌಧ ಎಂದೇ ನಿಜಲಿಂಗಪ್ಪನವರು ಕರೆದರೂ ಕೂಡ ವಿಷಾದ ಪಡಬೇಕಾದ ಪ್ರಮೇಯವಿಲ್ಲ. ಶ್ರೀ ಹನುಮಂತಯ್ಯನವರು ಕಟ್ಟಡ ಬಹಳ ಚೆನ್ನಾಗಿದೆ ಎಂದು ಹೇಳಿದವರ ಒಂದು ಲಿಸ್ಟ್ ಕೊಟ್ಟರು. ಅದನ್ನು ಒಪ್ಪೋಣ. ಆ ವಿಷಯವಲ್ಲ. Future policy ವಿಷಯದಲ್ಲಿ ಬಹಳ ಮುಖ್ಯವಾದ ಅಂಶವಿದೆ ಏತಕ್ಕಾದರೂ ಅಗಲಿ ಈ ತರಹ ಕಟ್ಟಡ ಕಟ್ಟಿದ್ದು ಆಯಿತು. ಇದೇ ತರಹ ಮತ್ತೊಂದು ಕಟ್ಟಡ ಹುಬ್ಬಳ್ಳಿಯಲ್ಲಿ ಬರಬಹುದು; ಅದಕ್ಕೂ ಹೆಚ್ಚು ಕಡಮೆ 150 ಲಕ್ಷ ರೂಪಾಯಿನ ಅಂದಾಜಾಗಿದೆ. ಅಂಥ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಬೇಕು ಎನ್ನುವ ಮನೋಭಾವ ಬೆಳೆದು ಬರುತ್ತಿದೆ. ವಿಧಾನ ಸೌಧದ ವಿಷಯದಲ್ಲಿ ಹಣ ವೆಚ್ಚಮಾಡಿದ್ದು ಸರಿಯೆ ಅಥವಾ ದುಂದು ವೆಚ್ಚವಾ

*Asterisk indicates that the remarks or speeches have not been revised by the member concerned.

(ಶ್ರೀ ಎಂ. ಸಿ. ನರಸಿಂಹನ್)

ಗಿದ್ದು ನಿಜವೇ ಎಂಬ ಬಗ್ಗೆ ಪರಿಶೀಲಿಸಲು ಹನುಮಂತಯ್ಯನವರು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡುವವರೆಗೂ ಅದರಲ್ಲಿ ಬಹಳ ನಂಬಿಕೆ ಇತ್ತು. ಈ ರಾಜ್ಯದ ನ್ಯಾಯಾಧೀಶರೊಬ್ಬರನ್ನು ನೇಮಿಸುವ ಬದಲಾಗಿ ಹೊರದೇಶದ ನ್ಯಾಯಾಧೀಶರೊಬ್ಬರನ್ನು ಕರೆಸುವ ಮುನ್ಸೂಚನೆ ತೆಗೆದುಕೊಂಡಿದ್ದೀರಿ. ಈ ರಾಜ್ಯದ ಜಡ್ಜನ್ನು ಹಾಕಿದರೆ ಟೀಕೆ ಬರಬಹುದು, ಆ ಟೀಕೆ ಬರಬಾರದೆಂದು ಹೊರಗಿನವರನ್ನು ಬರಮಾಡಿದಿರಿ. ಅದು ತಪ್ಪೆಂದು ಹೇಳುವುದಿಲ್ಲ. ಆ ಸಮಿತಿ ಕೂಡ ಒಂದು ಸ್ಪಷ್ಟವಾದ ಅಭಿಪ್ರಾಯಕೊಟ್ಟಿತು. ಸಂದರ್ಭ ಹೀಗಿದ್ದರೂ ಕೂಡ, ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಕಟ್ಟಡಕಟ್ಟಬೇಕೆಂಬ ಹವ್ಯಾಸಕ್ಕೆ ಬಿದ್ದಿದ್ದೇವೆ. ಕೇಂದ್ರ ಸರ್ಕಾರದವರೂ ಇದಕ್ಕೆ ಕಾರಣವಿರಬಹುದು. ಚಂಡೀಘರ್‌ನಲ್ಲಿ ಕಟ್ಟಲಿಲ್ಲವೇ ಮತ್ತು ಗವರ್ನ್‌ಮೆಂಟ್ ಆಫ್ ಇಂಡಿಯಾದವರು ದೊಡ್ಡ ಕಟ್ಟಡ ಕಟ್ಟುತ್ತಾ ಇಲ್ಲವೇ ಎನ್ನುವ ವಿಧವಾದ ವಾದವನ್ನು ಮಾಡಿದರೆ ಪ್ರಯೋಜನವಿಲ್ಲ. ಹನುಮಂತಯ್ಯನವರು ಭಾಷಣಮಾಡುತ್ತಾ ಕಟ್ಟಡ ಚೆನ್ನಾಗಿದೆ ಎನ್ನುವುದನ್ನು ಮಾತ್ರ ಹೆಚ್ಚಾಗಿ ಹೇಳಿದರೇ ಹೊರತು ಬೇರೆ ಹೇಳಲಿಲ್ಲ. ಯಾರೂ ಕಟ್ಟಡ ಚೆನ್ನಾಗಿಲ್ಲ ಎಂದು ಹೇಳಿಲ್ಲ. ಅದು ನಿರ್ವಿವಾದವಾದ ವಿಷಯ. ನಾನು ಆರ್ಕಿಟೆಕ್ಟ್ ಅಲ್ಲ. ಹನುಮಂತಯ್ಯನವರೂ ಆರ್ಕಿಟೆಕ್ಟ್ ಅಲ್ಲ ಎಂದು ಭಾವಿಸಿಕೊಂಡಿದ್ದೇನೆ. ಟೆಕ್ನಿಕಲ್ ಆಗಿ ಪರಿಶೀಲನೆ ಮಾಡಿದ್ದಾರೆ, ಅಭಿಪ್ರಾಯ ಕೊಟ್ಟಿದ್ದಾರೆ ಎನ್ನುವ ದೃಷ್ಟಿಯಿಂದ ಹೇಳಬಹುದು. ಚೆನ್ನಾಗಿದೆ ಎನ್ನುವುದನ್ನು ಒಪ್ಪುತ್ತೇನೆ. ಮುಖ್ಯವಾದ ಅಲಿಗೇಷನ್ ಅದಲ್ಲ. ಸಮಿತಿ ನೇಮಕಮಾಡುವುದಕ್ಕೆ ಮುಖ್ಯವಾದ ಕಾರಣ ಹಣ ಹೆಚ್ಚಾಗಿ ಖರ್ಚಾದ್ದು. ಈ ವಿಷಯದಲ್ಲಿ ಮಾನ್ಯ ಸದಸ್ಯರು ಏನಾದರೂ ಹೇಳುತ್ತಾರೋ ಏನೋ ಎಂದಿದ್ದೆ. ಆದರೆ ಅದನ್ನು ಅವರು ಹೇಳಲಿಲ್ಲ.

ಶ್ರೀ ಕೆ. ಹನುಮಂತಯ್ಯ.—ಕಮಿಟಿ ಏತಕ್ಕೋಸ್ಕರ ನೇಮಕವಾಯಿತೆಂದು ಹೇಳಿದೆ. ಅಕೌಂಟ್ಸ್ ಸರಿಯಾಗಿ ಇಟ್ಟಿಲ್ಲ ಎನ್ನುವುದು ಬಂದಾಗ, ಅದಕ್ಕೋಸ್ಕರ ಮಾಡಿತೇ ಹೊರತು, ಹಣ ಮತ್ತು ಕಟ್ಟಡದ ಪ್ರಮಾಣಕ್ಕೋಸ್ಕರ ನೇಮಕ ಮಾಡಲಿಲ್ಲವೆಂದು ಹೇಳಿದೆ.

ಶ್ರೀ ಎಂ. ಸಿ. ನರಸಿಂಹನ್.—ಸಮಿತಿಯನ್ನು ಈ ಉದ್ದೇಶಕ್ಕೋಸ್ಕರ ನೇಮಕ ಮಾಡಲಾಯಿತು ಎನ್ನುವುದು ಸರಿ. ಆದರೆ ಹನುಮಂತಯ್ಯನವರು ನೇಮಕ ಮಾಡಿದ ಸಮಿತಿ, ಅನಂತರ ಬಂದ ಸರ್ಕಾರ ಮತ್ತು ಮುಖ್ಯ ಮಂತ್ರಿಗಳು ನೇಮಕಮಾಡಿದ ಎಸ್ಟಿಮೇಟ್ಸ್ ಕಮಿಟಿ, ಅವರೇ ನೇಮಕಮಾಡಿದ ಮಾಧವರಾವ್ ಸಮಿತಿ, ಫಿನಾನ್ಸ್ ಎನ್‌ಕ್ವಯರಿ ಕಮಿಟಿ, ಮುಂತಾದುವುಗಳೆಲ್ಲಾ ಏನೇನು ಅಭಿಪ್ರಾಯಕೊಟ್ಟವೆಯೋ ಅವನ್ನು ಗಣನೆಗೆ ತೆಗೆದುಕೊಳ್ಳಬೇಕು. ಅವನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಗೋಪಾಲರವರು ಅರ್ಧಂಬರ್ಧ ಇನ್‌ಫರ್ಮೇಶನ್ ಮೇಲೆ ಏನೋ ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಅದನ್ನು ಅಳೆಯುವುದಕ್ಕೆ ಆಗುವುದಿಲ್ಲ ಎಂದು ಹೇಳಲಾಗದು. ಹೆಚ್ಚು ಖರ್ಚಾಗಿದೆ, ಖರ್ಚು ಇಷ್ಟಾಗಬಾರದಾಗಿತ್ತು ಎನ್ನುವ ವಿಷಯದಲ್ಲಿ ಗೋಪಾಲರವರು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ.

ಅದನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ ಶ್ರೀಮಾನ್ ಹನುಮಂತಯ್ಯನವರು ಅವರ ಭಾಷಣದಲ್ಲಿ ಕಟ್ಟಡ ನೋಡಿ ಎಂದು ಹೇಳಿದರೇ ಹೊರತು ಅಲಿಗೇಷನ್ ವಿಚಾರದಲ್ಲಿ ಹೇಳಲಿಲ್ಲ. ಅದನ್ನು ಹೇಳಿದ್ದರೆ ಈ ಸಭೆಯಲ್ಲಿ ಸದಸ್ಯರು ಉತ್ತರಕೊಡುವುದಕ್ಕೆ ಸಹಾಯವಾಗುತ್ತಿತ್ತು.

12 NOON

Sri K. HANUMANTHAIYA.—The Accountant General brought to the notice of the Government that the state of accounts was not satisfactory. It is with reference to that mainly the Committee was appointed. Incidentally it was asked to go into the question of effecting future economies wherever necessary. The question of allotting money and the conception of the building were not within its jurisdiction. They are within the jurisdiction of the Legislature. After all, you have to realise, these are reports and the ultimate authority is the House which has to give line clear to go into the construction of the building or stop it. Committee' reports are only reports. Their opinion is not sacrosanct.

ಶ್ರೀ ಎಂ. ಸಿ. ನರಸಿಂಹನ್.—ಈ ವಿಷಯದಲ್ಲಿ ವಿಧಾನ ಸಭೆಯಲ್ಲಿ ಹಿಂದೆಯೂ ಕೂಡ ಚರ್ಚೆಯಾಗಿದೆ. ಈ ಸಂದರ್ಭದಲ್ಲಿ ಗೋಪಾಲರವರು ಹೇಳಿರತಕ್ಕದ್ದು ಸರಿ, ಅದರಲ್ಲಿ ಏನೂ ತತ್ವಶಃ ವಿರೋಧವಿಲ್ಲ ಎಂದು ಸಾಬೀತುಮಾಡಲು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಎಂಟುಕೋಟಿ ರೂಪಾಯಿ ಎಂದು ಹೇಳಿರುವುದನ್ನು ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ. ಅವರಿಗೆ ಆಡಿಟ್ ವರದಿ ಸಿಕ್ಕಿತೋ ಇಲ್ಲವೋ ಗೊತ್ತಿಲ್ಲ. ಅದು ಸಿಕ್ಕಿದ್ದರೆ ಏನು ಹೇಳುತ್ತಿದ್ದರೋ ಏನೋ. ಬೇರೆ ವಿಷಯ. ಸುಮ್ಮನೆ ಎಸ್ಟಿಮೇಟ್ ಓದಿದರೆ ಗೊತ್ತಾಗುತ್ತದೆ. ಶ್ರೀ ಗೋಪಾಲರವರು ಮಾಡಿರತಕ್ಕ ಶಿಫಾರಸುಗಳನ್ನು ಸದ್ಯಕ್ಕೆ [illegible]. ದೇಶದಲ್ಲಿ ಪ್ಲಾನಿಂಗ್ ಇರುವಾಗ ಡೆಮೊಕ್ರಾಟಿಕ್ ಸೆಟಪ್ ಇರುವಾಗ ಅದಕ್ಕೆ ಅಧಿಕಾರಿಗಳು ಹೇಗೆ ಹೊಂದಿಕೊಳ್ಳಬೇಕು, ಆಡಳಿತ ಯಂತ್ರ ಹೇಗೆ ಹೊಂದಿಕೊಳ್ಳಬೇಕು ಎನ್ನುವ ವಿಷಯದಲ್ಲಿ ಅನುಭವ ಹೊಂದಿದವರೂ ಮಾಜಿ ಮುಖ್ಯ ಮಂತ್ರಿಗಳೂ ಆದಂತಹ ಹನುಮಂತಯ್ಯನವರು ಹೇಗೆ ನಡೆಸುತ್ತಿದ್ದರು ಎಂದು ಸೂಚನೆಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಅವರು ಮುಖ್ಯ ಮಂತ್ರಿಗಳಾದ ಮೇಲೆ ಹೇಳೋಣ ಆ ಮೇಲೆ ಜಾರಿಗೆ ತರೋಣ ಎಂದು ಕಾಯುತ್ತಿದ್ದಾರೆಯೋ ಏನೋ ಗೊತ್ತಿಲ್ಲ. ಈ ವಿಷಯವಾಗಿ ಆಗ ಹಣ ಕಾಸಿನ ಸಚಿವರಾಗಿದ್ದ, ಈಗಲೂ ಹಣಕಾಸಿನ ಸಚಿವರಾಗಿರತಕ್ಕ ಮಾನ್ಯ ಮರಿಯಪ್ಪನವರು ಒಂದೆರಡು ವಿಷಯಗಳನ್ನು ಹೇಳಿದರು. ನಾನು ಇದನ್ನು ಹೇಳುವಾಗ ಮರಿಯಪ್ಪನವರಿಗೂ ಮತ್ತು ಹನುಮಂತಯ್ಯನವರಿಗೂ ಭಿನ್ನಾಭಿಪ್ರಾಯ ತರುವುದಕ್ಕೆ ಪ್ರಯತ್ನಮಾಡುತ್ತಿದ್ದೇನೆಂದು ಯಾರೂ ಪರಿಗಣಿಸಬಾರದು. ನಾನು ಹಿಂದೆ ಮರಿಯಪ್ಪನವರು ಹೇಳಿರುವ ವಿಷಯಗಳನ್ನು ಉಲ್ಲೇಖಿಸಿದರೆ ಅದರಿಂದ ಅವರಿಬ್ಬರಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಪ್ರಯತ್ನಪಡುತ್ತಿದ್ದೇನೆಂದು

ಅವರು ಹೇಳಬಾರದೆಂದು ನನ್ನ ಪ್ರಾರ್ಥನೆ. ಈಗ ಮರಿಯಪ್ಪನವರು ಹನುಮಂತಯ್ಯನವರಿಗೆ ವಿರೋಧವಾಗಿ ಹೇಳಿರುವಂಥ ವಿಷಯಗಳನ್ನು ಒಪ್ಪಿಕೊಳ್ಳುತ್ತಾರೆಯೋ ಇಲ್ಲವೋ ಎಂಬುದನ್ನು ಕೂಡ ಧೈರ್ಯದಿಂದ ಹೇಳಲಾರರೆ. ಹಿಂದೆ ಜುಡಿಷಿಯಲ್ ಕಮಿಟಿ ಎಂದು ಏನು ನೇಮಕ ಮಾಡಿದ್ದರೋ ಅದರಲ್ಲಿ ಸರಿಯಾದವರಿರಲಿಲ್ಲ, ಅವರಿಗೆ 60 ವರ್ಷವಯಸ್ಸಾಗಿ ಅರುಳು ಗಿತ್ತು, ಅವರು ಅನ್ಯಾಯಮಾಡಿದ್ದಾರೆ ಎಂದು ಹನುಮಂತಯ್ಯನವರು ಹೇಳಿದುದಕ್ಕೆ ಮರಿಯಪ್ಪನವರು ಕೊಟ್ಟ ಉತ್ತರ ಇಷ್ಟೆ......

Sri K. HANUMANTHAIYA.—I never said anything against him a that time.

ಶ್ರೀ ಎಂ. ಸಿ. ನರಸಿಂಹನ್.—26 ಮಾರ್ಚ್ 1957 ರಲ್ಲಿ ಮಾನ್ಯ ಮರಿಯಪ್ಪನವರು ಈ ರೀತಿ ಹೇಳಿದ್ದಾರೆ.

" ......ಈ ಸಮಿತಿಯ ಅಧ್ಯಕ್ಷರು ನಾಗಪುರ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು; ಶ್ರೀ ನರಸಿಂಹಯ್ಯನವರೂ ಮತ್ತು ಶ್ರೀ ರಾಘವೇಂದ್ರರಾಯರೂ ನಮ್ಮ ಮೈಸೂರು ರಾಜ್ಯದಲ್ಲಿ ಒಳ್ಳೆಯ ಸೇವೆಮಾಡಿದ್ದಾರೆ. ಇವರೆಲ್ಲರೂ ಅನ್ಯಾಯಮಾಡಿದ್ದಾರೆ ಎಂದು ಹೇಳುವ ಶಬ್ದಗಳು ಅವರ ಬಾಯಿಂದ ಬರಬಾರದಾಗಿತ್ತು. ಅರವತ್ತು ವರ್ಷ ಮೀರಿದ್ದರಿಂದ ಅವರಿಗೆ ಅರಳು ಮರುಳಾಗಿದೆ ಎಂದು ಹೇಳುವುದು ತುಂಬ ಅನ್ಯಾಯ ಮತ್ತು ತುಂಬ ವಿಷಾದಕರ. ಸಮಿತಿಯನ್ನು ನೇಮಿಸುವಾಗ ಅವರ ವಯಸ್ಸು ಶ್ರೀ ಹನುಮಂತಯ್ಯನವರಿಗೆ ಗೊತ್ತಿರಲಿಲ್ಲವೇ ? ಅವರೇನು 20 ವರ್ಷದ ಹುಡುಗರಿದ್ದಾರೆಂದು ತಿಳಿದುಕೊಂಡಿದ್ದರೋ! ದೇಶದ ಗಣ್ಯ ವ್ಯಕ್ತಿಗಳನ್ನು ಆರಿಸಿ ಸಮಿತಿಗೆ ನೇಮಿಸಿದ ಮೇಲೆ, ಸಮಿತಿಯ ವರದಿ ತಮಗೆ ವಿರೋಧವಾಗಿ ಬಂದಾಕ್ಷಣಕ್ಕೇ, ಅವರ ಕಾರ್ಯದ ಬಗ್ಗೆ, ಅವರ ಗೌರವದ ಬಗ್ಗೆ ಅಷ್ಟು ಲಘುವಾಗಿ ಮಾತನಾಡುವುದೂ ಅವಹೇಳನ ಮಾಡುವುದೂ ಚೀಫ್ ಮಿನಿಸ್ಟರ್ ಆಗಿದ್ದವರಿಗೆ ಸಲ್ಲುತ್ತದೆಯೇ ಎಂದು ಪ್ರಶ್ನೆ ಮಾಡುತ್ತೇನೆ.. ಏನಾದರೂ ಅಂಕಿ ಅಂಶಗಳನ್ನು ಕೊಟ್ಟು ಸಮರ್ಥಿಸಿದರೇ!......" ಇದು ಅವರಿಗೂ ಅನ್ವಯಿಸುತ್ತದೆ ಅನ್ನಿ. ಲೆಕ್ಕಗಳ ಬಗ್ಗೆ ಮರಿಯಪ್ಪನವರು ಹೇಳಿರುವ ವಿಷಯವನ್ನು ಕೂಡ ಓದುತ್ತೇನೆ.

"...ಇಲ್ಲಿ ನೋಡಿದರೆ ಯಾವ ಲೆಕ್ಕಗಳೂ ಸರಿಯಾಗಿಲ್ಲ. ಅನೇಕ ಕೋಟ್ಯಂತರ ರೂಪಾಯಿಗಳ ಜವಾಬ್ದಾರಿಯನ್ನು ಇವರೊಬ್ಬರೇ......"

ಇವರೊಬ್ಬರೇ ಎಂದರೆ ಮಾನ್ಯ ಹನುಮಂತಯ್ಯನವರೊಬ್ಬರೇ.

"..... ಏಕೆ ತೆಗೆದುಕೊಳ್ಳಬೇಕಾಗಿತ್ತು! ಪಬ್ಲಿಕ್ ವರ್ಕ್ಸ್ ಇಲಾಖೆಯು ಮಾನ್ಯ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರ ಕೈಯಲ್ಲಿತ್ತು. ಆದರೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು ಈ ಕಟ್ಟಡದ ಅಂದಾಜುಗಳನ್ನು ಆಗಾಗ್ಗೆ ಬದಲಾಯಿಸುತ್ತ ಬಂದ ಕಡೆಗೆ 50 ಲಕ್ಷ ರೂಪಾಯಿಗಳಿಗೂ ಮೀರಿ ಅಂದಾಜಿಲ್ಲದೆಯೇ ಮಂಜೂರು ಮಾಡಬೇಕಾಗಿ ಬಂತು. ಆ ಸಂದರ್ಭದಲ್ಲಿ ಅವರು ಈ ಪಿ. ಡಬ್ಲ್ಯು. ಇಲಾಖೆಯನ್ನೇ ಬಿಟ್ಟುಬಿಟ್ಟರು. ಅನಂತರ ಇವರೇ ಆ ಖಾತೆಯನ್ನು ವಹಿಸಿಕೊಂಡರು. ನಾನೂ ಕೂಡ ಶ್ರೀ ರೆಡ್ಡಿಯವರ ಮಿನಿಸ್ಟ್ರಿಯಲ್ಲಿ 4½ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಯಾವುದಾದರೂ ಕೆಲಸಕ್ಕೆ 50 ಸಾವಿರಕ್ಕೂ ಹೆಚ್ಚಿನ ಹಣ ಬೇಕಾದರೆ ಅದು ಕ್ಯಾಬಿನೆಟ್ಟಿನಲ್ಲಿ ಪೂರ್ಣವಾಗಿ ಚರ್ಚೆಯಾಗಿ ಸ್ಯಾಂಕ್ಷನ್ ಆಗಬೇಕು ... ಆದಕಾರಣ ವಿಷಯಗಳೊಂದನ್ನೂ ಅವರ ಸಹೋದ್ಯೋಗಿಗಳಿಗಾದರೂ ತಿಳಿಸದೆ ಇರುವುದಕ್ಕೆ ಏನೋ ಕಾರಣವಿರಬೇಕು." This is the responsible Finance Minister saying it. ಇನ್ನೊಂದು ಸ್ವಾಮಿ, ಮಾನ್ಯ ಶ್ರೀ ವೀರಣ್ಣಗೌಡರೇ ಅವರ ಅಭಿಪ್ರಾಯವನ್ನು ಅನುಮೋದನೆಮಾಡಿದ್ದಾರೆ.

"ವಿಧಾನ ಸೌಧದ ಉದಾಹರಣೆ ತೆಗೆದುಕೊಂಡರೆ ಅದಕ್ಕೆ 50 ಲಕ್ಷದ ಮೇಲೆ ಖರ್ಚಾಗುವುದಿಲ್ಲ ಎಂದು ಮೊದಲು ಹೇಳಿದ್ದರು, ಆ ಮೇಲೆ 60 ಲಕ್ಷವಾಯಿತು, ಈ ದಿವಸ 130 ಲಕ್ಷ ರೂಪಾಯಿಬೇಕು ಎಂದು ಹೇಳುತ್ತಾರೆ. ಹೀಗೆ ಮನಸ್ಸಿಗೆ ಬಂದ ಹಾಗೆಲ್ಲ ಆಗಾಗ್ಗೆ ಬದಲಾವಣೆಮಾಡುತ್ತ ಹೋದರೆ ಸರ್ಕಾರದ ಮಾತಿಗೆ ಏನಾದರೂ ಬೆಲೆ ಇದೆಯೇ!"

This is the opinion of the former P.W.D. Minister.

ಸ್ವಾಮಿ, ಎಸ್ಟಿಮೇಟ್ಸ್ ಕಮಿಟಿಯ ಚೇರ್‌ಮನ್‌ರವರು ಈ ರೀತಿ ಹೇಳಿದ್ದಾರೆ. ಶ್ರೀಮಾನ್ ಎನ್. ಸಿ. ನಾಗಯ್ಯರೆಡ್ಡಿಯವರು ಎಸ್ಟಿಮೇಟ್ಸ್ ಕಮಿಟಿಯ ಚೇರ್‌ಮನ್‌ರಾಗಿದ್ದರು.

" In the initial stages, the Chief Ministsr stated that the cost of the work would not go beyond Rs. 50 lakhs. Even at that time no detailed estimates had been prepared and sent to audit. Subsequently the estimate has been prepared for Rs. 130 lakhs. It is important to note that this estimate has been prepared after the work had reached stages of completion in many respects......"

ಎಲ್ಲಾ irregularities ತೋರಿಸಿಕೊಟ್ಟರು. ಇದೇ ಸಮಿತಿಯವರು ಮುಂದೆ ಹೀಗೆ ಹೇಳಿದ್ದಾರೆ.

"1. Execution of the work without sanction to detailed designs and estimates;

3. Non-obtaining the statement of unused balance of materials at the site of works in the prescribed forms ;"

ಈ ತರಹ ಬೇಕಾದಷ್ಟು ಇವೆ. ಉದ್ದಕ್ಕೆ ಹೇಳುವುದಕ್ಕೆ ಹೋಗಿ ಹೆಚ್ಚು ಕಾಲ ಈ ವಿಷಯದ ಬಗ್ಗೆ ತೆಗೆದುಕೊಳ್ಳುವುದಕ್ಕೆ ಇಚ್ಛೆ ಪಡುವುದಿಲ್ಲ. ಒಂದು ಪರ್ಟಿನೆಂಟ್ ಪಾಯಿಂಟ್ ಏನೆಂದರೆ:

" Now that the work has reached final stages, it would be impracticable to build up the accounts to satisfaction."

ಹೇಗೆ ಸರಿ ಎಂದು ಒಪ್ಪಿಕೊಳ್ಳುವುದಕ್ಕಾಗುತ್ತದೆ? ಕೇವಲ 150 ಲಕ್ಷ ಅಥವಾ 2 ಕೋಟಿ ಎನ್ನುವ ಬಗ್ಗೆ ಇನ್ನೂ ಒಂದು ವಿಷಯವಿದೆ. ಅದೇನೆಂದರೆ, ನಮ್ಮ ಮುಂದೆ ವಿಧಾನ ಸೌಧ ವರದಿಯ ಎರಡನೆಯ ಭಾಗವನ್ನು ಇಟ್ಟಿದ್ದರೆ ನಮಗೆ ಚೆನ್ನಾಗಿ ಗೊತ್ತಾಗುತ್ತಿತ್ತು..

(ಶ್ರೀ ಎಂ. ಸಿ. ನರಸಿಂಹನ್)

ಒಂದನೆ ಭಾಗವನ್ನೂ ನಮಗೆ ಕೊಟ್ಟಿಲ್ಲ. ಅದು ಈ ಸಭೆಗೆ ಬಂದಿಲ್ಲ. ಹಿಂದಿನ ಸಭಾಸದಸ್ಯರಿಗೆ ಕೊಟ್ಟರು. ಎರಡನೆ ಭಾಗವನ್ನು ಕೊಟ್ಟಿದ್ದರೆ ಮರಿಯಪ್ಪನವರು ಹೇಳತಕ್ಕ ವಿಷಯಗಳು ಸರಿಯೆ ಅಥವಾ ಸವಿಸ್ತಾರವಾಗಿ ಬೇಕು ಎಂದು ಹೇಳುತ್ತಾರೆಯೇ ಎಂದು ತಿಳಿಯುತ್ತಿತ್ತು. ಅಲ್ಲದೆ ಇವತ್ತು ಚರ್ಚೆಮಾಡುವುದಕ್ಕೂ ಅನುಕೂಲವಾಗುತ್ತಿತ್ತು. ಈ ಒಂದು ಕಟ್ಟಡವನ್ನು ಕಟ್ಟಲಿಕ್ಕೆ 2 ಕೋಟಿ ಆಗಿದೆಯೇ 150 ಲಕ್ಷವಾಗಿದೆಯೇ ಎನ್ನುವ ವಿಚಾರದಲ್ಲಿ ಕೂಡ ಇಲ್ಲಿ ಒಂದು ವಿಷಯವನ್ನು ಹೇಳಿದ್ದಾರೆ. ಅದು ಇಂಟರೆಸ್ಟಿಂಗ್ ಆಗಿದೆ. ಅದನ್ನು ಓದುತ್ತೇನೆ.

"......ಎಸ್ಟಿಮೇಟುಗಳನ್ನು ಮಾಡಿದ್ದರಲ್ಲಿ ರಸ್ತೆಗಳನ್ನು ಟ್ರಸ್ಟ್ ಬೋರ್ಡಿನವರು ಮಾಡಿದರು, ಗಾರ್ಡನ್‌ಗಳನ್ನು ತೋಟಗಳ ಇಲಾಖೆಯವರಿಗೆ ವಹಿಸಿದರು, ಲಾರಿಗಳನ್ನು ಬುಲ್‌ಡೋಜರ್‌ಗಳನ್ನೂ ತೆಗೆದುಕೊಂಡು ಆ ಖರ್ಚನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಹಾಕಿದರು. ಯಾರ ಕಣ್ಣಿಗೆ ಮಣ್ಣೆರಚುವುದಕ್ಕೆ ಹೀಗೆಲ್ಲ ಮಾಡಿದ್ದಾರೆ! ಯಾರಿಗೆ ಮೋಸಮಾಡುವುದಕ್ಕೆ ಮಾಡಿದ್ದಾರೆ? ಸರ್ಕಾರದ ಮುಖ್ಯ ಮಂತ್ರಿಗಳಾದ ಮೇಲೆ ಎಲ್ಲ ಇಲಾಖೆಗಳಿಗೂ ಮುಖ್ಯಮಂತ್ರಿಗಳು."

I need not go further than this. ನಾವೇನಾದರೂ ಹೇಳಿದರೆ ಕೋಪಬರುತ್ತದೆ. ಕೊನೆಯದಾಗಿ ಮರಿಯಪ್ಪನವರು ಒಂದು ಅಭಿಪ್ರಾಯವನ್ನು ಹೇಳಿದ್ದಾರೆ. This opinion is interesting;

"Courage in excess becomes foolhardiness." ಎಂದು ಹೇಳಿದ್ದಾರೆ.

ಇನ್ನೊಂದು ವಿಷಯ ನಾನು ಹೇಳುವುದೇನೆಂದರೆ, ಈ ವಿಚಾರಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು ಚರ್ಚೆ ಮಾಡಬೇಕೆಂದೇನೂ ಹೇಳುತ್ತಿಲ್ಲ. ಏನೋ ಈ ರೀತಿ ಆಗಿಹೋಯಿತೆಂದು ಇದನ್ನು ಬಿಟ್ಟುಬಿಡೋಣವೆಂದಿದ್ದೆ. ಒಂದು ಪಾರಿಭಾಷಿಕ ದೃಷ್ಟಿಯಿಂದ ನೋಡಿದರೆ ಒಂದು ವಿಷಯ ಹೇಳಬೇಕಾಗಿದೆ. ಈ ಬಿಲ್ಡಿಂಗೇನೋ ಒಳ್ಳೆಯದು. ಆದರೆ ಇದೇ ಸಂದರ್ಭದಲ್ಲಿ ಇದರ useful space ಎಷ್ಟು ಎನ್ನುವುದನ್ನು ನೋಡಬೇಕೆನ್ನುವ ವಿಷಯದಲ್ಲಿ ಶ್ರೀ ಎಸ್. ಕೆ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರಕಾರದವರು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದಾರೆ. ಅವರ ರೆಕಮೆಂಡೇಷನಿನ ಪ್ರಕಾರ "Usable space in any building should be a minimum of 65 to 70 per cent" ಎಂದರೆ ಒಟ್ಟು ಬಿಲ್ಡಿಂಗನ್ನು ಕಟ್ಟುವಾಗ ಆದರ ಸ್ಥಳದಲ್ಲಿ ಶೇಕಡ ಅರವತ್ತೈದರಿಂದ ಎಪ್ಪತ್ತರಷ್ಟು ಭಾಗಗಳಷ್ಟನ್ನು ಉಪಯೋಗಿಸಿಕೊಳ್ಳುವಂತೆ ಕಟ್ಟಬೇಕಾದದು ಅತ್ಯಾವಶ್ಯಕ ಎಂದು ಹೇಳಿದ್ದಾರೆ. ಅನೇಕ ಬಿಲ್ಡಿಂಗುಗಳಿಗೆ ಆಗಿರುವಂತೆ ಇದರಲ್ಲಿಯೂ ಹೆಚ್ಚು ಖರ್ಚಾಗಿದೆ ಎಂದು ಹೇಳಿದ್ದಾರೆ. ಗವರ್ನಮೆಂಟ್ ಆಫ್ ಇಂಡಿಯಾದವರೂ, ಮತ್ತು ಕಾಂಗ್ರೆಸ್ ಪಕ್ಷದವರೂ ಆದ ಶ್ರೀ ಎಸ್. ಕೆ. ಪಾಟೀಲ್‌ರವರೂ ಕೂಡ ಅವರ ಅಭಿಪ್ರಾಯವನ್ನು ಇದರಲ್ಲಿ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಆದರೆ ವಿಧಾನ ಸೌಧದ ಬಿಲ್ಡಿಂಗನ್ನು ತೆಗೆದುಕೊಂಡರೆ ಶ್ರೀಮಾನ್ ಮರಿಯಪ್ಪನವರೇ ಹೇಳಿದಂತೆ ಇದರಲ್ಲಿ ಶೇಕಡಾ 42·25 ರಷ್ಟು ಮಾತ್ರ ಸ್ಥಳವನ್ನು ಉಪಯೋಗಿಸಿಕೊಂಡಿದ್ದಾರೆ ಎಂದು ಹೇಳುತ್ತ ಈ ಬಿಲ್ಡಿಂಗಿನಲ್ಲೇ ಸ್ಥಳವಿಲ್ಲ, ಇನ್ನೊಂದಕ್ಕೆ ಸ್ಥಳವಿಲ್ಲ ಎಂದು ಇದೇ ರೀತಿಯಾಗಿ ಹೇಳುತ್ತ ಆಗ ಏನು ಮೆಷಿನರಿ ಇತ್ತೋ ಅದರ ಬಗ್ಗೆಯೂ ಒಂದು ರೀತಿಯಾದ ಟೀಕೆಯನ್ನು ಮಾಡಿದ್ದಾರೆ. ಈ ರೀತಿಯಾಗಿ ಟೀಕೆ ಮಾಡುವುದು ದೇಶದ ಒಂದು ಆರ್ಥಿಕ ದೃಷ್ಟಿಯಿಂದ ಅಪಾಯಕರವೆಂಬುದು ನನ್ನ ಒಂದು ಮುಖ್ಯ ವಿಷಯವಾಗಿದೆ. ಈ ವಿಷಯವನ್ನು ಪುನಃ ಪುನಃ ಪ್ರಸ್ತಾಪಿಸುವುದು ಪ್ರಯೋಜನವಿಲ್ಲ ಎಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಅವರೂ ಮಾತನಾಡುತ್ತಲೇ ಇರುತ್ತಿರಲಿಲ್ಲ. ಈಗ ಏಕೆ ಮಾತನಾಡಬೇಕಾಗಿತು, ಎಂದರೆ ಶ್ರೀಮಾನ್ ಹನುಮಂತಯ್ಯನವರು ಇದನ್ನು ಅತಿ ಮುಖ್ಯವಾದದ್ದು ಬೆಲೆಯುಳ್ಳದ್ದು ಎನ್ನುವುದನ್ನೆಲ್ಲ ಹೇಳುತ್ತ, ಇದಕ್ಕೆ ಕೌಂಟರ್ ಆಗಿ ನಾನು ಹೇಳುತ್ತಿದ್ದೇನೆ ಎನ್ನುವಂತೆ ಒಂದಕ್ಕೊಂದು ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಮೂರನೆಯದು ಅತಿ ಮುಖ್ಯವಾದ ಸಂಪ್ರದಾಯಗಳನ್ನು ಹಾಕಿಕೊಂಡು ಸರಳ ಜೀವನವನ್ನು ಮಾಡಬೇಕೆಂದು ಬಾಕಿಯವರಿಗೆ ಹೇಳುತ್ತಿದ್ದಾರೆ. ಆದರೆ ಈಗ ಎನ್. ಜಿ. ಓ. ಗಳಲ್ಲಿ ಸರಳ ಜೀವನ ಕಂಡುಬರುತ್ತಿದೆ. ಅದಕ್ಕಿಂತ ಹೆಚ್ಚಾಗಿ ಹಳ್ಳಿಯವರಲ್ಲಿ ಕೂಡ ಸರಳ ಜೀವನವನ್ನು ನಡೆಸಿ ಎಂದು ಹೇಳಬಹುದು. ಹೀಗೆ ಇತರರಿಗೆ ಹೇಳುವಾಗ ಇಂತಹ ಆಡಂಬರವಾದ ದೊಡ್ಡ ಕಟ್ಟಡವನ್ನು ಕಟ್ಟುವುದು ಸರಿಯೇ ಎಂದು ನೋಡಿದರೆ ಇದು ಆಗಿನ ಸದಸ್ಯರಲ್ಲಿದ್ದ ಒಂದು ಮನೋಭಾವನೆಯನ್ನು ತೋರಿಸುತ್ತದೆ.

Sri K. HANUMANTHAIYA.—Has he seen the buildings in Kremlin and Moscow University buildings?

Sri M. C. NARASIMHAN.—I would have answered that question if he were the Chief Minister, but since he is only an ordinary member like me I do not want to reply to him. I have seen the buildings in Warsaw and Prague.

ಒಂದು ಸಣ್ಣ ವಿಷಯವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳುವುದನ್ನು ಮರೆತುಬಿಟ್ಟಿದ್ದಾರೆ ಎಂದು ನನಗನಿಸುತ್ತದೆ. ವೈಯಕ್ತಿಕವಾಗಿ ಹೇಳಬೇಕಾದರೆ ಮಾಸ್ಕೋವಿಗೂ ನಮಗೂ ಹೋಲಿಸತಕ್ಕವರು ನಾವು ಹೇಗಿದ್ದೇವೆನ್ನುವುದನ್ನು ಮರೆತಂತಿದೆ. We are an under-developed country now. ನಾವು ಕೈಗಾರಿಕೆಯಲ್ಲಿ ಎಷ್ಟು ಮುಂದುವರಿದಿದ್ದೇವೆ ಎನ್ನುವುದರಿಂದಲೇ ತಿಳಿಯುತ್ತದೆ. ಇವತ್ತು ನಮಗಿಂತ ಚೈನಾದಲ್ಲಿ ಹೇಗೆ ರೋಡುಗಳಿವೆ, ನಮ್ಮಲ್ಲಿ ಹೇಗೆ ಇವೆ, ಎನ್ನುವುದನ್ನು ನೋಡಿದರೆ ನಮ್ಮ ದೇಶದಲ್ಲಿ ರೋಡುಗಳಿಗಾಗಿ ಉಪಯೋಗಿಸುವಷ್ಟು ಸಿಮೆಂಟು ಮಾಂತಾದುವುಗಳನ್ನು ಚೈನಾದಲ್ಲಿ ಉಪಯೋಗಿಸುತ್ತಾರೆಯೋ ಎನ್ನುವುದೇ ಸಂದೇಹವಾಗಿದೆ. ಈ ನಮ್ಮ ಮೈಸೂರು ದೇಶದಲ್ಲಿ ಉಪಯೋಗಿಸುವಂತೆ ಅಲ್ಲಿನ ಜನಗಳು ಟ್ರಾಕ್ಟರುಗಳನ್ನು ಉಪಯೋಗಿಸುವುದಿಲ್ಲ. ಅವರು ಕೈಯಿಂದಲೇ ಹೆಚ್ಚಿನ ಕೆಲಸಗಳನ್ನು ಮಾಡುತ್ತಾರೆ. ಚೈನಾದ ಜನಗಳು ಯಾವ ರೀತಿಯಾದ ಸರಳ ಜೀವನವನ್ನು ನಡೆಸುತ್ತಿದ್ದಾರೆ ಎನ್ನುವ ವಿಚಾರಗಳನ್ನೆಲ್ಲ ವಿವರವಾಗಿ ಶ್ರೀಮಾನ್ ಜೆ. ಸಿ. ಕುಮಾರಪ್ಪನವರು ಅವರ ವರದಿಯಲ್ಲೇ ಹೇಳಿದ್ದಾರೆ. ನಾನು ಆ ವಿಷಯವನ್ನೆಲ್ಲ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಕಡೆಯಲ್ಲಿ ಪರಿಷ್ಕರಿಸಿ ನಾವು ಸರಳವಾದ ಜೀವನವನ್ನು ನಡೆಸಬೇಕೆಂದು ಹೇಳುತ್ತೀರಿ.

ಇನ್ನೊಂದುಕಡೆ ಆಡಂಬರದ ರೀತಿಯಲ್ಲಿ ನಡೆಸುತ್ತಿದ್ದೀರಿ ಎಂದು ಹೇಳಿದರೆ ಅದನ್ನು ಇಲ್ಲಿಯಾವರು ಕೇಳುತ್ತಿಲ್ಲ. ಇವತ್ತಿನದಿವಸ 1,200 ರೂಪಾಯಿಗಳಲ್ಲಿ ಹಳ್ಳಿಗಳಲ್ಲಿ ಒಂದೊಂದು ಸ್ಕೂಲು ಆಗುತ್ತಿದ್ದುದಕ್ಕೆ ಈಗ ಸುಮಾರು ಐವತ್ತು ಸಾವಿರ ರೂಪಾಯಿಗಳಷ್ಟು ಹೆಚ್ಚಾಗುತ್ತದೆ ಎಂದು ಹೇಳಿದರೂ ಅದನ್ನು ಕೊಡುವುದು ಅತ್ಯಾವಶ್ಯಕ ಎಂದು ಹೇಳುತ್ತಾರೆ. ಇಲ್ಲಿರುವ ಇಂತಹ ದೊಡ್ಡ ಕಟ್ಟಡಗಳಿಗೇನೆ ಇಷ್ಟು ಖರ್ಚು ಮಾಡುವಾಗ ಹಳ್ಳಿಯವರಿಗಾಗಿ ಬೇಕಾಗುವಂತಹ ಶಾಲಾ ಕಟ್ಟಡಗಳಿಗೇಕೆ ಖರ್ಚನ್ನು ಮಾಡಕೂಡದು ! ಈ ದೃಷ್ಟಿಯಿಂದ ಏನೋ ಒಂದು ರೀತಿಯಾದ "ವ್ಯೂ" ಹೀಗಿರಬೇಕು ಎನ್ನುವಂತೆ ಕಟ್ಟಿರುವ ಕಟ್ಟಡವನ್ನು ಇನ್ನೆಲ್ಲಿಯೂ ಕಟ್ಟಿಲ್ಲ ಎಂದು ಬೇರೆ ಹೇಳಿದರು. ಈ ರೀತಿಯಾಗಿ ಬೇರೆ ವಿಚಾರಗಳಿಗೆ ದುಡ್ಡು ಬೇಕೆಂದು ಕೇಳಿದರೂ ದುಡ್ಡು ಇಲ್ಲ ಎಂದು ಹೇಳಿದರಲ್ಲ ಎಂದು ನನಗೆ ವಿಷಾದವಾಯಿತು. ಚೈನಾದಲ್ಲಿ ಕಟ್ಟಡಗಳನ್ನು ಬಹಳ ಸರಳರೀತಿಯಿಂದ ಕಟ್ಟಲಾಗಿದೆ ಮತ್ತು ಅದು ಅನುಕರಣಯೋಗ್ಯವಾಗಿದೆ. ಈಗ ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜಿನ ಕಟ್ಟಡಕ್ಕಾಗಿ ಇನ್ನೂ ಹೆಚ್ಚಿನ ಹಣಬೇಕೆಂದು ಹೇಳುತ್ತಿದ್ದಾರೆ.

SRI F. H. MOHSIN (Hubli City).—In the building that is proposed to be constructed at Hubli, money is not wasted on Art and Culture. It is a magnificient building for a Medical College and Hospital.

ಶ್ರೀ ಎಂ. ಸಿ. ನರಸಿಂಹನ್.—ನನಗೆ ವಿವರಗಳು ಗೊತ್ತಿಲ್ಲ. ಇನ್ನೊಂದು ವಿಷಯ. ಗೋರ್ವಾಲ ಅವರು ಹೇಳಿರತಕ್ಕ ಸಲಹೆಗಳೆಲ್ಲ ಸತ್ಯವಾದುವು, ಅವು ಇವತ್ತಿನ ಪ್ರಜಾಪ್ರಭುತ್ವಯುಗಕ್ಕೆ ತಕ್ಕಂತೆ ಸಲಹೆಗಳನ್ನು ಕೊಟ್ಟಿದ್ದಾರೆಂದು ನಾನು ಹೇಳುವುದಿಲ್ಲ. ಇಲ್ಲಿ ಏನೇನು ನ್ಯೂನತೆಗಳು ಇದ್ದವೋ ಅವನ್ನೆಲ್ಲ ಒಂದೆರಡು ಮಾತುಗಳಲ್ಲಿ ಹೇಳಿ ಒಂದು ವಿಷಯದಲ್ಲಿ ಮಾತ್ರ ಸತ್ಯಾಂಶವನ್ನು ಹೇಳಿದ್ದಾರೆ. ಆ ರೀತಿಯಾದ ದೋಷಗಳು ಇಡೀ ದೇಶದ ಆಡಳಿತದಲ್ಲಿದೆ ಎನ್ನುವುದನ್ನು ಹೇಳಿದ್ದಾರೆ. "In-efficiency" ಶ್ರೀಮಾನ್ ಹನುಮಂತಯ್ಯನವರು ಇದ್ದಾಗ ಹೆಚ್ಚಿನ ಅದೇ ಮಟ್ಟದಲ್ಲಿತ್ತು ಮತ್ತು ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲವಿದ್ದಾಗಲೂ ಇದೇ ಮಟ್ಟದಲ್ಲಿತ್ತು ಎಂದು ಹೇಳಿದ್ದಾರೆ. ಹೀಗೆ 1951 ನೆಯ ಇಸವಿಯಿಂದಲೂ ಇದ್ದ ಆಡಳಿತದಲ್ಲಿ ಸಾಕಷ್ಟು ದಕ್ಷತೆ ಇಲ್ಲ ಎಂದು ಹೇಳಿದ್ದಾರೆ. This is the merit of Gorwala's Report. ದಕ್ಷತೆ ಕಡಿಮೆಯಾಗಿದೆ, ದಕ್ಷತೆಯನ್ನು ಹೆಚ್ಚುಮಾಡಬೇಕು ಎಂದು ಹೇಳುವುದನು ಒಪ್ಪುತ್ತೇನೆ.

ಎರಡನೆಯದಾಗಿ, ಕರಪ್ಷನ್ನನ್ನು ಈಗಿನ ಸರ್ಕಾರವಾಗಲಿ ಅಥವಾ ಮುಂದೆ ಕಮ್ಯೂನಿಸ್ಟ್ ಸರಕಾರ ಬಂದರೂ ತಪ್ಪಿಸುವುದಕ್ಕಾಗುತ್ತದೆಂದು ಹೇಳುವುದಕಾಗುವುದಿಲ್ಲ. ಇದೇ ವಿಚಾರವಾಗಿ ಪಿ. ಡಬ್ಲ್ಯು. ಡಿ. ಮಂತ್ರಿಗಳೇ ಈಚೆಗೆ ಇಬ್ಬರು ಅಧಿಕಾರಿಗಳ ಮೇಲೆ ಉಗ್ರವಾದ ದೋಷಾರೋಪಣೆಗಳು ಬಂದಾಗ ಆ ತಕ್ಷಣದಲ್ಲೇ ತನಿಖೆಗೆ ಒಳಪಡಿಸಬೇಕಾದ ಪ್ರಮೇಯ ಬಂದಿತು ಎಂದು ಹೇಳಿದರು. ಅದಕ್ಕೆ ಹಿಂದಿನ ದಿವಸವೇ ಮಾನ್ಯ ಸದಸ್ಯರಾದ ಶ್ರೀಮಾನ್ ಹನುಮಂತಯ್ಯನವರೇ, ಹಾಗೆಲ್ಲ ಮಾಡಬೇಡಿ, ಅದರಲ್ಲೂ ಪಿ. ಡಬ್ಲ್ಯು. ಡಿ. ಇಲಾಖೆಯ ವಿಚಾರದಲ್ಲಿ ಒಂದು ರೀತಿಯಾದ go slow policyಯನ್ನು ಅನುಸರಿಸಿ ಎಂದು ಹೇಳಿದ್ದರು. ಒಟ್ಟಿನಲ್ಲಿ ಈ ಕರಪ್ಷನ್ನನ್ನು ಹೇಗೆ ತಪ್ಪಿಸಬೇಕು ಎನ್ನುವ ಪ್ರಶ್ನೆ ಬಂದಾಗ ಪ್ರತಿಯೊಬ್ಬ ಮಾನ್ಯ ಸದಸ್ಯರೂ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನೂ ಕೂಡ ಹಾಗೆ ತೆಗೆದುಕೊಳ್ಳಕೂಡದು ಎಂದೇನೂ ಹೇಳುತ್ತಿಲ್ಲ. ಆದರೆ ಈ ಕರಪ್ಷನ್ನನ್ನು ಹೇಗೆ ನಿರ್ಮೂಲ ಮಾಡುವುದಕ್ಕಾಗುತ್ತದೆ ಎನ್ನುವುದನ್ನು ನಿಧಾನವಾಗಿ ಯೋಚಿಸಬೇಕು. ಕರಪ್ಷನ್ನು ಇವತ್ತಿಗೆ ಹೊಸದೇನೂ ಅಲ್ಲ. ಹಿಂದಿನಿಂದಲೂ ಬಂದಿದೆ. ಮುಂದೆಯೂ ಇರತಕ್ಕದ್ದು. ನಾಳೆ ಕಮ್ಯೂನಿಸ್ಟ್ ಸರಕಾರ ಬಂದಾಗಲೂ ಇರುವುದಿಲ್ಲವೆಂದು ಹೇಳುವಂತಿಲ್ಲ. ಎಲ್ಲರೂ ಹೇಳುತ್ತಿರುವುದು ಒಂದೇ ರೀತಿಯಾದ ಅಭಿಪ್ರಾಯವಾಗಿದೆ. ಇದನ್ನು ಪೂರ್ತಿಯಾಗಿ ತೊಡೆದು ಹಾಕಲಿಕ್ಕೆ ಒಂದು ರೀತಿಯಾದ all parties endeavour ಇಂದ ಸಾಧ್ಯವೇ ಹೊರತು ಬೇರಾವ ಮಾರ್ಗವೂ ಇಲ್ಲ. ಮಾನ್ಯ ಶ್ರೀ ಶ್ರೀನಿವಾಸಶೆಟ್ಟರವರೂ ಕರಪ್ಷನ್ನನ್ನು ನಿರ್ಮೂಲಮಾಡುವುದಕ್ಕೆ ಆರೀತಿ ಮಾಡಿದರೆ ಸಾಧ್ಯ ಎಂದ ಹೇಳಿದ್ದಾರೆ; ಇದರಲ್ಲಿ ತಪ್ಪೇನಿದೆ? ನಮ್ಮಲ್ಲಿರುವ ಮೆಷಿನರಿಯಲ್ಲಿ weakness ಇದೆ ಎನ್ನುವುದನೆಲ್ಲ ನೋಡಿ ಸರಿಪಡಿಸದೇ ಹೋದರೆ ಇದನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನೊಂದು ಮುಖ್ಯವಿಷಯ ಇದರಲ್ಲಿದೆ. ಅದೇನೆಂದರೆ, In an inflationary economy corruption will be more. ಹೀಗೆ ಇನ್‌ಫ್ಲೇಷನ್ ಮಾಡುವುದರಿಂದ ವ್ಯಾಪಾರಸ್ಥರು ಒಂದು ವರ್ಷದಲ್ಲೇ ಸುಮಾರು ಹತ್ತಾರುಲಕ್ಷ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಇದನ್ನು ತಡೆಗಟ್ಟಲು ದೊಡ್ಡ ಅಧಿಕಾರಿಗಳು ಬೆಳಗಿನಿಂದ ಸಂಜೆಯವರೆಗೆ ದುಡಿದರೂ ಆ ಅಧಿಕಾರಿಗಳಾಗಲೀ, ಮಂತ್ರಿಗಳಾಗಲೀ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಕರಪ್ಷನ್ನು ಹೆಚ್ಚಾಗಿದೆ ಎಂದು ಹೇಳುವಂತೆ ಅದನ್ನು ನಿರ್ಮೂಲ ಮಾಡಲು ಸರಿಯಾದ ಮತ್ತು ಸೂಕ್ತವಾದ ಕಾರ್ಯಕ್ರಮವೊಂದನ್ನು ಇಡಬೇಕಾಗಿತ್ತು.

ಇದನ್ನು ಗೋರ್‌ವಾಲಾರವರು point out ಮಾಡಿದರೆ ಅದು ಸರಿಯಲ್ಲ, ಅದಕ್ಕೆ ಸಾಕಷ್ಟು evidence ಇಲ್ಲವೆಂದು ಹೇಳಿದರೆ, ಹೇಗೆತಾನೆ ಸರಿ !

SRI H. M. CHANNABASAPPA.—It is a commonplace suggestion. It does not require Sri Gorwala to say that.

ಶ್ರೀ ಎಂ.ಸಿ. ನರಸಿಂಹನ್.-Commonplace suggestions ಎಂದು ತಾವೇನೋ ಹೇಳುತ್ತೀರಿ. ಅದರೆ ಹಲವಾರು ಕಾಲದ ಅನುಭವವುಳ್ಳ ಶ್ರೀಮಾನ್ ಹನುಮಂತಯ್ಯನವರು ಹಿಂದೆ ಮಂತ್ರಿಮಂಡಲದಲ್ಲಿದ್ದವರು. ಮುಂದೆ ಅವರೇ ಮಂತ್ರಿಯಾಗುವ danger ಸಹ ಇದೆ. 'Danger' ಎಂದರೆ ಏನೂ ತಪ್ಪುಅರ್ಥದಲ್ಲಿ ಹೇಳುವುದಿಲ್ಲ. ಏಕೆಂದರೆ, ಅವರೂ ದಕ್ಷರಾದ ಆಡಳಿತಗಾರರೇ. ಆದರೆ, ಈ ಮಂತ್ರಿಮಂಡಲ ಈಗ ತಾನೇ ಬಂದಿದೆ. ಆದರೆ ಅದೆಲ್ಲ ಹೊರಟುಹೋಗಬೇಕಾಗುತದೋ ಎಂದು danger ಇದೆಯೆಂದು ಹೇಳುತ್ತಿದ್ದೇನೆ ಅಷ್ಟೆ. ನನಗೇನೋ ಇಬ್ಬರೂ ಸ್ನೇಹಿತರೇ. ಏಕೋ, ಈಚೆಗೆ, ಹನುಮಂತಯ್ಯನವರು ನನ್ನ ಸ್ನೇಹವನ್ನು ಅಷ್ಟಾಗಿ ಅಪೇಕ್ಷಿಸುತ್ತಿಲ್ಲವೆಂದು ನನಗೆ ತೋರುತ್ತಿದೆ. He does not want to claim me as a friend.

Sri K. HANUMANTHAIYA.—There is no question of friendship being jeopardised. It is only political difference.

ಶ್ರೀ ಎಂ. ಸಿ. ನರಸಿಂಹನ್.—ಇಲ್ಲಿ ಕೆಲವು ಸಲಹೆಗಳಿವೆ. ಆಡಳಿತಕ್ಕೆ ಸಂಬಂಧಪಟ್ಟ ವಿಚಾರ ಇದು. ನಾನು ಅಷ್ಟೇನೂ ಆಡಳಿತಗಾರನಲ್ಲ. ಆದರೂ ಒಂದು ವಿಷಯಮಾತ್ರ ನಾನು ಹೇಳಬಯಸುತ್ತೇನೆ. ನಾನು ಹಲವಾರು ವರದಿಗಳು ಈ ಸರ್ಕಾರ ಬಂದಾಗಿನಿಂದಲೂ, 1948ನೆಯ ಇಸವಿಯಿಂದಲೂ ಬರುತ್ತಿರುವುದನ್ನು ನೋಡಿದ್ದೇನೆ. ಗೋರವಾಲ ತಯಾರು ಮಾಡಿದ್ದಾರೆ. ಇಂಡಿಯಾ ಸರ್ಕಾರದವರೂ ಕೂಡ ಕೆಲವನ್ನು ತಯಾರ ಮಾಡಿದ್ದಾರೆ. ಪಂಚವಾರ್ಷಿಕ ಯೋಜನೆಯೂ ಹಾಗೆಯೇ ಮಾಡಿದ್ದಾಗಿದೆ. ಇವುಗಳನ್ನು ಯಾವುದನ್ನೇ ನೋಡಲಿ, ಯಾವುದೊಂದು ಆಡಳಿತ ಕ್ರಮ ಜಾರಿ ಮಾಡುವುದೇ ಆಗಲಿ, ಸುಧಾರಣೆಯೇ ಆಗಲಿ, ಅದಕ್ಕೆ ಪೂರ್ತಿ trial ಕೊಡಬೇಕೆಂಬುದನ್ನು ಯಾರೂ ಪರಿಗಣಿಸಿಲ್ಲವೆಂದು ಕಾಣುತ್ತದೆ. It must be given the fullest trial. ಹೀಗೆ ಮಾಡಿದರೇನೇ ಅದರ ಪೂರ್ಣ ಪ್ರಯೋಜನದ ಅರಿವು ಉಂಟಾದೀತು. ಶ್ರೀಮಾನ್ ಹನುಮಂತಯ್ಯನವರು ಇವೆಲ್ಲಾ ಹಳೆಯವು ಎಂದು ಹೇಳಿದುದರ ಅರ್ಥವೇನು? ಕ್ರಮವನ್ನು ಅನುಸರಿಸಿದರೆ ಏನೂ ಪ್ರಯೋಜನವಿಲ್ಲವೆಂದು ಅರ್ಥವೇ? ಅಥವಾ ಶ್ರೀಮಾನ್ ಮಲ್ಲಾರಾಧ್ಯರೊಡನೆ ಸೇರಿಕೊಂಡು ಹಳೆಯ ಪದ್ಧತಿಯಲ್ಲವೂ ಚೆನ್ನಾಗಿರುತ್ತದೆಂದು ಅಭಿಪ್ರಾಯ ಪಡುತ್ತಾರೆಯೇ? ಅವರ ಉದ್ದೇಶವೇನೆಂಬುದು ಸ್ಪಷ್ಟವಾಗಲಿಲ್ಲ. It must be given full trial. It may be a new system.

Sri K. HANUMANTHAIYA.—The Hon'ble Member must remember that all the suggestions are being worked in Government. It is not as though we have woken up to see them for the first time.

ಶ್ರೀ ಎಂ. ಸಿ ನರಸಿಂಹನ್.—ಇಂಥಾದ್ದು ಒಂದು ಸೂಕ್ತವಾದ ಕ್ರಮವೆಂದು ಯಾವದನ್ನೇ ಆದರೂ ಸಂಪೂರ್ಣವಾಗಿ ಜಾರಿಗೆ ಕೊಟ್ಟಿದೆಯೇ? ಆಗಾಗ್ಗೆ ಅಡ್ಡಗೋಡೆಯ ಮೇಲೆ ದೀಪ ಇಟ್ಟಹಾಗೆ ಕ್ರಮವನ್ನು ಅನುಸರಿಸುತ್ತಿದ್ದೀರಿ. ಇಲ್ಲಿಯ ವರೆಗೆ ಹಲವಾರು ವರದಿಗಳನ್ನು ತಾವು ತರಿಸಿದ್ದೀರಿ. ನೋಡಿದರೆ, ಅದರಂತೆ ಎಲ್ಲ ಮಾಡುತ್ತಾರೋ ಏನೋ ಒಂದೂ ಗೊತ್ತಾಗುವುದಿಲ್ಲ. ಈಗ ಗೋರವಾಲರವರು ಕೊಟ್ಟಿರುವ ಸಲಹೆಗಳೂ ವಾಸ್ತವಿಕವಾಗಿವೆ. ಇದಕ್ಕೊಂದು complete trial ಕೊಡುವ ಯೋಚನೆಯಾದರೂ ಇದೆಯೇ? ಮೈಸೂರು ಸೆಕ್ರೆಟೇರಿಯಟ್ಟಿನಲ್ಲಿ ಈಗ ಏನಾಗಿದೆಯೆಂದರೆ,—ಹಿಂದೆ ಮೈಸೂರಿನಲ್ಲಿ ಒಂದು ಪದ್ಧತಿ, ಒಂದು ವ್ಯವಸ್ಥೆ ಇತ್ತು; ಈಗ integration ಆದಮೇಲೆ ಹೊಸ ಹೊಸ ವ್ಯವಸ್ಥೆಗಳು ಬಂದುವು. ಬೊಂಬಾಯಿನದೊಂದು ಪದ್ಧತಿ, ಮದ್ರಾಸಿನದೊಂದು ಪದ್ಧತಿ, ಕೊಡಗಿನದೊಂದು ಪದ್ಧತಿ. ಇವುಗಳೆಲ್ಲವನ್ನೂ ಸಮೀಕರಣಮಾಡುವ ಸಂದರ್ಭದಲ್ಲಿ ಕೆಲವು ಗೊಂದಲಗಳಿಗೆ ಅವಕಾಶವಾಗಿದೆಯೆಂದು ಕಂಡುಬಂದಿದೆ. ಹೀಗಿರುವಲ್ಲಿ, ಗೋರವಾಲ ರಿಪೋರ್ಟಿನ ಒಂದು ದೊಡ್ಡ ಲೋಪವೆಂದರೆ, ಹಳೆಯ ಮೈಸೂರಿನ ಪದ್ಧತಿಗೂ ಹೊಸ ಮೈಸೂರಿನ ಪದ್ಧತಿಗೂ ಇದ್ದ ವ್ಯತ್ಯಾಸವನ್ನು ಯಾವರೀತಿ ಸುಧಾರಣೆ ಮಾಡಬೇಕೆಂಬುದನ್ನು ಹೇಳಿಲ್ಲ. ಬೊಂಬಾಯಿನಲ್ಲಿರುವ ಪದ್ಧತಿ ಹೇಗಿದೆ, ಮದ್ರಾಸಿನಲ್ಲಿರುವ ಪದ್ಧತಿ ಹೇಗಿದೆ, ಮೈಸೂರಿನಲ್ಲಿ ಹೇಗಿದೆ—ಎಂದು ತುಲನೆ ಮಾಡಿ ಹೇಳುವುದಕ್ಕೆ ಈ ವರದಿಯಿಂದ ಸಾಧ್ಯವಿಲ್ಲ. ಆದ್ದರಿಂದ, ಏನುಮಾಡುವುದಕ್ಕೆಂದು ಈಗಾಗಲೇ ಸರ್ಕಾರದವರು ಅವರು ಹೇಳಿರುವ ಹಲವಾರು ಶಿಫಾರಸ್ಸುಗಳನ್ನು ಒಪ್ಪಿಕೊಂಡಿದ್ದಾರೆ? ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡುವ ಪರಿಸ್ಥಿತಿಯಿದೆಯೇ? ಏಕೆಂದರೆ ಬದಲಾವಣೆಯಾದರೆ, ಕೆಲಸದಲ್ಲಿ confusion ಆಗುತ್ತದೆ; ಮತ್ತೆ ತಡಕ್ಕೆ ಕಾರಣವಾಗುತ್ತದೆ. ಒಂದು ಪ್ರಯೋಗವೇನಾದರೂ ಹೊಸದಾಗಿ ಮಾಡಬೇಕಾದಲ್ಲಿ ಅದರಿಂದ ಪ್ರಯೋಜನವಾಗುತ್ತದೆಯೇ ಇಲ್ಲವೇ ಎಂದು ಕಾದುನೋಡಬೇಕು.

ಇನ್ನೊಂದು ವಿಷಯ. ಗೋರವಾಲರವರಿಗೆ ಇದೇಕೆ ಹೊಳೆಯಲಿಲ್ಲವೋ ಗೊತ್ತಿಲ್ಲ. ಸೆಕ್ರೆಟೇರಿಯಟ್ ಮತ್ತು ಇತರ ಹುದ್ದೆಗಳ ವಿಚಾರ ಮಾತನಾಡುತ್ತಾ, ಈ ಸರ್ಕಾರದಲ್ಲಿ ಹುದ್ದೆಗಳು ಜಾಸ್ತಿಯಾಗುತ್ತಿವೆ. ಐದಾರು ವರ್ಷಗಳ ಹಿಂದೆ ಇದ್ದ staff ಎಷ್ಟಿತ್ತು ಎಂಬುದನ್ನು ನೋಡಿ. ಎರಡು ವರ್ಷದಿಂದೀಚೆಗೆ ಎಷ್ಟಿದೆ ನೋಡಿ. ವರ್ಷೆವರ್ಷೆ staffನ ಸಂಖ್ಯೆ geometric progression ಪ್ರಕಾರ ಹೆಚ್ಚುತ್ತಿರುವುದು ಕಂಡುಬರುತ್ತದೆ. ಈ ವಿಚಾರದಲ್ಲಿ ಪಾರ್ಕಿನ್ಸನ್ ಎಂಬ ಆಂಗ್ಲೇಯನು ಪ್ರತಿಪಾದಿಸಿರುವ Parkinson's Law ಎಂಬುದೇ ಇದೆ. ಈ 'ಲಾ' ಪ್ರಕಾರ ಹುದ್ದೆಗಳು ಹೆಚ್ಚಾಗಿಕೊಂಡೇ ಹೋಗುತ್ತವೆ. ಯಾವುದಾದರೂ ಒಂದು ಹೊಸ ಇಲಾಖೆ ತೆರೆದರೆ, ಅದಕ್ಕಾಗಿ ಹೊಸ ಸಿಬ್ಬಂದಿ ನೇಮಿಸುವುದೇನೋ ಸರಿ. Integration ಆದಾಗ ಅದಕ್ಕಾಗಿ ಒಂದು ಇಲಾಖೆ ತೆರೆದರು. ಈಗ integration ಎಲ್ಲವೂ ಮುಗಿದುಹೋಗಿದೆ; Disintegration ಆದರೂ, Integrationಗಾಗಿ ಹೊಸ ಇಲಾಖೆಯೆಂದು ಮಾಡಿ ಎಷ್ಟು ಸಿಬ್ಬಂದಿ ನೇಮಿಸಿದರೋ ಈಗ ಅದಕ್ಕಿಂತ ಹೆಚ್ಚಿಗೆಯೇ ಆಗಿದೆ. ಮೊದಲು ಇದ್ದುದಕ್ಕಿಂತ Query ಜಾಸ್ತಿ ಜಾಸ್ತಿಯಾಗಿವೆ; Enquiry ಮಾಡುವುದೂ ಜಾಸ್ತಿಯಾಗಿರುತ್ತದೆ. ಹೀಗಾಗಿ ಪಾರ್ಕಿನ್ಸನ್ ಲಾ ಪ್ರಕಾರ ಸಿಬ್ಬಂದಿ multiply ಆಗುವ ಹವ್ಯಾಸ ಇದೆ. ಈ ವಿಚಾರದಲ್ಲಿ ಗೋರವಾಲಾರವರು ಏನಾದರೂ ಸಲಹೆ ಮಾಡಿದ್ದಾರೆಯೇ ಎಂದರೆ ಏನೂ ಮಾಡಿದಂತೆ ಕಾಣುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಈಗ ಯೋಜನೆಗಳನ್ನು ನಡೆಸುತ್ತಿರುವಲ್ಲಿ, ಯೋಜನೆಯು ಅಂದಾಜು 25 ಕೋಟಿ ರೂಪಾಯಿಗಳಿದ್ದಾಗ ಎಷ್ಟು ಸಿಬ್ಬಂದಿಯಿತ್ತೋ, ಅಷ್ಟೇ ಸಿಬ್ಬಂದಿ, 35 ಕೋಟಿ ರೂಪಾಯಿಗಳಷ್ಟು ಜಾಸ್ತಿಯಾದಾಗಲೂ ಇರಬೇಕೇ? Establishment is part of the plan. ಸುಮ್ಮನೆ multiply ಆಗುತ್ತದೆಂದು ಹೇಳುವುದಕ್ಕೆ ಬದಲಾಗಿ proportionate ಆಗಿ ಮಾಡಬೇಕೆಂದು ಹೇಳಿ.

ಶ್ರೀ ಎಂ. ಸಿ. ನರಸಿಂಹನ್.—ಬ್ರಿಟನ್ನಿನಲ್ಲಿ ಯುದ್ಧಕಾಲದಲ್ಲಿ ನೌಕೆಯ ಅಡ್ಮಿರಾಲಿಟಿ ಶಾಖೆಯಲ್ಲಿ ಎಷ್ಟು ಸಿಬ್ಬಂದಿಯಿತ್ತೋ ಅದು ಆ ನೌಕಾಶಾಖೆಯನ್ನು ಬರ್ತರ್ಫ್ ಮಾಡಿದಮೇಲೆ ಇನ್ನೂ ಜಾಸ್ತಿಯೇ ಆಗಿದೆಯೆಂದು ಉದಹರಿಸಿ ಪಾರ್ಕಿನ್ಸನ್‌ರವರು ತಮ್ಮ 'ಲಾ'ವನ್ನು ಸಮರ್ಥಿಸಿದ್ದಾರೆ. ನಮ್ಮಲ್ಲಿಯೂ ಹೀಗೆಯೇ ಆಗಿದೆಯೆಂದು ನಾನು ಅಂಕಿ ಅಂಶಗಳನ್ನು ಕೊಡಬಲ್ಲೆ. ಇದಕ್ಕೆ ಕಾರಣ, ಅವರು ಹೇಳಿರುವುದು,

every officer wants to multiply his subordinates. ಇದು ಅಧಿಕಾರಿಗಳಿಗೆ ಸ್ವಾಭಾವಿಕವಾಗಿ ಬಂದಿದೆ. ಆದ್ದರಿಂದ ಪ್ಲಾನಿನ ಅಂದಾಜು ಜಾಸ್ತಿಯಾದರೂ, ಪ್ಲಾನಿನ ಅಂದಾಜಿಗೆ ತಕ್ಕಂತೆ, ಕೆಲಸಕ್ಕೆ ಹೊಂದಿಕೊಂಡು ಸಿಬ್ಬಂದಿಯೂ ಜಾಸ್ತಿಯಾಗಿದೆಯೋ ಎಂಬುದನ್ನು ಪರಿಶೀಲನೆಮಾಡಬೇಕಾದದ್ದು ಅತ್ಯಗತ್ಯ. ಇಲ್ಲಿ ಸೆಕ್ರೆಟೇರಿಯಟ್ಟಿನಲ್ಲಿ Works and Methods Division ಎಂದು ಕೇಂದ್ರ ಸರ್ಕಾರದವರ ಸೂಚನೆಯ ಮೇರೆಗೆ ಮಾಡಿದ್ದಾರೆಂದು ಕೇಳಿದ್ದೇನೆ; ಇವರ ಮುಖ್ಯ ಕರ್ತವ್ಯ work load ನ್ನು assess ಮಾಡಿ ಸಿಬ್ಬಂದಿಗೆ ತಕ್ಕಷ್ಟು ಕೆಲಸವಿದೆಯೋ, ಮತ್ತು Procedure ವಿಷಯದಲ್ಲಿ ಚೀಫ್ ಸೆಕ್ರೆಟರಿಯವರು ಹೇಳಿರುವ Procedure ಪ್ರಕಾರ ಎಲ್ಲಾ ಇಲಾಖೆಯಲ್ಲೂ ಕೆಲಸ ನಡೆಯುತ್ತಿದೆಯೋ ಎಂಬುದನ್ನು ನೋಡಬೇಕು ಎಂದು. ಇದು ಈಗ ಸೆಕ್ರೆಟೇರಿಯಟ್ಟಿನಲ್ಲಿ ಮಾತ್ರ ಇದೆ. ಬೇರೆ ಇಲಾಖೆಗಳಲ್ಲಿ ಇಲ್ಲ. ಈ ಹೊತ್ತು ಪ್ಲಾನಿನ ಕಾಲದಲ್ಲಿ ಪ್ರತಿಯೊಂದು ಇಲಾಖೆಯಲ್ಲೂ ಸಿಬ್ಬಂದಿ multiply ಆಗಿಕೊಂಡು ಹೋಗುತ್ತಿರುವಲ್ಲಿ ಪ್ರತಿಯೊಂದು ಇಲಾಖೆಯಲ್ಲೂ ಇಂಥ ಡಿವಿಜನ್ನನ್ನು ಇಟ್ಟುಕೊಳ್ಳಬೇಕಾದುದು ಅವಶ್ಯಕ. ಈ ವಿಚಾರವನ್ನು ಗೊರ್‌ವಾಲರು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಇನ್ನೊಂದು ವಿಷಯ, delay ಗೆ ಸಂಬಂಧಪಟ್ಟದ್ದು. ಈ ಬಗ್ಗೆ ಗೋರ್‌ವಾಲಾರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

12-30 P.M.

"The Secretariat is a policy making body" ಎಂದು ಹೇಳುತ್ತೇನೆ. ಆದರೆ ಅವರು ಪೂರ್ತಿಕಾಲವನ್ನು ಪಾಲಿಸಿ ಮೇಕಿಂಗ್‌ನಲ್ಲಿಯೇ ಕಳೆಯುತ್ತಾರೆಯೇ? ಅವರಿಗೆ ಸಂಬಂಧವಿಲ್ಲದ ಸಣ್ಣ ಪುಟ್ಟ ಬಾಬಿನಲ್ಲೂ ಸಮಯ ವ್ಯಯವಾಗುತ್ತಿದೆಯೋ ಇಲ್ಲವೇ ಎಂದು ಪರಿಶೀಲನೆ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಸಣ್ಣ ಪುಟ್ಟ ವಿಷಯದಲ್ಲಿ ಕಾಲಕಳೆಯುತ್ತಾರೆ. ಒಂದೆರಡು ಉದಾಹರಣೆಗಳನ್ನು ತೆಗೆದುಕೊಳ್ಳೋಣ. ನಾವು ಮಿನಿಸ್ಟರುಗಳಿಗೆ ಪಿಟಿಷನ್ಸ್ ಕೊಡುತ್ತೇವೆ. ಪಿಟಿಷನ್ಸ್‌ಗಳಿಗೆ ಉತ್ತರ ಬರಬೇಕಾದರೆ ಎಷ್ಟೋ ಕಾಲ ಕಳೆದುಹೋಗುತ್ತದೆ. ಕೆಲವು ಅಧಿಕಾರಿಗಳನ್ನು ವಿಕೇಂದ್ರೀಕರಣ ಮಾಡಿ ತಕ್ಷಣ ಕೇಸಸ್ ಡಿಸ್‌ಪೋಸ್ ಆಫ್ ಮಾಡಬೇಕು.

ಶ್ರೀ ಟಿ. ಮರಿಯಪ್ಪ.—ಬಹಳ ಡೀ ಸೆಂಟ್ರಲೈಜ್ ಆಗುತ್ತಿದೆ. ಪಿಟಿಷನ್ಸ್ ಬಂದದ್ದನ್ನೆಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತೇವೆ.

ಶ್ರೀ ಎಂ. ಸಿ. ನರಸಿಂಹನ್.—ನಾನು ಕೆಲವು ಪಿಟಿಷನ್ಸ್ ಕೊಟ್ಟಿದ್ದೇನೆ. ಎಲ್ಲಿ ವರ್ಗವಾಗಿ ಎಲ್ಲಿ ಹೋಗುತ್ತದೋ? ನಾನು ಅಸೆಂಬ್ಲಿ ಸದಸ್ಯನಾಗಿದ್ದೇನೆ. ಆದರೂ ನನಗೆ ಉತ್ತರ ಬಂದಿಲ್ಲ. ಡೆಮಾಕ್ರಟಿಕ್ ಪ್ರೊಸೀಜರ್‌ನಲ್ಲಿ ಸ್ವಲ್ಪ ಕಾಲವಿಳಂಬ ಆಗುತ್ತದೆ. ಅತರಹ ವಿಪರೀತವಾಗಿ ಅರ್ಜಿಗಳು ಬರುತ್ತದೆ. ಡೆಮಾಕ್ರಟಿಕ್ ಪ್ರೊಸೀಜರ್ ಅನುಸರಿಸಬೇಕು. ಮಿನಿಸ್ಟರು ತಳ್ಳಿ ಬಿಡುವುದಕ್ಕೆ ಆಗುವುದಿಲ್ಲ. ಈ ವಿಷಯದಲ್ಲಿ ಕಾಲ ವಿಳಂಬ ಆಗುತ್ತದೆಯೋ ಎಂದು ನೋಡಬೇಕಾಗಿದೆ. ಕಾಲಹರಣವನ್ನು ಕಡಿಮೆಮಾಡುವುದಕ್ಕಾಗುತ್ತದೆಯೋ ಎಂಬುದನ್ನು ನೋಡಬೇಕು. ಸೆಕ್ರೆಟೇರಿಯಟ್ ಡಿಪಾರ್ಟ್‌ಮೆಂಟಿಗೆ ಹೆಚ್ಚಿಗೆ ಅಧಿಕಾರಕೊಟ್ಟು ವಿಕೇಂದ್ರೀಕರಣ ಆಗಬೇಕು. ಕಾರ್ಮಿಕರ ವಿಷಯ ಹೇಳುತ್ತೇನೆ. ಕನ್‌ಸಿಲಿಯೇಷನ್ ಆಫೀಸರು ರಿಪೋರ್ಟ್ ಕಳುಹಿಸಿದರೆ ಲೇಬರ್ ಕಮೀಷನರ್ ಮೂಲಕ ಬರಬೇಕು. ಅದನ್ನು ಕಾನೂನು ಪ್ರಕಾರ ಸ್ಪಷ್ಟವಾಗಿ ಹೇಳಿಲ್ಲ. ಡಿಪಾರ್ಟ್‌ಮೆಂಟಲ್ ಹೆಡ್ಡಿಗೆ ಟ್ರಿಬ್ಯುನಲಿಗೆ ರೆಫರ್ ಮಾಡುವುದಕ್ಕೆ ಅಧಿಕಾರವಿಲ್ಲ. ಅದನ್ನು ಡಿಲಿಗೇಟ್ ಮಾಡಿದರೂ ತಪ್ಪು ಇಲ್ಲ. ಅನಾವಶ್ಯಕವಾಗಿ ಎರಡು ಮೂರು ತಿಂಗಳು ಕಳೆಯುವುದರಿಂದ ಒಂದು ರೆಫರೆನ್ಸ್ ಟ್ರಿಬ್ಯುನಲ್ಲಿಗೆ ಹೋಗಬೇಕು ಎಂದರೆ ಐದು ಆರು ತಿಂಗಳ ತಡವಾಗುತ್ತದೆ. ಕಮೀಷನರ್ ಆಫ್ ಲೇಬರ್‌ಗೆ ಸಾಕಷ್ಟು ಅಧಿಕಾರವನ್ನು ಕೊಡಲಿಕ್ಕೆ ಸೆಕ್ರೆಟೇರಿಯಟ್‌ನವರು ಹಿಂತೆಗೆಯುವುದರಿಂದ ಈ ರೀತಿ ಆಗುತ್ತದೆ. ಈಗ ಒಂದು ಸುಧಾರಣೆಯನ್ನು ಜಾರಿಗೆ ತಂದರೆ ಒಳ್ಳೆಯದು. ಅದೇನೆಂದರೆ ಡಿಪಾರ್ಟ್‌ಮೆಂಟಲ್ ಹೆಡ್ ಜಾಯಿಂಟ್ ಸೆಕ್ರೆಟರಿ ಆಗಿರಬೇಕು. ಅವರು ಮಂತ್ರಿಗಳನ್ನು ಕಂಡು ಅವರ ಪ್ರಪೋಸಲ್‌ಗೆ ಸ್ಯಾಂಕ್ಷನ್ ತೆಗೆದುಕೊಳ್ಳಬಹುದು. ಆ ರೀತಿ ಮಾಡಬೇಕೆಂದು ಕಾಲೆಂಡ್ ಕಮಿಟಿಯವರು ಶಿಫಾರಸ್ ಮಾಡಿದ್ದಾರೆ. ಅದನ್ನು ಉತ್ತರ ಪ್ರದೇಶದಲ್ಲಿ ಜಾರಿಗೆತಂದಿದ್ದಾರೆಂದು ತಿಳಿದಿದ್ದೇನೆ.

Sri J. B. MALLARADHYA.—That system is not alien to Mysore. In the old days, the Controller of Civil Supplies was also the Secretary to Government. Even now the Additional Development Commissioner is also Secretary, Planning and Development. It has its own virtues and its own disadvantages. He need not quote the United Provinces. That is the set pattern for Mysore administration. Mysore has tried every conceivable system which is conducive to efficient administration.

ಶ್ರೀ ಟಿ. ಮರಿಯಪ್ಪ.—ಯಾವ ಸಿಸ್ಟಮ್‌ನಲ್ಲೂ ಅಬ್ಸಲ್ಯೂಟ್ ವರ್‌ಚ್ಯೂಸ್ ಇಲ್ಲ.

ಶ್ರೀ ಎಂ. ಸಿ. ನರಸಿಂಹನ್.—I agree fully. ಪ್ರತಿಯೊಂದು ಆಡಳಿತ ಕ್ರಮದಲ್ಲೂ ಒಂದಲ್ಲ ಒಂದು ದೋಷ ಇದೆ. ಕೇರಳ ಅಡ್ಮಿನಿಸ್ಟ್ರೇಷನ್ ಕಮಿಟಿಯವರು ಇದನ್ನು ಪರಿಶೀಲನೆಮಾಡಿ ಇದು ಸರಿಯಲ್ಲ ಡೆಲಿಗೇಟ್ ಮಾಡಿದರೆ ಕಷ್ಟವಾಗುತ್ತದೆಂದು ಬೇರೆ ಕೆಲವು ಕ್ರಮಗಳನ್ನು ಸೂಚಿಸಿದ್ದಾರೆ. ಅದೇ ಸರಿ ಇದೇ ಸರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಡೆವಲಪ್‌ಮೆಂಟ್ ಪ್ಲಾನ್ ಎಕ್ಸ್‌ಪಾಂಡ್ ಆಗುತ್ತಿರುವಾಗ ವಿಕೇಂದ್ರೀಕರಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಶ್ರೀ ಮಲ್ಲಾರಾಧ್ಯರು ಹೇಳಿದ್ದು ಸರಿ ಇರಬಹುದು.

Sri T. MARIAPPA.- As you know we have carried out decentralisation to a certain extent. ಮಾಡಿದ್ದೇವೆ. ಅದರಲ್ಲೂ ಎಗ್ಸಿಕ್ಯುಟಿವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರಿಗೆ, ಅಧಿಕಾರವನ್ನು ಡೀ ಸೆಂಟ್ರಲೈಜ್ ಮಾಡಿ very recently we have issued orders.

ಶ್ರೀ ಎಂ. ಸಿ. ನರಸಿಂಹನ್.—ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಮಾಡಿದ್ದೀರಿ. ಅದನ್ನು ಕೇಳಿದ್ದೇನೆ. ನಾನು ಕಾರ್ಮಿಕ ಶಾಖೆಯ ವಿಷಯ ಹೇಳುವೆ. ಅಲ್ಲಿ ಆ ತರಹ ವಿಕೇಂದ್ರೀಕರಣ ಆಗಿಲ್ಲ. ಡಿಪಾರ್ಟ್‌ಮೆಂಟ್ ಹೆಡ್ಡಿನಿಂದ ಏನಾದರೂ ಪ್ರಪೋಜಲ್ಸ್ ಉದ್ಭವಿಸಿದರೆ ಕ್ಲಾರ್ಕಿನಿಂದ ಮೇಲಿನವರಿಗೂ ಎಲ್ಲರೂ ನೋಟ್ ಮಾಡಬೇಕು ಎಂದು ಕ್ರಮ ಇದೆ. ಕ್ಲಾರ್ಕಿನಿಂದ ಹಿಡಿದು ಸೆಕ್ರೆಟರಿಯವರೆಗೂ ನೋಟಿಂಗ್ ಮಾಡುತ್ತಾರೆ. ಆ ಕ್ರಮ ಸರಿಯೇ ಎಂದು ಪರಿಶೀಲನೆ ಮಾಡುವುದು ಅಗತ್ಯ ಎನಿಸುತ್ತದೆ. ಎಲ್ಲ ಹಂತಗಳಲ್ಲಿಯೂ ನೋಟಿಂಗ್ ಏತಕ್ಕೆ ಬೇಕು ? ಆ ತರಹ ಬರತಕ್ಕ ಪ್ರಪೋಸಲ್ಸ್‌ಅನ್ನು ನೇರವಾಗಿ ಸೆಕ್ರೆಟರಿಯವರ ಪರಿಶೀಲನೆಗೆ ಬಿಟ್ಟರೆ ಸ್ವಲ್ಪ ಕಾಲವಿಳಂಬ ಕಡಮೆಯಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಪರಿಶೀಲನೆ ಮಾಡಬೇಕಾದದ್ದು ಅಗತ್ಯ ಎನಿಸುತ್ತದೆ. ಹೀಗೆ ಬೇಕಾದಷ್ಟು ಸಲಹೆ ಇದೆ. ಅದಕ್ಕೆ ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಟ್ರಾನ್ಸ್‌ಫರ್ ವಿಷಯದಲ್ಲಿ ಯಾವುದೋ ಬೇಸಿಸ್ ಇದೆ ಎಂದು ಹೇಳಿದರು. ಅದು ಏನು ಎಂಬುದನ್ನು ಸ್ಪಷ್ಟಪಡಿಸಲಿಲ್ಲ. ಅದನ್ನು ಜವಾಬು ಕೊಡುವಾಗ ಹೇಳುತ್ತಾರೆಂದು ತಿಳಿದುಕೊಂಡಿದ್ದೇನೆ. ನೌಕರರಿಗೆ ತೊಂದರೆಯಾಗಬಾರದು, ಎಫಿಷಿಯೆನ್ಸಿ ಕಾಪಾಡಬೇಕು. ಈ ಎರಡು ದೃಷ್ಟಿಯಿದ್ದರೆ ಒಳ್ಳೆಯದು. ಆ ದೃಷ್ಟಿಯಿಂದ ಕ್ರಮವನ್ನು ಅನುಸರಿಸುತ್ತಿದ್ದಾರೋ ಏನೂ ಗೊತ್ತಿಲ್ಲ. ಪ್ರಮೋಷನ್ಸ್ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈ ವಿಷಯವನ್ನು ಹಲವಾರು ಸಮಿತಿಗಳು ಚರ್ಚೆಮಾಡಿವೆ. ಹಲವಾರು ವಿಷಯಗಳೂ ಕೂಡ ಇದರಲ್ಲಿ ಇವೆ. ನಾನಾದರೂ ಹೇಳುವುದು ಇಷ್ಟು, ಮೆರಿಟ್ ಇರಬೇಕೇ ಅಥವಾ ಸೀನಿಯಾರಿಟಿ ಇರಬೇಕೇ ಎನ್ನುವುದು ಮುಖ್ಯ ಪ್ರಶ್ನೆ.

ಶ್ರೀ ಟಿ. ಮರಿಯಪ್ಪ.—ಆಗಲೇ ರೆಕ್ರೂಟ್‌ಮೆಂಟ್ ರೂಲ್ಸ್ ಪಬ್ಲಿಷ್ ಮಾಡಿದ್ದೇವೆ. In all cases, seniority-*cum*-merit. It is a well understood principle. ಅದನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿಲ್ಲ.

Sri M. C. NARASIMHAN.—Last time you replied that statutory rules were under consideration.

Sri T. MARIAPPA.—The question of reservation is under consideration. ಷೆಡ್ಯೂಲ್ಡ್ ಕಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಎಷ್ಟು ಪರ್ಸೆಂಟೇಜ್ ಮತ್ತು ಇತರ ಬ್ಯಾಕ್‌ವರ್ಡ್ ಕ್ಲಾಸ್ಸಿಗೆ ಏನು ಮಾಡಬೇಕು ಎನ್ನುವುದು ಆಲೋಚನೆಯಲ್ಲಿದೆಯೇ ವಿನಾ promotions ordinarily from any one rank are governed by seniority and merit.

Sri H. M. CHANNABASAPPA.—That is there even from a long time.

Sri T. MARIAPPA.—Is it wise to disturb the healthy principle ?

ಶ್ರೀ ಎಂ. ಸಿ. ನರಸಿಂಹನ್.—ಆಡಳಿತದಲ್ಲಿ ದಕ್ಷತೆ ಹೆಚ್ಚಿಸಬೇಕೆಂಬ ದೃಷ್ಟಿಯಿಂದ ನಾನು ಒಂದು ಸಲಹೆ ಮಾಡಬೇಕೆಂದಿದ್ದೇನೆ. ಇನ್ನು ಮುಂದೆ ಅತ್ಯಂತ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸಮಾಡಬೇಕಾದುದು ಪ್ರತಿಯೊಬ್ಬರ ಕರ್ತವ್ಯ. ಯಾರಾದರೂ ಅತ್ಯಂತ ದಕ್ಷತೆಯಿಂದ ಅಥವಾ ಪ್ರಾಮಾಣಿಕತೆಯಿಂದ ಕೆಲಸಮಾಡಿ ಖರ್ಚನ್ನು ಕಡಮೆಮಾಡುವುದಕ್ಕೆ ಏನಾದರೂ ಶಕ್ತಿ, ಉಪಾಯ ಕಂಡು ಹಿಡಿದಿದ್ದಾರೆಂದರೆ ಅಮೇರಿಕಾದವರು ಎಂದು ಹೇಳಬಹುದು. ಅಲ್ಲಿಯ ಹಾಗೆ ಇಲ್ಲಿಯೂ ಅತ್ಯಂತ ಹೆಚ್ಚಿನ ಪ್ರಾಮಾಣಿಕತೆಯಿಂದ ಕೆಲಸಮಾಡಿ ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕು. ಇಲ್ಲಿ ಏನಾದರೂ ಒಂದು ರಿವಾರ್ಡ್ ಕೊಡುವ ಕ್ರಮವನ್ನು ಜಾರಿಗೆ ತರಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ಬೆಸ್ಟ್ ಮತ್ತು ಎಫಿಷಿಯೆಂಟ್ ವರ್ಕ್ ಇದ್ದರೆ ಅವರಿಂದ ಆಡಳಿತಕ್ಕೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಹಣಕಾಸಿನ ಸಚಿವರಿಗೆ ನಾನು ಈ ಸಲಹೆ ಕೊಡುತ್ತಿದ್ದೇನೆ. ಇನ್ನು ಹೆಚ್ಚು ಕಾಲ ತೆಗೆದುಕೊಳ್ಳದೆ ಇನ್ನೊಂದು ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ.—ನನ್ನಮೇಲೆ ಏತಕ್ಕೆ ಕಣ್ಣು ?

ಶ್ರೀ ಎಂ. ಸಿ. ನರಸಿಂಹನ್.—ನೀವು ಬಹಳ ಬುದ್ಧಿವಂತರು. ನಿಮ್ಮ ಮೇಲೆ ಕಣ್ಣು ಮಾಡಿ ನಾವೇನು ಬದುಕಬೇಕೇ ?

ಇನ್ನು ಸಾರ್ವಜನಿಕರ ಸಾಲದ ವಿಷಯ. ಆ ವಿಷಯದಲ್ಲಿ ಗೋರ್ವಾಲ ಅವರು ಚೆನ್ನಾಗಿ ಹೇಳಿದ್ದಾರೆ. ಸಾಲದ ಪ್ರಮಾಣ ಜಾಸ್ತಿಯಾಗುತ್ತಿದೆ; ಇನ್ನೂ ಸಾಲದ ಪ್ರಮಾಣ ಜಾಸ್ತಿಯಾಗಿ ಮುಂದಿನ ವರ್ಷದಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿ ಕೆಟ್ಟುಹೋಗಬಹುದೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ಆ ವಿಷಯದಲ್ಲಿ ಹಲವಾರು ಸದಸ್ಯರುಗಳು ಈಗಾಗಲೇ ಮಾತನಾಡಿದ್ದಾರೆ. ಅದನ್ನು ನಾನು ಪುನಃ ಒತ್ತಿ ಹೇಳಬೇಕಾದಂಥ ಅಗತ್ಯವಿಲ್ಲ. ಈ ವರ್ಷ ಬಡ್ಡಿ ಎಷ್ಟು ಕೊಡುತ್ತಿದ್ದೀರಿ ? ಮಾಧವರಾವ್ ಕಮಿಟಿಯವರು ನೆಟ್ ಡೆಟ್ ಸರ್ವಿಸ್ ಚಾರ್ಜಸ್ ನಾರ್ಮಲ್ ರೆವಿನ್ಯೂಗಿಂತ ಶೇಕಡ ಹತ್ತಕ್ಕಿಂತ ಹೆಚ್ಚಾಗಬಾರದು ಎಂದು ಹೇಳಿದ್ದಾರೆ. ಈಗ ಸಾಲ ಅದಕ್ಕಿಂತ ಹೆಚ್ಚಾಗಿದೆ. ಕಾನ್ಸ್ಟಿಟ್ಯೂಷನ್ ಆರ್ಟಿಕಲ್ 293ರಲ್ಲಿ ಹೇಳಿರುವ ಪ್ರಕಾರ ಈ ಸಾರ್ವಜನಿಕರ ಸಾಲಕ್ಕೆ ಒಂದು ಲಿಮಿಟ್ ಹಾಕುವುದಕ್ಕೆ ಅಧಿಕಾರವಿದೆ. ಆರ್ಟಿಕಲ್ ಬೇಕಾದರೆ ಓದುತ್ತೇನೆ.

ಶ್ರೀ ಟಿ. ಮರಿಯಪ್ಪ.—ಗೊತ್ತಿದೆ.

ಶ್ರೀ ಎಂ. ಸಿ. ನರಸಿಂಹನ್.—ಹಾಗಿದ್ದರೆ ಬೇಡ. ಲೆಜಿಸ್ಲೇಚರಿಗೆ ಸಂಪೂರ್ಣ ಅಧಿಕಾರವಿದೆ. ಸಾರ್ವಜನಿಕರ ಸಾಲದಮೇಲೆ ಸ್ಟೇಟ್ ಲೆಜಿಸ್ಲೇಟರ್ಸ್ ಕ್ರಿಟಿಸೈಜ್ ಮಾಡುವುದಕ್ಕೆ ಅವಕಾಶವಿದೆ.

Sri J. B. MALLARADHYA.—Under the Constitution of India the State Legislature has a right to fix the minimum or maximum amount. During the Budget time they can criticise and prevent the Government from floating a loan.

ಶ್ರೀ ಎಂ. ಸಿ. ನರಸಿಂಹನ್.—292 (1) ಆರ್ಟಿಕಲ್ ಸಹ ಇದೆ. ಅದರಲ್ಲಿ ಅದು ಸ್ಪಷ್ಟವಾಗಿದೆ. ಇದನ್ನು ಲಿಮಿಟ್ ಮಾಡಬೇಕಾದುದು ಅಗತ್ಯವೆಂದು ಹಣಕಾಸಿನ ಸಚಿವರು ಮತ್ತು ಶ್ರೀ ಕೆ. ಸಂತಾನಂ ಅವರು ಸೂಚಿಸಿದ್ದಾರೆ. ಲೆಜಿಸ್ಲೇಟರ್ಸ್ ಕೈಹಾಕುವುದು ಬೇಡ. ಆ ವಿಷಯದಲ್ಲಿ ಅವರಿಗೆ ಅಷ್ಟಾಗಿ ಸಾಕಷ್ಟು ಅವಕಾಶವಿಲ್ಲವೆಂದರೆ ಅದನ್ನು ಬಜೆಟ್ಟಿನಲ್ಲಿಟ್ಟು ಪಾಸ್ ಮಾಡಬಹುದೆಂದಿದೆ.

ಶ್ರೀ ಟಿ. ಮರಿಯಪ್ಪ.—ಬಡ್ಜೆಟ್ಟಿನಲ್ಲಿ ಅದನ್ನು ಪ್ರೊಪೋಸ್ ಮಾಡುವುದರ ಜೊತೆಗೆ ನಾವು ಈಗಾಗಲೇ 550 ಲಕ್ಷ ರೂಪಾಯಿಗಳನ್ನು ಈ ಬಗ್ಗೆ ಒದಗಿಸಿದ್ದೇವೆ. ಉದಾರವಾದ ಮನಸ್ಸಿನಿಂದ ಅದನ್ನು ಒಪ್ಪಿಕೊಂಡು ಬಡ್ಜೆಟ್ಟಿನಲ್ಲಿ ಪಾಸ್ ಮಾಡಿದ್ದೇವೆ.

ಶ್ರೀ ಎಂ. ಸಿ. ನರಸಿಂಹನ್.—ಹತ್ತು ಕೋಟಿ ಎಂದು ಹೇಳಿದರೂ ನಾವೇನೂ ಮಾಡುವುದಕ್ಕಾಗುವುದಿಲ್ಲ. ಅದನ್ನು ಬೇಡ ಎಂದು ಹೇಳುವುದಕ್ಕೆ ಹೇಗಾಗುತ್ತದೆ? ಇವತ್ತಿನವರೆಗೆ ಈ ಬಗ್ಗೆ ನಿಮಗೆ ಯಾವ ಅಧಿಕಾರವೂ ಇಲ್ಲ. 293ನೇ ಆರ್ಟಿಕಲ್ ಪ್ರಕಾರ ನಮ್ಮ ಕಾನೂನುಗಳ ದಾರಿಯನ್ನನುಸರಿಸುವುದು ಸೂಕ್ತ, ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಹಾಗಿದ್ದರೆ ಕ್ಯಾಪಿಟಲ್ ವರ್ಕ್ಸ್‌ಗೆ ಸಾಲವೆತ್ತಬಾರದು ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎಂ. ಸಿ. ನರಸಿಂಹನ್.—ನೀವು ಸಾಲ ತೆಗೆದುಕೊಂಡು ದೊಡ್ಡ ಅಪರಾಧ ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಸಾಲ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಡೆವಲಪ್‌ಮೆಂಟ್ ವರ್ಕ್ಸ್ ಆಗುವುದಿಲ್ಲ. ಬಡ್ಜೆಟ್ಟಿನಲ್ಲಿ ಒಂದು ತತ್ವ ಇದೆ. ಕ್ಯಾಪಿಟಲ್ ವರ್ಕ್ಸ್ ಮತ್ತು ಪ್ರೊಡಕ್ಟಿವ್ ವರ್ಕ್ಸ್‌ಗೆ ಸಾಲ ತೆಗೆದುಕೊಳ್ಳಬೇಕು. ನಾನ್ ಪ್ರೊಡಕ್ಟಿವ್ ವರ್ಕ್ಸ್ ಬೇರೆ. ಒಂದು ಸ್ಕೂಲು ಕಟ್ಟಿದರೆ 26 ಸಾವಿರ ರೂಪಾಯಿಗಳ ಮೇಲೆ ಕ್ಯಾಪಿಟಲ್ ವರ್ಕ್ಸ್‌ಗೆ ಹೋಗುತ್ತವೆ. ಅದನ್ನು ಪ್ರೊಡಕ್ಟಿವ್ ಎಕ್ಸ್‌ಪೆಂಡಿಚರ್ ಎಂದು ಹೇಳುವುದಕ್ಕಾಗುವುದಿಲ್ಲ. ಅಂಥಾದನ್ನೆಲ್ಲಾ ಜನರಲ್ ಬಡ್ಜೆಟ್ಟಿನಲ್ಲಿ ಸೇರಿಸುವುದು ನ್ಯಾಯ. ರೆವಿನ್ಯೂ ಬಡ್ಜೆಟ್ಟಿನೊಳಗೆ ಬರಬೇಕಾದುದು ಸ್ಕೂಲ್‌ಬಿಲ್ಡಿಂಗ್ಸ್ ಮತ್ತು ಇತರ ಗ್ರ್ಯಾಂಡ್ಸ್. ಆ ರೀತಿ ಮಾಡದೆ ಕ್ಯಾಪಿಟಲ್ ಬಡ್ಜೆಟ್ಟಿನೊಳಗೆ ಅದನ್ನು ಟ್ರಾನ್ಸ್‌ಫರ್ ಮಾಡುವುದರಿಂದ ಈ ತರಹ ಪ್ರೊಡಕ್ಟಿವ್ ಎಂಟರ್‌ಪ್ರೈಜಸ್ ಅಲ್ಲದೆ ಇರುವುದಕ್ಕೆ ಹೋಗುತ್ತದೆ. ಸುಮಾರು ಐದು ಕೋಟಿ ರೂಪಾಯಿಗಳ ಸಾಲ ಹೋಗುತ್ತದೆ. ಇಷ್ಟನ್ನು ನಿಜವಾಗಿ ಪ್ರೊಡಕ್ಟಿವ್ ಎಕ್ಸ್‌ಪೆಂಡಿಚರ್ ಎಂದು ಹೇಳುವುದಕ್ಕಾಗುತ್ತದೆಯೇ? ಹಾಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಆ ಐದು ಕೋಟಿ ಎಲ್ಲಾ ಪ್ರೊಡಕ್ಟಿವ್ ಮತ್ತು ಕ್ಯಾಪಿಟಲ್ ವರ್ಕ್ಸ್‌ಗೇ ಹೋಗುತ್ತದೆ. ಅದನ್ನು ರೆಗ್ಯುಲರ್ ರೆವಿನ್ಯೂ ಎಕ್ಸ್‌ಪೆಂಡಿಚರಿಗೆ ತೆಗೆದುಕೊಳ್ಳುವುದಿಲ್ಲ. ಅದರಲ್ಲಿಯೂ ಪ್ರೊಡಕ್ಟಿವ್ವ್ ಮತ್ತು ನಾನ್-ಪ್ರೊಡಕ್ಟಿವ್ ಎಂದು ಬೇರೆ ಬೇರೆ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಡೈರೆಕ್ಟಾಗಿ ಖರ್ಚಾದರೆ ಪ್ರೊಡಕ್ಟಿವ್, ನಾನ್-ಡೈರೆಕ್ಟಾಗಿ ಖರ್ಚಾದರೆ ನಾನ್-ಪ್ರೊಡಕ್ಟಿವ್.

Sri J. B. MALLARADHYA.—Even in regard to capital expenditure there are a few items which are directly non-productive and those which are directly productive.

Sri H. M. CHANNABASAPPA.—What about school buildings? If there is no school building there could be no education and we cannot develop the country.

Sri J. B. MALLARADHYA.—As a matter of fact you cannot treat the capital expenditure as you treat school buildings.

ಶ್ರೀ ಎಂ. ಸಿ. ನರಸಿಂಹನ್.—ಈ ಸಾಲದ ಪರಿಮಿತಿಯನ್ನು ಗೊತ್ತುಮಾಡುವ ಅಧಿಕಾರ ಈ ಸಭೆಗೆ ಇರುವುದರಿಂದ ಆ ವಿಷಯದಲ್ಲಿ ವಿಪುಲವಾಗಿ ಚರ್ಚೆ ಮಾಡಬಹುದು. ಸಾಲಕ್ಕೋಸ್ಕರ ಬಡ್ಡಿ ಕೊಡಬೇಕಾಗುತ್ತದೆ ಎಂದು ತಿಳಿದೂ ತಿಳಿದೂ ನಾವು ಬಡ್ಡಿ ಕೊಡಬೇಕಾಗಿಲ್ಲವೆಂದು ಹೇಳುತ್ತಿದ್ದಾರೆ. ಅದು ಬಹಳ ಶೋಚನೀಯ. ಮಾಧವರಾವ್ ಕಮಿಟಿಯವರು, ಫೈನಾನ್ಸ್ ಕಮಿಷನ್ ಅಧ್ಯಕ್ಷರಾದ ಶ್ರೀ ಕೆ. ಸಂತಾನಂರವರು ಹೇಳಿರುವ ಸಲಹೆಯನ್ನು ನಮ್ಮ ಸರ್ಕಾರದವರು ಏತಕ್ಕೋಸ್ಕರ ಜಾರಿಗೆ ತರಬಾರದು ಎಂದು ಕೇಳುತ್ತೇನೆ. ನನಗಿಂತ ಅವರಲ್ಲಿ ಹೆಚ್ಚು ವಿಶ್ವಾಸವಿದೆ. ಆದ್ದರಿಂದ ಅವರ ಸಲಹೆ ಯಾತಕ್ಕೆ ಜಾರಿಗೆ ತರಕೂಡದು?

ಶ್ರೀ ಟಿ. ಮರಿಯಪ್ಪ.—ವಿಶ್ವಾಸ, ಪ್ರೇಮ ಎಲ್ಲಾ ಒಂದೇ. ಎಲ್ಲಾ ಸಲಹೆಗಳನ್ನೂ ಜಾರಿಗೆ ತರುವುದು ಬೇರೆ. ಈಗಿನ ಸನ್ನಿವೇಶಕ್ಕೆ ಅನುಗುಣವಾಗಿ ಮತ್ತು ತಮಗೆಲ್ಲರಿಗೂ ಅವಶ್ಯಕವಾಗಿ ಬೇಕಾಗುವಂಥದ್ದನ್ನು ಜಾರಿಗೆ ತರಬಹುದು.

ಶ್ರೀ ಎಂ. ಸಿ. ನರಸಿಂಹನ್.—ವಿಧಾನಸೌಧಕ್ಕೆ ಬಾರೋಡ್ ಫಂಡ್ಸ್ ಬೇಕಾಗುತ್ತದೆಂದು ಅವರು ಹೇಳಿದರು.

ಗೋರ್ವಾಲರವರು ಟೆಕ್ನಿಕಲ್ ಆಡಿಟ್ ವಿಷಯ ಹೇಳಿದ್ದಾರೆ. ಮಂಜಪ್ಪನವರು ಉತ್ತರ ಕೊಡುತ್ತಾ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರು, ಆದರೆ 1958-59 ಮತ್ತು 1959-60ರ ಬಡ್ಜೆಟ್ ಮೇಲೆ ಭಾಷಣ ಮಾಡುವಾಗ, ಎರಡು ಸಂದರ್ಭಗಳಲ್ಲಿಯೂ ಕೂಡ ಟೆಕ್ನಿಕಲ್ ಆಡಿಟರುಗಳನ್ನು ಅಪಾಯಿಂಟ್ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

Sri H M. CHANNABASAPPA.—The suggestion of Sri Gorwala that Technical Audit Cell should be appointedwas being examined at various stages and alternative suggestions to meet the requirements were also under examination. Yesterday Sri Kadidal Manjappa said: not that it was rejected, but it was under examination. Even I myself answered in reply to a question the other day that alternative suggestions were being examined. It is not as though whatever Sri Gorwala has stated is simply to be accepted. We have got to examine the suitability of the type of Technical Audit Cell required for our purpose consistent with the situation obtaining in Mysore.

Sri T. MARIAPPA.—Even before Sri Gorwala was appointed we had received some communication from the Centre with regard to the setting up of a Technical Audit Cell. We were examining it and so there is nothing new in what Sri Gorwala has suggested.

Sri M. C. NARASIMHAN.—Sri Kadidal Manjappa definitely said that the recommendation regarding Technical Audit Cell was not accepted.

Sri H. M. CHANNABASAPPA.—Immediately it was corrected and said that it was under examination.

Sri M. C. NARASIMHAN—I will leave it at that. ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟು ಫೈನಾನ್ಸ್ ಡಿಪಾರ್ಟ್‌ಮೆಂಟಿನ ಕೆಳಗೆ ಇರಬೇಕು. ಈ ಶಾಖೆಯನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳುವಾಗ, ಒಂದು ಅಂಶವನ್ನು ಗಮನಕ್ಕೆ ತರುತ್ತೇನೆ. ಈ ಅಂಕಿಅಂಶಗಳ ಶಾಖೆ ಬಹಳ ಮುಖ್ಯವಾದ ಶಾಖೆ ಎಂದು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಹೊಸದಾಗಿ ಹೇಳಬೇಕಾಗಿಲ್ಲ. ಆದರೆ ದಕ್ಷತೆಯುಳ್ಳವರಿಗೆ ಕೆಲಸ ಮಾಡಲು ಸಾಕಷ್ಟು ಸೌಕರ್ಯಗಳಿಲ್ಲ ಎಂದು ಹೇಳಲು ನಾನು ಬಯಸುತ್ತೇನೆ. ಈಗ ಬಾಕಿ ಎಲ್ಲಾ ರಾಜ್ಯಗಳಲ್ಲಿಯೂ ಕೂಡ ಡಿಸ್ಟ್ರಿಕ್ಟ್ ಸ್ಟ್ಯಾಟಿಸ್ಟಿಕ್ಸ್ ಆಫೀಸರುಗಳಾಗಿ ಸ್ಪೆಷಲ್ ಸ್ಟಾಫ್ ಹಾಕುವುದು ವಾಡಿಕೆ. ನಮ್ಮಲ್ಲಿ ಎರಡು ವರ್ಷಗಳಿಂದಲೂ, ಡಿಸ್ಟ್ರಿಕ್ಟ್ ಸ್ಟ್ಯಾಟಿಸ್ಟಿಕಲ್ ಸ್ಟಾಫನ್ನು ಸರಿಯಾಗಿ ವ್ಯವಸ್ಥೆ ಮಾಡಿಲ್ಲ. ಏಕೆ ಮಾಡಿಲ್ಲವೆಂದರೆ ಪಿ.ಎಸ್.ಸಿ.ಯವರು ಲಿಸ್ಟನ್ನು ಫೈನಲೈಸ್ ಮಾಡಿಲ್ಲವೆಂದು ಹೇಳುತ್ತಾರೆ. ಈ ಸ್ಟ್ಯಾಟಿಸ್ಟಿಕ್ ಇಲಾಖೆ ಬಹಳ ಮುಖ್ಯವಾದುದು. ಅದು ನಮ್ಮ ಕಣ್ಣಿದ್ದಂತೆ. ಆ ಇಲಾಖೆ ಸರಿಯಾಗಿಲ್ಲದಿದ್ದರೆ, ಪ್ಲಾನಿಂಗ್ ಮಾಡುವುದಕ್ಕಾಗುವುದಿಲ್ಲ. ಇಂಥ ಮುಖ್ಯವಾದ ಇಲಾಖೆಯಲ್ಲಿ ಪಿ.ಎಸ್.ಸಿ.ಯವರು ಲಿಸ್ಟನ್ನು ರೆಗ್ಯುಲರೈಸ್ ಮಾಡಲಿಲ್ಲವೆಂದು ಆಫೀಸರುಗಳ ನೇಮಕವನ್ನು ಮುಂದೆ ಹಾಕುವುದು ಸರಿಯಲ್ಲ, ಟೆಕ್ನಿಕಲ್ ಪರ್ಸನ್ಸ್ ಇಲ್ಲಿ ಸಿಕ್ಕಲಿಲ್ಲವೆಂಬ ಕಾರಣಗಳನ್ನು ಕೂಡ ಮುಂದೆ ಮಾಡುವುದು ಸರಿಯಲ್ಲ. ಅದಕ್ಕೆ ಬದಲು ಸಾಕಷ್ಟು ಸ್ಟಾಫ್ ಏನು ಬೇಕೋ ಅದನ್ನು ಹೊರಗಡೆಯಿಂದ ತೆಗೆದು ಕೊಂಡರೂ ತಪ್ಪಾಗಲಾರದು. ಇವತ್ತು ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಮಾಡಬೇಕೆಂದು ಹೇಳುತ್ತಿದ್ದೀರಿ. ಅನೇಕ ಕಾಂಗಾರಿಗಳನ್ನು ತೆಗೆದುಕೊಳ್ಳುತ್ತಾ ಇದ್ದೀರಿ. ಈ ಯೋಜನೆಗಳನ್ನು ಸಾಕಷ್ಟು ಅಂಕಿಅಂಶಗಳಿಲ್ಲದೆ ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವೇ ? ಸಾಧ್ಯವಿಲ್ಲ. ಈ ವಿಷಯದಲ್ಲಿ ಸರ್ಕಾರ ಸಾಕಾದಷ್ಟು ಗಮನ ಕೊಟ್ಟಿಲ್ಲ.

ಎಕನಾಮಿಕ್ ರಿಸರ್ಚ್ ಯೂನಿಟ್ ಎಂದ ಒಂದು ಯೂನಿಟ್ ಇರಬೇಕು. ಇದು ಕೇಂದ್ರ ಸರ್ಕಾರದಲ್ಲಿದೆ. ಕ್ಯಾಬಿನೆಟ್ ಸೆಕ್ರೆಟೇರಿಯಟ್ ಲೆವಲ್ಲಿನಲ್ಲಿದೆ. ಇಲ್ಲಿ ಆ ವ್ಯವಸ್ಥೆ ಇದೆಯೋ ಇಲ್ಲವೋ ಗೊತ್ತಿಲ್ಲ. ಮರಿಯಪ್ಪನವರ ಹಿಂದಿನ ಭಾಷಣದಲ್ಲಿ ಎಕನಾಮಿಕ್ ರಿಸರ್ಚ್ ಯೂನಿಟ್ ಇದೆ ಎಂದು ಓದಿದ್ದೆ. ಆದರೆ ಈ ವರ್ಷದ ಅಡ್ರೆಸ್ಸಿನಲ್ಲಿ ಅದರ ವಿಚಾರ ನೋಡಲಿಲ್ಲ. ರಿಸರ್ಚ್ ಇನ್ ಪ್ರಾಕ್ಟೀಸ್, ಕಾರ್ಯರೂಪದಲ್ಲಿ ನೋಡುತ್ತಿಲ್ಲ. ಇಲ್ಲ, ರಿಸರ್ಚನ್ನು ಬೇರೆ ರೀತಿಯಲ್ಲಿ ಮಾಡುತ್ತಾ ಇದ್ದೀರೋ ಏನೋ ಕಾಣೆ. ಇಲ್ಲದೆ ಇದ್ದರೆ, ನಾಲ್ಕಾರು ಜನರು ಕುಳಿತು ಚರ್ಚೆ ಮಾಡಬಹುದು, ಅಷ್ಟೆ. ಒಂದು ಸರಿಯಾದ, ವ್ಯವಸ್ಥಿತವಾದ ರೀತಿಯಲ್ಲಿ ರಿಸರ್ಚ್ ಯೂನಿಟ್ ಇರಬೇಕಾದುದು ಅಗತ್ಯ. ಇತರ ರಾಜ್ಯಗಳಲ್ಲಿ ಇದು ಇದೆ. ನಮ್ಮ ರಾಜ್ಯಕ್ಕಿಂತ ಇತರ ರಾಜ್ಯಗಳು ಮುಂದುವರಿದಿವೆ ; ಮದ್ರಾಸು ಮುಂದುವರಿದಿದೆ. ಅಲ್ಲಿ ಪ್ಲಾನುಗಳನ್ನು ರಚನೆ ಮಾಡಿ ಕೇಂದ್ರ ಸರ್ಕಾರದವರೊಡನೆ ಸರಿಯಾಗಿ ಸಾಬೀತು ಮಾಡುತ್ತಾರೆ. But we are not able to convince the Government of India in many matters. That is our misfortune. ಹನುಮಂತಯ್ಯನವರ ಹಾಗೆ ಸ್ವಲ್ಪ ಧೈರ್ಯವಾಗಿ ಕೇಂದ್ರ ಸರ್ಕಾರದೊಡನೆ ಹೊಡೆದಾಡತಕ್ಕಂಥ ಪ್ರವೃತ್ತಿಯಾದರೂ ಇದ್ದರೆ ಒಳ್ಳೆಯದು. ಕೇಂದ್ರ ಸರ್ಕಾರದವರೇ ಏಕೆ, ಎಲ್ಲರೂ ಮಕ್ಕಳು ಅತ್ತರೆ ಹಾಲು ಕೊಡುತ್ತಾರೆ. ಉಳಿದವರಿಗೆ ಕೊಡುವುದಿಲ್ಲ. ಡಿಮ್ಯಾಂಡ್ ಮಾಡಬೇಕು. ಹನುಮಂತಯ್ಯನವರ ಹಾಗೆ ಡಿಮ್ಯಾಂಡ್ ಮಾಡುವವರಿರಬೇಕು.

ಒಬ್ಬ ಸದಸ್ಯರು.—ಹಾಗಾದರೆ ಅವರು ಬರುವ ಪರಿಸ್ಥಿತಿ ಇರಬೇಕು.

ಶ್ರೀ ಎಂ. ಸಿ. ನರಸಿಂಹನ್.—ಕೊನೆಯದಾಗಿ ಒಂದು ವಿಷಯವನ್ನು ಹೇಳುತ್ತೇನೆ. ಆಡಳಿತ ಶಾಖೆ ಸುಧಾರಣೆ ವಿಷಯದಲ್ಲಿ ಗೋರ್ವಾಲರವರು ಹೇಳಿರ ಸಕ್ಕಂಥ ನಾಲ್ಕಾರು ಅಂಶಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅದನ್ನು ಪ್ರಯೋಗ ಮಾಡಿರಿ ಎಂದು ಹೇಳಿದರೆ, ಶ್ರೀ ಮಲ್ಲಾರಾಧ್ಯರು 'ಸರಿಯಲ್ಲವೆಂದು ಹೇಳುತ್ತಾರೆ.

Sri J. B. MALLARADHYA.—Why does he anticipate my speech ?

ಶ್ರೀ ಎಂ. ಸಿ. ನರಸಿಂಹನ್. ಓಲ್ಡ್ ಮೈಸೂರು ಸಿಸ್ಟಮ್ ಚೆನ್ನಾಗಿದೆ ಎಂದು ನೀವು ಹೇಳಬಹುದು. ಗೋರವಾಲಾರವರು ಅವರ ವರದಿಯಲ್ಲಿ ಮೈಸೂರು ರಾಜ್ಯದ ಆಡಳಿತದ ವಿಚಾರದಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇವತ್ತಿನ ಪ್ರಜಾಪ್ರಭುತ್ವ ಯುಗಕ್ಕೆ ಪ್ಲಾನಿಂಗ್ ಮತ್ತು ಡೆವಲಪ್‌ಮೆಂಟ್ ಬಹಳ ಅವಶ್ಯಕ. ಮಲ್ಲಾರಾಧ್ಯರು ಹಿಂದಿನ ಸಿಸ್ಟಮ್ ಸರಿಯೆಂದು ಹೇಳಬಹುದು. ಇವತ್ತಿನ ಪ್ರಜಾಪ್ರಭುತ್ವ ಯುಗಕ್ಕೆ ಹಿಂದಿನ ಸಿಸ್ಟಮ್ ಸರಿಯಲ್ಲ. ಅದರಲ್ಲಿ ಸುಧಾರಣೆಯಾಗಬೇಕು. ಎಲ್ಲದರಲ್ಲಿಯೂ ಸುಧಾರಣೆ ಇರಬೇಕು. Attitude and approach ಬದಲಾವಣೆಯಾಗಬೇಕು. Officers' attitude to the public, Ministers' attitude to the Secretaries and bureaucracy's to the legislators and the public, ಸುಧಾರಣೆಯಾಗಬೇಕು. ಈ ವಿಷಯಗಳಲ್ಲಿ ಸುಧಾರಣೆ ತರುವುದಕ್ಕೆ ಏನು ಪ್ರಯತ್ನಗಳು ನಡೆಯುತ್ತಿವೆ ? ಮಂಜಪ್ಪನವರೂ ಹೇಳಲಿಲ್ಲ, ಮರಿಯಪ್ಪನವರೂ ಹೇಳಲಿಲ್ಲ, ಅನಂತರ ಹೇಳಬಹುದು. ಇವತ್ತು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಲೆವಲ್ಲಿನಲ್ಲಿ, ಸೆಕ್ರೆಟೇರಿಯಟ್ ಲೆವಲ್ಲಿನಲ್ಲಿ, ಡಿಪಾರ್ಟ್‌ಮೆಂಟಲ್ ಹೆಡ್ಸ್ ಲೆವಲ್ಲಿನಲ್ಲಿ, ಸುಧಾರಣೆಗಳು ಬರಬೇಕು. ಈ ವಿಚಾರದಲ್ಲಿ ಹಲವಾರು ಟೀಕೆಗಳು ಬರಬಹುದು. ಚೀಫ್ ಸೆಕ್ರೆಟರಿಯವರನ್ನು ಹನುಮಂತಯ್ಯನವರು ಕ್ರಿಟಿಸೈಸ್ ಮಾಡುವ ಮಟ್ಟಕ್ಕೆ ಬಂದಿದೆ. ಐ.ಸಿ.ಎಸ್. ಅಧಿಕಾರಿಗಳನ್ನು ಹಲವಾರು ಬಾರಿ ಕ್ರಿಟಿಸೈಸ್ ಮಾಡಿದ್ದಾರೆ.

1 P.M.

ಇದನ್ನು ಮಾಡುವುದರಲ್ಲಿ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ನಾವೀ ದಿವಸ ಈ ಶಾಸನ ಸಭೆಯಲ್ಲಿ ಮಾತನಾಡುತ್ತಿರುವುದೆಲ್ಲ ಶಾಸನ ಸಭೆಗೆ ತದ್ವಿರುದ್ಧವಾಗಿದೆ. ಅಷ್ಟೇ

ಏಕೆ, ಈ ರೀತಿಯಾಗಿ ಅಧಿಕಾರಿಗಳನ್ನು ಟೀಕಿಸುವುದು ಕಾಂಗ್ರೆಸ್ ಪಾರ್ಟಿಯ ಹಾಗೂ ಡೆಮಾಕ್ರೆಟಿಕ್ ತತ್ವಗಳ ಹಾಗೂ ಪಾರ್ಲಿಯಮೆಂಟರಿ ಪ್ರಾಕ್ಟೀಸ್‌ಗಳಿಗೆಲ್ಲ ತದ್ವಿರುದ್ಧವಾಗಿರುತ್ತದೆ. ಈ ದಿವಸ ನಮ್ಮ ಶಾಸನ ಸಭೆಯಲ್ಲಿ ಸರ್ಕಾರಿ ಅಧಿಕಾರಿಗಳನ್ನು ಟೀಕೆ ಮಾಡುತ್ತಿರುವಂತೆ ಇಂಗ್ಲೆಂಡ್, ಅಮೆರಿಕಾ ಇತ್ಯಾದಿ ಪ್ರಜಾಪ್ರಭುತ್ವಾಡಳಿತ ನಡೆಸುತ್ತಿರುವ ಯಾವ ಶಾಸನ ಸಭೆಗಳಲ್ಲೂ ಇಲ್ಲ. ಅದರಲ್ಲೂ ಕಾಂಗ್ರೆಸ್ ಸರ್ಕಾರದವರೇ ಕರೆದ ನೇಮಿಸಿದಂಥ ಒಂದು ಸಮಿತಿಯು ಕೊಟ್ಟಿರತಕ್ಕ ವರದಿಯ ಬಗ್ಗೆ ಚರ್ಚೆ ನಡೆಯುವಾಗ ಆ ವರದಿಯಲ್ಲಿರತಕ್ಕ ವಿಚಾರಗಳನ್ನು ಬಿಟ್ಟು ವರದಿ ಬರೆದಿರತಕ್ಕವರನ್ನು ಹೀಗೆ ಶಾಸನ ಸಭಾ ಸದಸ್ಯರು ಟೀಕಿಸತಕ್ಕದ್ದು ಸರಿಯಾದದ್ದಲ್ಲವೆಂಬುದು ನನ್ನ ಅಭಿಪ್ರಾಯ. ಇನ್ನು ಆಡಳಿತದಲ್ಲಿರತಕ್ಕ ಅಧಿಕಾರಿಗಳನ್ನು ದೂಷಣೆ ಮಾಡುವುದು ಇನ್ನೂ ಸರಿಯಾದದ್ದಲ್ಲ. ಆದರೆ ಶಾಸನ ಸಭಾ ಪಕ್ಷದವರು ಏನಾದರೂ ಒಂದು ಪಾಲಿಸಿಯನ್ನು ಫಾರ್ಮ್ಯುಲೇಟ್ ಮಾಡಿ ಅದನ್ನು ಕಾರ್ಯಾಚರಣೆಗೆ ತರಬೇಕೆಂದು ಅಧಿಕಾರಿಗಳಿಗೊಪ್ಪಿಸಿದ್ದಾಗ ಅದರ ಬಗ್ಗೆ ಅವರೇನಾದರೂ ಅತ್ಯಾಚಾರ ಮಾಡಿದ್ದರೆ ಆಗ ಅಂಥ ವಿಚಾರಗಳ ಬಗ್ಗೆ ಅವರನ್ನು ಜರೆದರೆ ಅದರಲ್ಲಿ ನ್ಯಾಯವಿದೆಯೆಂದು ಹೇಳಬಹುದು. ಆದರೆ ಅಂಥ ಸಂದರ್ಭಗಳಿಲ್ಲದಿದ್ದಾಗ ನಾವು ಹೀಗೆಲ್ಲಾ ಮಾತನಾಡುವುದು ಬಹಳ ದುಬಾರಿಯಾಗಿ ಅವರಿಗೂ ಕೋಪಬರಬಹುದು. ಆದರೆ ಇನ್ನಾದರೂ ನಾವು ಇಂಥ ವಿಚಾರಗಳನ್ನು ಮುಂದಕ್ಕೆ ಇನ್ನೂ ದೂರ ಹೋಗಲು ಖಂಡಿತ ಬಿಡಬಾರದೆಂದು ಹೇಳುತ್ತೇನೆ. ಹೀಗೆ ಶಾಸನ ಸಭೆಗೂ ಮತ್ತು ಅಧಿಕಾರಿಗಳ ವರ್ಗಕ್ಕೂ ನಡುವೆ ಒಂದು ವಿರಸ ಹುಟ್ಟಲು ಅವಕಾಶವನ್ನುಂಟುಮಾಡಬಾರದು. ಆಡಳಿತದ ಸಂಪೂರ್ಣ ಜವಾಬ್ದಾರಿ ಮಂತ್ರಿಮಂಡಲದ ಮೇಲಿದೆ ಎಂದು ಶ್ರೀ ಕೆ. ಹನುಮಂತಯ್ಯನವರು ಹೇಳಿದರು. ಆದರೆ ನನಗೆ ಯಾವ ಮಂತ್ರಿಮಂಡಲದಲ್ಲೂ ಅಂಥ ವ್ಯತ್ಯಾಸವೇನೂ ಕಾಣಲಿಲ್ಲ. ಆಡಳಿತದ ವಿಚಾರದಲ್ಲಿ ಎಲ್ಲಾ ಮಂತ್ರಿಮಂಡಲಗಳೂ ಒಂದೇ ರೀತಿಯಾಗಿದ್ದುವು. ಒಂದು ಮಂತ್ರಿಮಂಡಲಕ್ಕೂ ಇನ್ನೊಂದು ಮಂತ್ರಿಮಂಡಲಕ್ಕೂ ಅಂಥ ಯಾವ ಒಂದು ವ್ಯತ್ಯಾಸವೂ ಇದ್ದ ಹಾಗೆ ನನಗಂತೂ ಕಂಡುಬಂದಿಲ್ಲ. ಆದರೆ ಕೆಲವು ಮಂತ್ರಿಗಳಿಗೆ ಅಷ್ಟು ಧೈರ್ಯವಿಲ್ಲದಿರಬಹುದು, ಅದಕ್ಕಾಗಿ ಅವರು ಮೆದುವು ಶೈಲಿಯಲ್ಲಿ ಮಾತನಾಡಿರಬಹುದು. ಇನ್ನು ಕೆಲವು ಮಂತ್ರಿಗಳು ಸ್ವಲ್ಪ ಜಬರ್‌ದಸ್ತಾಗಿ ಮಾತನಾಡಿರಬಹುದು. ಇಷ್ಟೇ ವ್ಯತ್ಯಾಸ. ಇನ್ನುಳಿದ ನಡವಳಿಕೆಗಳಲ್ಲೆಲ್ಲ ಎಲ್ಲರೂ ಒಂದೇ. ಶ್ರೀ ಹನುಮಂತಯ್ಯನವರಿಗೆ ತಾವು ಸ್ವಲ್ಪ ಜೋರಾಗಿದ್ದರೆ ಅದೊಂದು ತರಹ ಇಂಪ್ರೆಸೀವ್ ಆಗಿರುತ್ತದೆಂದು ಅವರಿಗೆ ತೋಚಿರಬಹುದು. ಆದರೆ ಶ್ರೀ ಜತ್ತಿಯವರಿಗೆ "ಅಂದ್ರಕೂ ಮಂಚೋಡು ಅನಂತಯ್ಯ" ಎನ್ನುವ ಹಾಗೆ ಹೋಗೋಣ ಎನ್ನುವುದು ಅವರ ಅಭಿಪ್ರಾಯವಾಗಿರಬಹುದು. ಇದೂ ಒಂದು ತರಹೆಯಲ್ಲಿ ಅನುಕೂಲಸಿಂಧು ಮನೋಭಾವನೆ. ಯಾರಲ್ಲೂ ವಿರಸ ಬೆಳಸಬೇಕೆಂಬ ಮನೋವೃತ್ತಿ ಶ್ರೀ ಜತ್ತಿಯವರಿಗಿಲ್ಲ. ಒಟ್ಟಿನಲ್ಲಿ ಮಂತ್ರಿಗಳ ಒಂದು ಮುಖ್ಯ ಜವಾಬ್ದಾರಿಯೇನಿದೆಯೆಂದರೆ ಎಲ್ಲಾ ಕಡೆಗಳಲ್ಲೂ ಎಂದರೆ ಸೆಕ್ರೆಟೇರಿಯೆಟ್ ಲೆವಲ್‌ನಲ್ಲೂ ಮತ್ತು ಜಿಲ್ಲಾ ಲೆವಲ್‌ನಲ್ಲೂ ಇರತಕ್ಕ ಅಧಿಕಾರಿಗಳನ್ನು ಅವರು ಒಂದು ಹದ್ದುಬಸ್ತಿನಲ್ಲಿಟ್ಟುಕೊಂಡಿರಬೇಕಾದದ್ದು ಅವರ ಕರ್ತವ್ಯ. ಆದರೆ ನನಗೆ ಇಲ್ಲಿಯವರೆಗೂ ಆ ಚೀಫ್ ಸೆಕ್ರೆಟರಿಗಳು ಯಾರು, ಅವರೆಲ್ಲಿದ್ದಾರೆ ಎನ್ನುವುದೊಂದೂ ಗೊತ್ತಿಲ್ಲ. ನಾನು ಎಂದೂ ಅವರನ್ನು ನೋಡಲು ಹೋಗಿಲ್ಲ. ಆದರೆ ಈ ಸಮಯದಲ್ಲಿ ನಾನೊಂದು ಮಾತನ್ನು ಹೇಳುವುದಾದರೆ—ಎಷ್ಟೋ ಬಾರಿ ನಾವು ಇಲ್ಲಿ ಚರ್ಚೆಯನ್ನು ನಡೆಸುತ್ತಿರುವಾಗ ಬೇಕಾದಷ್ಟು ಆಧಾರವಿಲ್ಲದ ವಿಚಾರಗಳ ಬಗ್ಗೆ ಚರ್ಚೆ ಮಾಡಿರುತ್ತೇವೆ. ಆದರೆ ನಾವೇನಾದರೂ ಅಂಥ ತಪ್ಪುಗಳನ್ನು ಮಾಡಿದ್ದರೆ ಅವುಗಳನ್ನು ತಿದ್ದಿಕೊಳ್ಳಬೇಕು. ಇನ್ನೊಬ್ಬರು ಹೇಳಿದ್ದನ್ನು ಆಗ ಒಪ್ಪಿಕೊಳ್ಳಲೂ ಬೇಕು. ಆದರೆ ಶ್ರೀ ಕೆ. ಹನುಮಂತಯ್ಯನವರು ನಾನು ಕಮ್ಯುನಿಸ್ಟ್ ಪಕ್ಷದ ಸದಸ್ಯನೆಂದು ಆಗಾಗ್ಗೆ ಒಂದು ಆರೋಪಣೆ ಮಾಡಿರಬಹುದು. ಆದರೆ ಅವರ ಆರೋಪಣೆಯಲ್ಲಿ ತಿರುಳೂ ಇಲ್ಲ—ಅದು ಆರೋಪಣೆ ಮಾಡತಕ್ಕ ನಮೂನೆಯೇ ಅಲ್ಲವೆಂದು ಹೇಳಿದರೆ ಸಾಕು. ಆಡಳಿತ ಸಿಬ್ಬಂದಿ ಎಂದರೆ—ಅಧಿಕಾರವರ್ಗ ಮತ್ತು ಶಾಸನ ಸಭೆಗಳ ನಡುವೆ ಒಂದು ವಿರಸ ಹುಟ್ಟಿ ಈ ಎರಡೂ ಪಾಕೀಸ್ತಾನ, ಬರ್ಮಾಗಳಿದ್ದಂತೆ ಇರಬಾರದು. ಅಂಥ ಒಂದು ವಿರಸ ಬಾರದ ರೀತಿಯಲ್ಲಿ ಮಂತ್ರಿಮಂಡಲ ಕೆಲಸ ನಡೆಸಿಕೊಂಡು ಹೋಗತಕ್ಕದ್ದು ಉಚಿತವಾದುದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಅಧ್ಯಕ್ಷರೇ, ನಾವೀದಿವಸ ಈ ಚರ್ಚೆಯನ್ನು ಎಲ್ಲಿಯ ತನಕ ನಡೆಸಬೇಕೆಂಬುದೇ ತಿಳಿಯಲಿಲ್ಲ. ಈಗಾಗಲೆ ಒಂದು ಘಂಟೆ ಆಯಿತು. ಮೂರು ಘಂಟೆಗಳ ತನಕ ಕುಳಿತುಕೊಳ್ಳೋಣವೇ ಹೇಗೆ ಎನ್ನುವುದನ್ನು ತಾವು ತಿಳಿಸಿದ್ದರೆ ಚೆನ್ನಾಗಿತ್ತು. ನನಗೇನೋ ಮೂರು ಘಂಟೆಗಳ ತನಕ ಕೂಡಲು ಒಪ್ಪಿಗೆ ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು-ದಕ್ಷಿಣ).—ನಾವು ಮತ್ತೆ ಇಲ್ಲಿ ಸೇರಿದನಂತರ ಇನ್ನೊಂದು ದಿವಸ ಇದೇ ವಿಷಯದ ಬಗ್ಗೆ ಚರ್ಚೆ ಮಾಡುವುದಾಗಿದ್ದರೆ ಈ ದಿವಸ ಎರಡು ಘಂಟೆಯ ವರೆಗೆ ಕುಳಿತರೆ ಸಾಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಈ ವರದಿಯ ಬಗ್ಗೆ ಮಾತನಾಡತಕ್ಕ ಸದಸ್ಯರು ನಮ್ಮ ಕಡೆ ಇನ್ನೂ ಬಹಳ ಇದ್ದಾರೆ. ನಾವು 14ನೆಯ ತಾರೀಖು ಮತ್ತೆ ಇಲ್ಲಿ ಸೇರುತ್ತೇವೆ. ಆಗ ಒಂದು ದಿವಸವಾದರೂ ಇದನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆ. ಆದ್ದರಿಂದ ಈ ದಿವಸ ಎರಡು ಘಂಟೆಯ ವರೆಗೆ ಸಭೆ ನಡೆಸಿದರೆ ಸಾಕೆಂದು ಕಾಣುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಎರಡು ಘಂಟೆಯ ಮೇಲೆ ಯಾರಿಗೂ ಕುಳಿತಿರಲು ಸಾಧ್ಯವಿಲ್ಲ. ಈಗ ಕೇವಲ 2-3 ಜನರು ಮಾತ್ರ ಮಾತನಾಡಿದ್ದಾರೆ. ಆದ್ದರಿಂದ 14-15ನೆಯ ತಾರೀಖು ಎರಡು ದಿವಸಗಳೂ ಸಹ ಈ ಚರ್ಚೆಯನ್ನು ಮುಂದುವರಿಸಿದರೆ ಒಳ್ಳೆಯದು. ಎಲ್ಲರಿಗೂ ಮಾತನಾಡಲು ಅವಕಾಶವಾಗುತ್ತದೆ.

Sri H. M. CHANNABASAPPA.—So far as Government is concerned, we are agreeable to the suggestion that Hon'ble Members must have reasonable opportunity for debate on the subject and we have no objection for this being taken up after we meet next on the 14th, for half a day or one day or even one and

(SRI H. M. CHANNABASAPPA)

a half days or such time as may be required. All that we should be particular is, every minute that we spend should be well spent and it is for the Speaker to fix such time limit as he deems fit and see that reasonable opportunity is given to all. To-day we will sit up to 2 O'clock and I think that will be sufficient.

Mr. DEPUTY SPEAKER.—Yes, we shall sit up to two O'clock.

Sri L. S. VENKAJI RAO (Basavangudi).—The Minister was pleased to say that further discussion on this Report would be for a day or 1½ days. Let us know definitely the number of days that will be allotted for discussion.

Mr. DEPUTY SPEAKER.—Anyhow, discussion will continue.

Sri H. M. CHANNABASAPPA.—Normally a day will be sufficient and if there are a good number of members who want to express their views on this, it is not the desire of Government to come in the way of their doing so.

Mr. DEPUTY SPEAKER.—That will be decided later on.

*ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಮಾನ್ಯ ಅಧ್ಯಕ್ಷರೇ, ಗೋಪಾಲರವರ ವರದಿಯನ್ನು ಪರಿಶೀಲಿಸುವಾಗ ನಾವು ಒಂದು ವಿಷಯವನ್ನು ಮಾತ್ರ ಪ್ರಸ್ತಾಪಿಸಬೇಕಾಗುತ್ತದೆ. ಏತಕ್ಕೆಂದರೆ, ಗೋಪಾಲರವರು ತಮ್ಮ ವರದಿಯನ್ನು ಯಾವ ಮನೋಭಾವದಿಂದ ಬರೆದರು ಎನ್ನುವ ವಿಷಯವನ್ನು ಅರ್ಥಮಾಡಿ ಕೊಂಡರೆ ಅವರ ವರದಿಯಲ್ಲಿರುವ ವಿಚಾರವನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಆಗುತ್ತದೆ. ಮತ್ತು ಅವರ ಅಭಿಪ್ರಾಯವನ್ನು ಸುಲಭವಾಗಿ ತಿಳಿದುಕೊಳ್ಳುವುದಕ್ಕೆ ಆಗುತ್ತದೆ; ಆ ದೃಷ್ಟಿಯಿಂದ ನೋಡಬೇಕು ಎಂದು ಹೇಳುತ್ತೇನೆ. ಶ್ರೀ ಗೋಪಾಲರವರು ತಮ್ಮ ವರದಿಯನ್ನು ಶುರುಮಾಡುವಾಗಲೇ, ಈಗಾಗಲೇ ನನ್ನ ಸ್ನೇಹಿತರು ಹೇಳಿರುವಂತೆ, ಒಂದು ಮನೋಭಾವವನ್ನು ಬೆಳೆಸಿಕೊಂಡು, ಆ ದೃಷ್ಟಿಕೋಣದಿಂದ ಪ್ರತಿಯೊಂದು ವಿಷಯವನ್ನೂ ಯೋಚನೆಮಾಡಿದ್ದಾರೆ. ಆ ಒಂದು ದೃಷ್ಟಿಕೋಣದಿಂದ ನೋಡಿರುವುದರಿಂದ ಅನೇಕ ಕಡೆಗಳಲ್ಲಿ ಅವರಿಗೆ ತಪ್ಪುಭಾವನೆಗಳು ಬರಲಿಕ್ಕೆ ಅವಕಾಶವಾಗಿದೆ ಎಂದು ಹೇಳುತ್ತೇನೆ. ವಿಧಾನ ಸೌಧದ ವಿಚಾರವನ್ನು ಹೇಳಿಕೆ ಕೊಡುತ್ತಾ he calls it a scandal ಮತ್ತೆ ವಿಧಾನಸೌಧದಲ್ಲಿ ಆಗಿರಬಹುದಾದ ಲೋಪದೋಷಗಳು ಇದ್ದರೆ ಯಾವ ಬಾಬುಗಳಲ್ಲಿ ಅಂಥಾದ್ದು ಆಗಿದೆ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವಿಧಾನಸೌಧದ ವಿಚಾರದಲ್ಲಿ ಹೀಗೆ ಆಯಿತು, ಆದ್ದರಿಂದ ಎಲ್ಲವೂ ಕೂಡ ಅದೇರೀತಿಯಲ್ಲಿ ಏತಕ್ಕೆ ಆಗಿರಕೂಡದು ಎನ್ನುವ ಮನೋಭಾವ ಸರಿಯಲ್ಲ. ವಿಧಾನ ಸೌಧದಲ್ಲಿ ಟೆಕ್ನಿಕಲ್ ಆಸ್ಪೆಕ್ಟ್ ವಿಚಾರದಲ್ಲಿ ತಪ್ಪು ಇದ್ದರೆ, ಆ ವಿಚಾರ ಬೇರೆ. P.W.D. ಎಗ್ಸಿಕ್ಯೂಷನ್ ಭಾಗದಲ್ಲಿ ತಪ್ಪುಗಳು ಇದ್ದರೆ ಆ ವಿಚಾರ ಬೇರೆ. ಪಬ್ಲಿಕ್ ವರ್ಕ್ಸ್ ಇಂಜಿನಿಯರ್ ಸಂಬಂಧಪಟ್ಟ ಹಾಗೆ ಒಂದು ವರದಿಯನ್ನು ನೋಡಬೇಕಾಗಿದೆಯೇ ಹೊರತು "For morale to improve, the cloud must be dissipated" ಎಂದು ಹೇಳುವುದು ಸರಿಯಲ್ಲ. ವಿಧಾನ ಸೌಧದ ವರದಿ ಅಥವಾ ವಿಚಾರಣೆ ಸಮಿತಿಯ ವರದಿಯಿಂದ ಎಲ್ಲವೂ ಕೂಡ ವ ಸಕಾ ದೆ, ಅದನ್ನು ತೆಗೆಯುವತನಕ ಯಾವುದೂ ಉತ್ತಮವಾಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಸರ್ಕಾರ ಯಾವ ನಿಲುವನ್ನು ತಾಳಬೇಕು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಸೂಚನೆಮಾಡುವುದಕ್ಕೆ ಆಗುತ್ತದೆಯೆ? ತಾವು ಆಗಲೇ ಹೇಳಿದ ಹಾಗೆ, ವಿಧಾನ ಸೌಧದ ವಿಷಯ ತೆಗೆದುಕೊಳ್ಳುವುದಾದರೆ, ವರದಿ ಒಂದಲ್ಲ ಒಂದ ರೀತಿಯಿಂದ ಸಭೆಯ ಮುಂದೆ ಬಂದಿದೆ. ಅದನ್ನು ಗಮನದಲ್ಲಿ ಇಟ್ಟುಕೊಳ್ಳಬಹುದಾಗಿತ್ತು. ಅದೂ ಅಲ್ಲದೆ ಎರಡನೆಯ ಭಾಗದಲ್ಲಿ ಏನು ಹೇಳಿದ್ದಾರೋ ಅದು ಇನ್ನೂ ಹೊರಗೆ ಪ್ರಕಟಣೆಗೆ ಬಂದಿಲ್ಲ. ಅದನ್ನು ಅಡ್ಮಿನಿಸ್ಟ್ರೇಟಿವ್ ಎಗ್ಸಾಮಿನೇಷನ್ ಮಾಡಿಸುತ್ತಿದ್ದಾರೆ, ಆದ್ದರಿಂದ ಅದನ್ನು ಹೊರಡಿಸಲಿಕ್ಕೆ ಸಾಧ್ಯವಾಗಿಲ್ಲ. ಆ ಒಂದು ದೃಷ್ಟಿಯಿಂದ ನೋಡಬೇಕು. ಶ್ರೀ ಗೋಪಾಲರಾವರು ಈ ಒಂದರಿಂದಲೇ ಎಲ್ಲಾ ಕೆಟ್ಟಿವೆ ಎಂದು ಹೇಳುವುದು ಸರಿಯಲ್ಲ ಎಂದು ನನ್ನ ಭಾವನೆ. ಆ ಒಂದು ದೃಷ್ಟಿಯಿಂದ ಪ್ರತಿಯೊಂದು ಬಾಬಿನಲ್ಲೂ ಮೈಸೂರಿನ ಆಡಳಿತ ಬಹಳ ಕಡಿಮೆ ದರ್ಜೆಯಲ್ಲಿದೆ ಎಂದು ಹೇಳುತ್ತಾರೆ. ಇನ್ನೂ ಒಂದು ಕಡೆ ಹೇಳುತ್ತಾರೆ, "It is sufficient to say that if the Government of Mysore is not prepared even now to take action, the people of Mysore must give up all hopes of any better, much less an honest, administration." ಜನರು ಹೊರಗೆಡವಬೇಕೆಂದು ಏತಕ್ಕೆ ಹೇಳುವುದಕ್ಕೆ ಹೋದರು ಎಂದು ಕೇಳುತ್ತೇನೆ. ಶ್ರೀ ಗೋಪಾಲರವರು ನಿವೃತ್ತರಾದ ಐ.ಸಿ.ಎಸ್. ಆಫೀಸರು. ನಮ್ಮಲ್ಲಿ ಒಂದು ಮನೋಭಾವ ಹಳೆಯ ಜನರಲ್ಲಿ ಬೆಳೆದು ಬಂದಿರುತ್ತದೆ. ಐ.ಸಿ.ಎಸ್. ಆಫೀಸರು ಮಾಡತಕ್ಕದ್ದು ಸರಿ, ಅವರು ನಿಷ್ಪಕ್ಷಪಾತವಾಗಿರುತ್ತಾರೆ ಎನ್ನುವ ಮನೋಭಾವ, ಪ್ರತೀತಿ ಇದೆ. ಆ ಪ್ರತೀತಿಗೆ ಉಳಿಗಾಲವಿಲ್ಲ ಎಂದು ನನ್ನ ವ್ಯಸನ. ಪ್ರತಿಯೊಂದು ವಿಷಯವನ್ನೂ ತುಲನೆ ಮಾಡಿ ಯಾವುದು ಸರಿ, ಯಾವುದು ತಪ್ಪು ಎಂದು ಹೇಳಬೇಕಾಗಿದೆಯೇ ಹೊರತು, ತಮ್ಮ ಅಭಿಪ್ರಾಯವನ್ನಾಗಲಿ ಬೈಯಾಸ್ಡ್ ಅಭಿಪ್ರಾಯವನ್ನಾಗಲಿ ಕಲರ್ಡ್ ವರ್ಷನ್ ಆಗಲಿ ಕೊಡುವುದು ಸರಿಯಲ್ಲ ಎಂದು ನನ್ನ ಭಾವನೆ. ಈ ವರದಿಯನ್ನು ಓದುವುದರಿಂದ ಅವರ ಮನೋಭಾವ ಹೇಗೆ ಇತ್ತು ಎನ್ನುವುದನ್ನು ಶ್ರೀಮಾನ್ ಹನುಮಂತಯ್ಯನವರು ವಿಶದವಾಗಿ ಹೇಳಿದ್ದಾರೆ; ನಾನು ಹೆಚ್ಚಿಗೆ ಹೇಳುವುದಿಲ್ಲ. ಇನ್ನೊಂದು ಕಡೆ ಕಮ್ಯುನಿಟಿ ಪ್ರಾಜೆಕ್ಟುಗಳು ಮತ್ತು ಎನ್. ಇ. ಎಸ್. ವಿಚಾರ ಹೇಳಿದ್ದಾರೆ. "The most productive side of the movement is the paper side." ಇಂಥಾ ಮನೋಭಾವ ಇರತಕ್ಕ ಜನಗಳಿಂದ ಯಾವ ಒಳ್ಳೆಯ ವರದಿಯನ್ನು ನಿರೀಕ್ಷಿಸುವುದಕ್ಕೆ ಆಗುತ್ತದೆಯೆಂದು ಭಾವನೆ ಬರುತ್ತದೆ.

"Opinion in Mysore is almost unanimous about the failure of the Community Development and Extension Projects." ಎಲ್ಲಿ ಗ್ಯಾಲಪ್‌ಪೋಲ್ ತೆಗೆದುಕೊಂಡರು, ಯಾವಾಗ ವಿಧಾನ ಸಭೆಯ ಅಭಿಪ್ರಾಯ ತೆಗೆದುಕೊಂಡರು ಎಂದು ಗೊತ್ತಾಗುವುದಿಲ್ಲ. The whole conception from top to bottom from first page to the last page ನೋಡಿದರೆ ಇವೊತ್ತಿನ ಅಡ್ಮಿನಿಸ್ಟ್ರೇಷನ್ ಸರಿಯಾಗಿಲ್ಲ ಎಂದು ಹೇಳುವ ಮನೋಭಾವದಿಂದ ರಿಪೋರ್ಟನ್ನು ಬರೆದಿದ್ದಾರೆ ಎಂದು ಕಾಣುತ್ತದೆ. ಅವರು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವು ಸರಿಯಿಲ್ಲ ಎನ್ನುವ ವಾದವನ್ನು ಹೂಡುತ್ತಾ ಇಲ್ಲ. ಅವರ ಜನರಲ್ ಅಪ್ರೋಚ್ ಸರಿಯಾಗಿಲ್ಲ ಎಂದು ಹೇಳುತ್ತೇನೆ. ಅವರು ಹೇಳತಕ್ಕ ಅನೇಕ ಉಪಯುಕ್ತವಾದ ಸಲಹೆಗಳು ಪರಿಶೀಲನೆಗೆ ಯೋಗ್ಯವಾಗಿವೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಗೋರ್ವಾಲಾರವರ ರಿಪೋರ್ಟಿನ ಬಗ್ಗೆ ಬಹಳ ಮಟ್ಟಿಗೆ ಕಾಂಟ್ರವರ್ಸಿ ಬಂದಿದೆ ಎಂದು ನನಗೆ ಈಗ ಶ್ರೀಮಾನ್ ನರಸಿಂಹನ್‌ರವರ ಭಾಷಣ ಆದ ಮೇಲೆ ಅಭಿಪ್ರಾಯ ಬಂತು. ಈ ಸಭೆಯಲ್ಲಿ ಸೆಕ್ರೆಟೇರಿಯಟ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಬಂದಿರಬಹುದಾದ ಕಟುಟೀಕೆಗಳಿಗೆಲ್ಲಾ ಬಹುಶಃ ಗೋರ್ವಾಲ ರಿಪೋರ್ಟ್ ಕಾರಣ ಎಂಬುದು ಶ್ರೀಮಾನ್ ನರಸಿಂಹನ್‌ರವರ ಭಾಷಣದಿಂದ ಗೊತ್ತಾಯಿತು. ಅಸೆಂಬ್ಲಿ ಕನ್‌ವೆನ್‌ಷನ್ ಏನು ಎಂದರೆ ಅಡಿನಿಸ್ಟ್ರೇಷನ್ ಟೀಕೆಮಾಡಬಹುದು, ಆದರೆ ಅಡ್ಮಿನಿಷ್ಟ್ರೇಷನ್‌ನಲ್ಲಿರುವ ಅಧಿಕಾರಿಗಳನ್ನು ವೈಯ್ಯಕ್ತಿಕವಾಗಿ ಟೀಕೆಮಾಡಬಾರದು ಎಂದು ಹೇಳಿದರು. ಆದರೆ ಶ್ರೀಮಾನ್ ಗೋರ್ವಾಲರವರು ಸೆಕ್ರೆಟೇರಿಯಟ್ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನೊಳಗೆ ಅಸೆಂಬ್ಲಿ ಸದಸ್ಯರ ವಿಚಾರವಾಗಿ ಬಹಳ ಲಘುವಾಗಿ ಮಾತನಾಡಿದ್ದಾರೆ. ಅದಕ್ಕೆ ತಮಗೆ ಕೊಟ್ಟ ಸಲಹೆಗಾರರು ಕಾರಣ ಎನ್ನುವ ಭಾವನೆ ಬರುತ್ತದೆ. ಅವರು ನಮ್ಮನ್ನು ಎಂದರಲ್ಲಾ ಎಂದು tit for tat ಎನ್ನುವ ದೃಷ್ಟಿಯಿಂದ ಅವರನ್ನು ಕ್ರಿಟಿಸೈಜ್‌ಮಾಡುತ್ತಿದ್ದೇವೆ ಎಂದು ಭಾಸವಾಗುತ್ತಿತು. ಅದು ಸರಿಯಾದ ಮಾರ್ಗವಲ್ಲ. ಸಿವಿಲ್ ಅಡ್ಮಿನಿಸ್ಟ್ರೇಷನ್ ಮತ್ತು ಸೆಕ್ರೆಟೇರಿಯಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ತಪ್ಪು ಇದ್ದರೆ ತಪ್ಪು ಇದೆ ಎಂದು ಹೇಳುವುದರಲ್ಲಿ ಏನು ತಪ್ಪು ಇಲ್ಲ. ಸೆಕ್ರೆಟೇರಿಯಟ್ ವಿಚಾರದೊಳಗೆ ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಉದಹರಿಸಿ ಹೇಳುವ ಪ್ರಕೃತ ಇಲ್ಲ. ಈ ದಿವಸ ಒಂದೂವರೆ ಗಂಟೆಯಾಗಿದೆ. ಸೆಕ್ರೆಟೇರಿಯಟ್ ವಿಚಾರದೊಳಗೆ ಶ್ರೀಮಾನ್ ಗೋರ್ವಾಲಾ ಅವರು ಒಂದು ವಿಚಾರ ಹೇಳಿದ್ದಾರೆ. ಇವೊತ್ತು ಅನುಸರಿಸುತ್ತಿರುವ ವಿಧಾನವನ್ನು ಸ್ವಲ್ಪ ಬದಲಾವಣೆಮಾಡಬೇಕು ಎಂದು ಹೇಳಿದ್ದಾರೆ. ಅದು ಬಹಳ ಉಪಯುಕ್ತವಾದ ಸಲಹೆ. ಕಾರಣ ಇಷ್ಟು. ಸೆಕ್ರೆಟೇರಿಯಟ್ highly centralised ಅಡ್ಮಿನಿಸ್ಟ್ರೇಷನ್ ಆಗಿದೆ ಎಂಬ ಅಭಿಪ್ರಾಯ ಬಹಳವಾಗಿದೆ. ನನ್ನ ಅಭಿಪ್ರಾಯವೂ ಹಾಗೆಯೇ ಇದೆ. ಅದಷ್ಟು ಮಟ್ಟಿಗೆ ಅಧಿಕಾರ ವಿಕೇಂದ್ರೀಕರಣ ಆಗಬೇಕು. ವಿಕೇಂದ್ರೀಕರಣವಾಗಿ ಕೆಲಸಕಾರ್ಯಗಳನ್ನು ಚುರುಕಿನಿಂದ ಶೀಘ್ರವಾಗಿ ನಡೆಸಬೇಕಾದರೆ ಸ್ಟಾಟಿನಲ್ಲಿರುವ ಮನುಷ್ಯನಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟು ಪ್ರತಿದಿನ ಕೆಲಸ ಸರಿಯಾಗಿ ನಡೆಯುತ್ತಿದೆಯೋ ಇಲ್ಲವೇ ಎಂದು ಉಸ್ತುವಾರಿ ನೋಡಿಕೊಳ್ಳಬೇಕೇ ಹೊರತು ಪ್ರತಿಯೊಂದು ಫೈಲನ್ನೂ ನೋಡಿ ನಾವೇ ಕೆಲಸಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಆ ದೃಷ್ಟಿಯಿಂದ ಶ್ರೀಮಾನ್ ಗೋರ್ವಾಲಾ ಅವರು ಹೇಳಿರತಕ್ಕ ವಿಧಾನವನ್ನು ಅನುಸರಿಸುವುದು ಒಳ್ಳೆಯದು. ಇದನ್ನು ಈಗಾಗಲೇ ಸರ್ಕಾರದವರು ಕೆಲವು ಇಲಾಖೆಗಳಲ್ಲಿ ಅನುಸರಣೆಗೆ ತಂದಿದ್ದೇವೆಂದು ಹೇಳಿದ್ದಾರೆ. ಅದನ್ನು ಮುಂದುವರಿಸುವುದು ಸರಿ ಎಂದು ನನಗೆ ತೋರುತ್ತದೆ. ಏಕೆಂದರೆ Secretariat must be a policy making body and supervising body. ಇಷ್ಟಾಗಬೇಕೇ ಹೊರತು ಪತ್ರಿಯೊಂದನ್ನೂ ಸೆಕ್ರೆಟೇರಿಯಟ್ಟಿನಲ್ಲೇ ನೋಡಬೇಕು, ಎಲ್ಲವನ್ನೂ ಸೆಕ್ರೆಟೇರಿಯಟ್ ಮಟ್ಟದಲ್ಲಿಯೇ ಮಾಡುತ್ತೇನೆ ಎಂದು ಹೇಳುವುದಾದರೆ, Heads of Departments ಇರುವುದರ ಪ್ರಮೇಯವೇನು, ಅವರಿರತಕ್ಕ ಜವಾಬ್ದಾರಿ ಏನು? ಪ್ರತಿಯೊಬ್ಬರೂ ಪೋಸ್ಟಾಫಿಸಿನ ಹಾಗೆ ಕಾಗದಗಳನ್ನು ಮೇಲಕ್ಕೆ ಕಳಿಸುತ್ತಾ ಬಂದರೆ? ಅವರ ಅಭಿಪ್ರಾಯಗಳನ್ನು ತಿಳಿಸದೆ ಇದ್ದರೆ, ಅವರು ಏಕೆ ಇರಬೇಕು? ಈ ರೀತಿ ಆಗಬಾರದು. ಸೆಕ್ರೆಟೇರಿಯಟ್ಟಿನಲ್ಲಿ ಕೆಲಸಮಾಡತಕ್ಕ ಜನರ ಸಂಖ್ಯೆ ಕಡಮೆಯಾಗಬೇಕು. ಅಲ್ಲಿ ಆಫೀಸು ಫೈಲುಗಳು ಬಹಳ ಶೀಘ್ರವಾಗಿ ಹೋಗುವಂತಾಗಬೇಕು. ಗುಮಾಸ್ತೆಯು ಹಾಕುವ ನೋಟ್‌ನಿಂದ ಹಿಡಿದು. . . . .

Some HON'BLE MEMBERS.—It is nearing 1-30. We may adjourn.

Mr. DEPUTY SPEAKER.—It has been decided to sit up to two.

Sri H. M. CHANNABASAPPA.—It is no doubt true that the House decided to sit up to two. But many members have got to make arrangements for leaving this place. The second point is, many members must have been feeling very hungry and the House is growing very thin. In the light of this, the House may be adjourned at 1-30.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ ಸದಸ್ಯರಾದ ಸೂರ್ಯನಾರಾಯಣರಾಯರ ಭಾಷಣ ಇವೊತ್ತೇ ಮುಗಿಯಲಿ ಸ್ವಾಮಿ. ಇನ್ನೊಂದು ದಿನಕ್ಕೆ ಮುಂದುವರಿಸುವುದು ಬೇಡ.

Sri Kadidal MANJAPPA.—I cannot understand some members insisting that the member should conclude his speech now alone. When we are meeting again, why should there be that anxiety? We are going to close the discussion at 1-30 today and we continue on the 15th.

Sri J. B. MALLARADHYA.—We never want to stifle discussion. But we can sit up to two.

Sri Kadidal MANJAPPA.—As my colleague said, some of the members are anxious to leave this place. As we are meeting on the 15th we will

(SRI KADIDAL MANJAPPA)

continue the discussion and there will not be any difficulty.

ಉಪಾಧ್ಯಕ್ಷರು.—ಎರಡುಗಂಟೆಯುವರೆಗೂ ಸಭೆ ಕುಳಿತುಕೊಳ್ಳಬೇಕೆಂದು ತೀರ್ಮಾನವಾಗಿತ್ತು. ಆದರೆ ಈಗ ಮಾನ್ಯ ಸದಸ್ಯರು ಹೊತ್ತಾಯಿತು, ಹಸಿವಾಗಿದೆ, ಜಾಗ್ರತೆ ಏಳಬೇಕೆಂದು ಹೇಳುತ್ತಿರುವುದರಿಂದ ಸಭೆ ಈಗ ಎದ್ದು ಮತ್ತೆ ಹದಿನ್ನೈದನೆಯ ತಾರೀಖು ಸೇರುತ್ತದೆ. ಮಾನ್ಯ ಸದಸ್ಯರಾದ ಶ್ರೀ ಸೂರ್ಯನಾರಾಯಣರಾಯರು ಆದಿನ ತಮ್ಮ ಭಾಷಣವನ್ನು ಮುಂದುವರಿಸಬಹುದು.

Sri B. K. PUTTARAMIYA.—We are meeting on the 14th and not on the 15th according to the programme already settled.

Sri Kadidal MANJAPPA.—If the members are anxious, I do not come in their way.

Mr. DEPUTY SPEAKER.—The House will now adjourn and meet on the 14th inst. at 1 P.M.

The House adjourned at Twenty-five Minutes past One of the Clock to meet again at One of the Clock on Tuesday, the 14th April 1959.

MD 731—GPB—900—19-11-59